ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಚಿಕೆ 7 • ಸಂಪುಟ 5 • ಅಕ್ಟೋಬರ್ 2024 • ಬೆಲೆ ರೂ. 18/–

# ಅಸೀಮಾ

ಕನ್ನಡ ಮಾಸಿಕ

ಕನ್ನಡ ಮಾಸಿಕ

## ಕಾರಣಗಳನ್ನು ಅರಿಯೋಣ

ವಿಶೇಷಾಂಕ




Power of Trust
India's Most Trusted Dhoti Brand
RAMRAJ ©
LITTLE STARS ®
KIDS DHOTIS • SHIRTS
SCAN QR CODE FOR STORE LOCATION
Shop Online @ www.ramrajcotton.in




ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ


ಏನು ನಡೆದರೂ ಸೋತು ಹೋಗದೆ
ಅದಕ್ಕೆ ಕಾರಣಗಳನ್ನು ಹುಡುಕಾಡಿ ಅರಿತು
ಉನ್ನತವಾದ ಜೀವನ ನಡೆಸಲು ದಾರಿ ತೋರಿಸುವ

# ಕಾರಣಗಳನ್ನು ಅರಿಯೋಣ
# ವಿಶೇಷಾಂಕ

ಎನ್ನುವ ಈ ಸುಮಧುರ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

'ನಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದಕ್ಕೂ ಒಂದು ಕಾರಣವಿದೆ' ಎಂಬುದನ್ನು ಅರ್ಥ ಮಾಡಿಕೊಂಡರೆ ಎಂತಹ ಪರಿಸ್ಥಿತಿಯನ್ನೇ ಆಗಲಿ ಸಹಜವಾಗಿ ಎದುರುಗೊಳ್ಳಲು ನಮ್ಮಿಂದ ಸಾಧ್ಯವಾಗುತ್ತದೆ. 'ಇದೇಕೆ?' ಎಂಬ ಪ್ರಶ್ನೆ ಉದ್ಭವಿಸಿದರೆ, ನಾವು ಅದಕ್ಕೆ ಕಾರಣವನ್ನು ಕಂಡುಹಿಡಿಯಬಹುದು. ಆ ಪ್ರಶ್ನೆಯೇ ಉದ್ಭವಿಸದಿದ್ದಾಗ, ಇತರರು ಮಾಡುವುದನ್ನು ನೋಡುವ ಮತ್ತು ಅದೇ ರೀತಿ ಮಾಡುವ 'ಕುರಿಹಿಂಡಿನ ಮನಸ್ಥಿತಿ' ಹೆಚ್ಚಾಗುತ್ತದೆ. ಆಗ ನಾವು, ಇತರರು ಮಾಡುವ ಯಾವುದೋ ಒಂದನ್ನು ಏನೂ ಯೋಚಿಸದೆ ಅದೇ ರೀತಿ ಕಾಪಿ ಮಾಡುವ ಝೆರಾಕ್ಸ್ ಯಂತ್ರಗಳಾಗುತ್ತೇವೆ. ಇದು ನಮಗೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ, ಸಮಾಜಕ್ಕೂ ಒಳ್ಳೆಯದಲ್ಲ.

ಯೂರೋಪ್ ದೇಶಗಳಲ್ಲಿ ಕುರಿ ಸಾಕಾಣಿಕೆ ಒಂದು ಪ್ರಮುಖ ಉದ್ಯಮವಾಗಿದೆ. ಅಲ್ಲಿ ವಿಶಾಲವಾದ ಹುಲ್ಲುಗಾವಲುಗಳಿವೆಯಾದುದರಿಂದ ಅಲ್ಲಿ ಕುರಿ ಸಾಕಾಣಿಕೆಯು ಅಲ್ಲಿನ ಹಳ್ಳಿಗಳಲ್ಲಿ ಮುಖ್ಯ ವೃತ್ತಿಯಾಗಿದೆ.

ಅಲ್ಲಿನ ಬೆಟ್ಟದ ತಪ್ಪಲಿನಲ್ಲಿದ್ದ ಹಳ್ಳಿಯೊಂದರಲ್ಲಿ ಸಾವಿರಾರು ಮೇಕೆಗಳು ಮೇಯುತ್ತಿದ್ದವು. ಹಿಂಡಿನಲ್ಲಿದ್ದ ಮೇಕೆಯೊಂದು ಬೆಟ್ಟ ಹತ್ತಿ ಪಕ್ಕದಲ್ಲಿದ್ದ ಇನ್ನೊಂದು ಬಂಡೆಗೆ ನೆಗೆಯಲು ಯತ್ನಿಸಿತು. ಆದರೆ ಅದಕ್ಕೆ ದೂರವನ್ನು ನಿಖರವಾಗಿ ಊಹಿಸಲು ಸಾಧ್ಯವಾಗದ ಕಾರಣ ಮತ್ತು ಗುರಿಯನ್ನು ಸರಿಯಾಗಿ ತಲುಪಲು ಸಾಧ್ಯವಾಗದ ಕಾರಣ, ಅದು ಬೆಟ್ಟದ ತುದಿಯಿಂದ ಕೆಳಗೆ ಉರುಳಿ ಸಾವನ್ನಪ್ಪಿತು. ಅದನ್ನು ನೋಡುತ್ತಿದ್ದ ಇತರ ಆಡುಗಳೂ ಅದನ್ನೇ ಹಿಂಬಾಲಿಸಿ, ಅದೇ ರೀತಿ ಬೆಟ್ಟದ ಮೇಲಿನಿಂದ ಮತ್ತೊಂದು ಬಂಡೆಗೆ ಜಿಗಿಯಲು ಯತ್ನಿಸಿ ಸಾಲಾಗಿ ಕೆಳಗೆ ಉರುಳಿ ಬಿದ್ದು ಆತ್ಮಹತ್ಯೆ ಮಾಡಿಕೊಂಡವು.



1500ಕ್ಕೂ ಹೆಚ್ಚು ಕುರಿಗಳು ಬೆಟ್ಟದಿಂದ ಉರುಳಿ ಬಿದ್ದು ಹೀಗೆ ಸತ್ತ ಕಾರಣವನ್ನು ಶೋಧಿಸಿದ ತಜ್ಞರು ಅದನ್ನು ಆಧರಿಸಿ 'ಹಿಂಡು ಮನೋಭಾವ' ಎಂಬ ಸಿದ್ಧಾಂತವನ್ನು ರೂಪಿಸಿದರು. ಅದರ ಬಗ್ಗೆ ಮುಂದೆ ಸಾಕಷ್ಟು ಸಂಶೋಧನೆ ಮಾಡಲು ಈ ಘಟನೆ ಮುಖ್ಯ ಕಾರಣವಾಗಿತ್ತು. ಬಹುಪಾಲು ಜನರು ತಮ್ಮ ಜೀವನದಲ್ಲಿ ಅನುಸರಿಸುವ ನಂಬಿಕೆ, ಆಹಾರ, ಉಡುಗೆ ಮತ್ತು ಆಲೋಚನೆಗಳಲ್ಲಿ ಈ ಕುರಿ ಹಿಂಡಿನ ಸಿದ್ಧಾಂತವಿದೆ ಎಂದು ತಜ್ಞರು ಪುರಾವೆಗಳೊಂದಿಗೆ ಸಾಬೀತುಪಡಿಸಿದ್ದಾರೆ.

ನಮ್ಮ ಹಳ್ಳಿಗಳಲ್ಲಿ ಈ ಕುರಿ ಹಿಂಡಿನ ಮನೋಭಾವದ ಬಗ್ಗೆ ಒಂದು ಒಗಟು ರೂಢಿಯಲ್ಲಿ ಇದೆ... ಒಂದು ಕೊಟ್ಟಿಗೆಯಲ್ಲಿ 30 ಮೇಕೆಗಳಿವೆ ಎಂದಿಟ್ಟುಕೊಳ್ಳಿ. ಹಿಂಡಿನಲ್ಲಿ ಒಂದೇ ಒಂದು ಮೇಕೆ ಮಾತ್ರ ಕೊಟ್ಟಿಗೆಯ ಬೇಲಿಯೊಳಗೆ ನುಸುಳಿ ಹೊರಬರಲು ಯಶಸ್ವಿಯಾಯಿತು. 'ಹಾಗಾದರೆ ಈಗ ಕೊಟ್ಟಿಗೆಯಲ್ಲಿ ಎಷ್ಟು ಮೇಕೆಗಳು ಇರುತ್ತವೆ' ಎಂದು ಪ್ರಶ್ನೆ ಕೇಳಿದರೆ ಶಾಲೆಗಳಲ್ಲಿ ಓದಿದವರು, '29 ಆಡುಗಳು ಇರುತ್ತವೆ' ಎಂದು ಲೆಕ್ಕ ಹಾಕಿ ಕರಾರುವಾಕ್ಕಾಗಿ ಉತ್ತರಿಸುತ್ತಾರೆ. ಆದರೆ ಹಳ್ಳಿಯಲ್ಲಿ ಬದುಕುವ ಮೇಕೆಗಳ ಮನೋಭಾವವನ್ನು ಬಲ್ಲ ಒಬ್ಬ ಅವಿದ್ಯಾವಂತ, 'ಒಂದು ಮೇಕೆಯೂ ಕೊಟ್ಟಿಗೆಯಲ್ಲಿ ಇರುವುದಿಲ್ಲ' ಎಂದು ಸರಿಯಾದ ಉತ್ತರ ನೀಡುತ್ತಾನೆ. ಒಂದು ಮೇಕೆ ಬೇಲಿ ದಾಟಿದ ನಂತರ, ಇತರ ಮೇಕೆಗಳೂ ಅದನ್ನೇ ಅನುಸರಿಸುತ್ತವೆ ಎಂಬುದು ಅವನಿಗೆ ಚೆನ್ನಾಗಿ ತಿಳಿದಿರುತ್ತದೆ.

ಕಾರಣ–ಕಾರ್ಯವನ್ನು ತಿಳಿಯದೆ ನಾವು ಮಾಡುವ ಕ್ರಿಯೆಗಳು ಅದರ ನಿಜವಾದ ಉದ್ದೇಶವನ್ನು ಪ್ರಶ್ನಾರ್ಹವಾಗಿ ಮಾಡುತ್ತವೆ ಎಂದು ತಿಳಿಸುವ ಇನ್ನೊಂದು ಕಥೆಯೂ ನಮ್ಮಲ್ಲಿ ಪ್ರಚಲಿತದಲ್ಲಿದೆ: ಒಬ್ಬ ಗುರುಗಳು ತಮ್ಮ ಆಶ್ರಮದಲ್ಲಿ ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದರು. ಮಠದಲ್ಲಿ ಬೆಳೆಯುತ್ತಿದ್ದ ಒಂದು ಬೆಕ್ಕು ಆಗಾಗ ಅಡ್ಡ ಬಂದು ನಡೆದಾಡುತ್ತಾ ಪಾಠಕ್ಕೆ ಅಡ್ಡಿ ಮಾಡುತ್ತಲೇ ಇತ್ತು. ಅದನ್ನು ಎತ್ತಿಕೊಂಡು ಹೋಗಿ ಹೊರಗೆ ಬಿಟ್ಟರೂ ಅದು ಮತ್ತೆ ಒಳಗೆ ಬಂದು ಕಿರುಚುತ್ತಾ ಓಡಾಡುತ್ತಲೇ ಇರುತ್ತಿತ್ತು. ಇದರಿಂದ ವಿದ್ಯಾರ್ಥಿಗಳ ಗಮನ ಬೇರೆಡೆಗೆ ಹೋಗುತ್ತಿರುವುದನ್ನು ಮನಗಂಡ ಗುರುಗಳು ಪ್ರತಿದಿನ ತರಗತಿ ಆರಂಭವಾಗುವ ಮುನ್ನ ಆ ಬೆಕ್ಕನ್ನು ಹಿಡಿದುಕೊಂಡು ಹೋಗಿ ಹೊರಗಿನ ಕಂಬಕ್ಕೆ ಕಟ್ಟುವಂತೆ ಹೇಳುತ್ತಿದ್ದರು. ಗುರುಗಳ ಆದೇಶದ ಮೇರೆಗೆ ತರಗತಿ ಪ್ರಾರಂಭವಾಗುವ ಮೊದಲು ಯಾರಾದರೂ ಒಬ್ಬ ಶಿಷ್ಯ ಎದ್ದು ಹೋಗಿ ಆ ಬೆಕ್ಕನ್ನು ಹುಡುಕಿ ತೆಗೆದುಕೊಂಡು ಬಂದು ಒಂದು ನಿರ್ದಿಷ್ಟ ಕಂಬದಲ್ಲಿ ಕಟ್ಟಿ ಹಾಕುವುದು ಅವರ ದಿನಚರಿಯಾಗಿ ಹೋಯಿತು.

ತಮ್ಮಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಬೇರೆ ಊರುಗಳಿಗೆ ಕಳುಹಿಸಿ ಅಲ್ಲಿ ಅವರಿಂದ ಪಾಠ ಹೇಳಿಸುವುದು ಆ ಗುರುವಿನ ವಾಡಿಕೆ. ಆದರೆ, ಇವರಿಂದ ತರಬೇತಿ ಪಡೆದ ಶಿಷ್ಯರು ಪಾಠ ಹೇಳಲು ಬೇರೆ ಬೇರೆ ಊರುಗಳಿಗೆ ಹೋದಾಗ ಅಲ್ಲಿ ನಿತ್ಯವೂ ಒಂದು ಬೆಕ್ಕನ್ನು ಹುಡುಕಿಸಿ ತಂದು ಕಟ್ಟಿ ಹಾಕಿಸಿ, ನಂತರ ಪಾಠ ಆರಂಭಿಸುತ್ತಿದ್ದರಂತೆ! ಇದು ಕೇವಲ ಕಥೆಗಳಲ್ಲಿ ಮಾತ್ರ ನಡೆಯುವುದಿಲ್ಲ. ಮಾನವನ ಜೀವನದಲ್ಲಿ ಪ್ರತಿನಿತ್ಯ ಇಂತಹ ವಿವಿಧ ಸಂಗತಿಗಳು ನಡೆಯುತ್ತಿರುತ್ತವೆ.

ಹೆಚ್ಚು ಬಿಸಿಲು ಕಾಣದ, ಹಿಮವೇ ಮಳೆಯಂತೆ ಸುರಿಯುವ ದೇಶದಲ್ಲಿ ವಾಸಿಸುತ್ತಿದ್ದ ಬಿಳಿಯರು ತಮ್ಮ ಮಕ್ಕಳಿಗೆ 'ರೈನ್ ರೈನ್ ಗೋ ಅವೇ' ಎಂದು ಹಾಡುವುದನ್ನು ಕಲಿಸಿದರು. ಮಳೆಯಿಲ್ಲದೆ, ಕುಡಿಯಲು ನೀರೂ ಇಲ್ಲದೆ ಅವಸ್ಥೆ ಪಡುವ ದೇಶದಲ್ಲೂ ಈಗ ನಾವು, ಆಂಗ್ಲರು ತಮ್ಮ ದೇಶದ ವಾತಾವರಣಕ್ಕಾಗಿ ಹಾಡುತ್ತಿದ್ದ ಅದೇ ಹಾಡನ್ನೇ ಮಕ್ಕಳಿಗೆ ಹೇಳಿಕೊಡುತ್ತಿರುವುದು ವಿಪರ್ಯಾಸ. ಇದೇ ರೀತಿಯಾಗಿ ಈ ಕಾಲಕ್ಕೆ ಸ್ವಲ್ಪವೂ ಹೊಂದಿಕೆಯಾಗದ, ಅಗತ್ಯವೂ ಇಲ್ಲದ ಹಲವಾರು ಆಚರಣೆಗಳನ್ನು ಕೊಂಚ ಕೂಡ ವ್ಯತ್ಯಾಸವಿಲ್ಲದ ಹಾಗೆ ಇಂದೂ ಆಚರಿಸುವವರು ಬಹಳ ಮಂದಿ ಇದ್ದಾರೆ. ಯಾವುದೇ ವಿಷಯದಲ್ಲೇ ಆಗಲಿ ಕಾರಣವನ್ನು ಕಂಡುಕೊಂಡು ಕೆಲಸ ಮಾಡಲು ಪ್ರಾರಂಭಿಸಿದರೆ ಇಂತಹ ತಪ್ಪುಗಳು ಸಂಭವಿಸುವುದಿಲ್ಲ.

ಪೂಜ್ಯ ವೇದಾದ್ರಿ ಮಹರ್ಷಿಗಳು ಒಮ್ಮೆ ಯೋಗಾಭ್ಯಾಸವನ್ನು ಕಲಿಸುತ್ತಿದ್ದಾಗ ಒಂದು ನೊಣ ನೇರವಾಗಿ ಅವರ ಮುಖದ ಮುಂದೆ ಹಾರಿ ಬಂದು ಅವರಿಗೆ ಅಡ್ಡಿಯನ್ನುಂಟು ಮಾಡಿತು. ಯೋಗಾಭ್ಯಾಸ ಹೇಳಿ ಕೊಡುತ್ತಾ ಆ ಸಮಯದಲ್ಲಿ ಅವರು ಸ್ವಾಭಾವಿಕವಾಗಿ ಕೈಬೀಸಿ ನೊಣವನ್ನು ಓಡಿಸಿದರು. ಅವರನ್ನೇ ನೋಡುತ್ತಿದ್ದ ಇತರರೂ ಹಾಗೆಯೇ ಮಾಡಿ ಕೈಬೀಸಿದರು. ಇದನ್ನು ಗಮನಿಸಿದ ಪೂಜ್ಯರು ನಕ್ಕು, "ನೊಣವನ್ನು ಓಡಿಸಲು ನಾನು ಹಾಗೆ ಕೈ ಬೀಸಿದೆ, ಅಷ್ಟೆ. ಅದು ಯೋಗಾಭ್ಯಾಸವಲ್ಲ" ಎಂದು ನಗುತ್ತಲೇ ಹೇಳಿದರು. ಅವರು ಅದನ್ನು ಹೇಳದೇ ಹೋಗಿದ್ದರೆ, ಆಗ ಯೋಗ ಕಲಿತವರು ಅದನ್ನೂ ಕೂಡ ಯೋಗದ ಒಂದು ಭಾಗವೆಂದೇ ತಿಳಿದುಕೊಂಡು, ಮುಂದೆ ತಾವೂ ಇತರರಿಗೆ ಅದೇ ರೀತಿ ಹೇಳಿಕೊಡುತ್ತಿದ್ದರೋ ಏನೋ! ಯೋಚಿಸುವುದು, ಯೋಜಿಸುವುದು ಮತ್ತು ಕಾರ್ಯಪ್ರವೃತ್ತರಾಗುವುದು ಮಾನವ ಕುಲದ ವಿಶಿಷ್ಟತೆ.

ರಾಮರಾಜ್ ಕಾಟನ್ ಕಂಪನಿಯು ನೇಕಾರರ ಜೀವನಮಟ್ಟವನ್ನು ಉನ್ನತೀಕರಿಸುವ ಮತ್ತು ನಮ್ಮ ಸಾಂಪ್ರದಾಯಿಕ ಉಡುಪಾದ ಪಂಚೆಯನ್ನು ಮುಂದಿನ ತಲೆಮಾರುಗಳಿಗೂ ಕೊಂಡೊಯ್ಯುವ ಕನಸಿನೊಂದಿಗೆ ಪ್ರಾರಂಭವಾಯಿತು. ಪಂಚೆ ಧರಿಸಿಕೊಂಡು ಹೋದ ನನಗೆ ಒಂದು ಪಂಚತಾರಾ ಹೋಟೇಲ್‌ನೊಳಗೆ ಪ್ರವೇಶ ನಿರಾಕರಿಸಲಾಯಿತು. ಅಂದು ನನಗಾದ ಅವಮಾನ, ಕಷ್ಟಪಟ್ಟು ದುಡಿದರೂ ಸರಿಯಾದ ಕೂಲಿ ಸಿಗದೆ ಪರದಾಡುತ್ತಿದ್ದ ನೇಕಾರರ ಮೇಲಿನ ಅಭಿಮಾನ ಇವೆರಡೂ ಸೇರಿ ರಾಮರಾಜ್ ಕಾಟನ್ ಸಂಸ್ಥೆ ಅಚಲವಾಗಿ ಬೆಳೆಯಲು ಸಹಕಾರಿಯಾಯಿತು.

ನಮ್ಮ ಸಾಂಪ್ರದಾಯಿಕ ಉಡುಗೆಯನ್ನು ಗೌರವಾನ್ವಿತ ಉಡುಗೆಯಾಗಿ ಪರಿವರ್ತಿಸುವ ಮಹತ್ವಾಕಾಂಕ್ಷೆಯೊಂದಿಗೆ ನಮ್ಮ ಕಂಪನಿಯು 40 ವರ್ಷಗಳಿಂದ ತನ್ನ ಯಶಸ್ವೀ ಪ್ರಯಾಣವನ್ನು ಮುಂದುವರೆಸಿದೆ. ದೈವಿಕ ಶಕ್ತಿಯು ಪ್ರತಿಯೊಂದು ಕ್ರಿಯೆಗೂ ಒಂದು ಕಾರಣವನ್ನು ನೀಡುತ್ತದೆ ಎಂಬುದು ನನ್ನ ದೃಢವಾದ ನಂಬಿಕೆ. ಈ ಆಶಯವೇ ರಾಮರಾಜ್ ಕಾಟನ್ ಸಂಸ್ಥೆಯ ಪ್ರತಿಯೊಂದು ಯೋಜನೆಯ ಹಿಂದಿರುವ ಪ್ರೇರಕ ಶಕ್ತಿ.

ಒಮ್ಮೆ ನಾವು ನಮ್ಮ ಆಲೋಚನೆಗಳು ಮತ್ತು ಕ್ರಿಯೆಗಳ ಹಿಂದಿನ ಕಾರಣಗಳನ್ನು ಗುರುತಿಸಿದರೆ, ನಾವು ನಮ್ಮ ಪ್ರಯಾಣವನ್ನು ಯಶಸ್ವಿಯಾಗಿ ಮುಂದುವರಿಸಬಹುದು.

ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ

**ಕೆ.ಆರ್. ನಾಗರಾಜನ್**

ಸಂಸ್ಥಾಪಕರು – ರಾಮ್‌ರಾಜ್ ಕಾಟನ್



The Culturepreneur



# ಕಾರಣಗಳನ್ನು ಅರಿತು ಬದುಕೋಣ!

ನಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದಕ್ಕೂ ಒಂದು ಕಾರಣವಿದೆ. ಅದೇ ರೀತಿ ನಮ್ಮ ಸುತ್ತಮುತ್ತ ನಡೆಯುವ ಎಲ್ಲ ಸಂಗತಿಗಳಿಗೂ ಕಾರಣಗಳಿರುತ್ತವೆ. 'ಜೀವನದ ನಿಜವಾದ ಅರ್ಥವೇನು' ಎಂಬ ಪ್ರಶ್ನೆಗೆ ಅರಿಸ್ಟಾಟಲ್ ಒಂದು ವಿವರಣೆ ನೀಡಿದರು: 'ಈ ಜಗತ್ತಿನಲ್ಲಿ ಎಲ್ಲವೂ ಬದಲಾಗುತ್ತಿರುತ್ತದೆ. ಇಂದು ನಿನ್ನೆಯಂತಿರುವುದಿಲ್ಲ. ಇಂದಿನಂತೆ ನಾಳೆಯೂ ಇರುವುದಿಲ್ಲ. ನಮ್ಮ ಜೀವನದಲ್ಲಿ ನಿನ್ನೆ ನಡೆದಂತೆಯೇ ಎಲ್ಲವೂ ಇಂದು ನಡೆಯುವುದಿಲ್ಲ. ಆದರೂ ಎಲ್ಲದಕ್ಕೂ ಯಾವುದೋ ಒಂದು ಅರ್ಥ ಇದ್ದೇ ಇರುತ್ತದೆ' ಎಂದು ಅವರು ಹೇಳಿದರು.

ಹೀಗೆ ಅನೇಕ ಕಾರಣಗಳೊಂದಿಗೆ ಸಂಭವಿಸುವ ಹಲವು ವಿಷಯಗಳು ಮತ್ತು ನಾವು ತೆಗೆದುಕೊಳ್ಳುವ ನಿರ್ಧಾರಗಳು ನಮ್ಮನ್ನು ಪರಿಪೂರ್ಣ ಮನುಷ್ಯರನ್ನಾಗಿ ರೂಪಿಸುತ್ತವೆ. ಅವೆಲ್ಲವೂ ಸಂಭವಿಸಲು ಏಳು ಕಾರಣಗಳಿರುತ್ತವೆ ಎಂದು ಹೇಳಬಹುದು:

- ಕಷ್ಟಗಳಿಂದ ಸಂತೋಷದ ಕಡೆಗೆ ನಾವು ಸಾಗಲೂ, ವೈಫಲ್ಯದಿಂದ ಯಶಸ್ಸಿನ ಕಡೆಗೆ ಸಾಗಲೂ ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲೂ ಅವು ನಮಗೆ ಕಲಿಸಿ ಕೊಡುತ್ತವೆ. ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವಾಗ ನಮಗೆ ದೊರಕುವ ಅನುಭವಗಳು ನಮಗೆ ಅನೇಕ ಪಾಠಗಳನ್ನು ಕಲಿಸುತ್ತವೆ. ಎಷ್ಟೇ ದೊಡ್ಡ ಸವಾಲುಗಳು ಎದುರಾದರೂ ದೃಢವಾಗಿ ನಿಂತು ಅದರಿಂದ ಹೊರ ಬರುವುದೇ ನಮ್ಮ ಮುಂದಿರುವ ನಿಜವಾದ ಸವಾಲು. ಕಟ್ಟಡ ನಿರ್ಮಿಸುವಾಗ ಸಿಮೆಂಟ್ ಮೇಲೆ ನೀರು ಸುರಿದರೆ ಅದು ಕೂಡಲೇ ಕರಗಿ ಹೋಗುತ್ತದೆ. ಆದರೆ ಒಣಗಿದ ನಂತರ ಸಿಮೆಂಟ್‌ನ ಮೇಲೆ ಮತ್ತೆ ಮತ್ತೆ ನೀರು ಸುರಿಯುತ್ತಿದ್ದರೆ ಕಟ್ಟಡ ಹೆಚ್ಚು ದೃಢತೆಯನ್ನು ಪಡೆದುಕೊಳ್ಳುತ್ತದೆ. ಸಾಕಷ್ಟು ಸಮಸ್ಯೆಗಳನ್ನು ಎದುರಿಸುವವರ ಮನಸ್ಸು ಕೂಡ ಹೀಗೆ ನಿಧಾನವಾಗಿ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಭವಿಷ್ಯದಲ್ಲಿ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಮುಂದುವರಿಯಲು ಇದು ಅವರಿಗೆ ಸಹಾಯ ಮಾಡುತ್ತದೆ. ಮನೆಯಲ್ಲಿನ ಸಮಸ್ಯೆಗಳು, ಕಚೇರಿಯಲ್ಲಿ ನಡೆಸುವ ಹೋರಾಟ ಇತ್ಯಾದಿ ಅನೇಕ ಸಮಸ್ಯೆಗಳನ್ನು ಏಕಕಾಲದಲ್ಲಿ ಎದುರಿಸುವ ಜನರು ಜೀವನದಲ್ಲಿ ಬೇಸರ ಹೊಂದಿ ಸೋತು ಹೋಗಬೇಕಾಗಿಲ್ಲ. ಅವರು ಯಾವುದೇ ಬಗೆಯ ಸಮಸ್ಯೆ ಎದುರಾದರೂ ಅದನ್ನು ಗಾಬರಿಯಿಲ್ಲದೆ ಎದುರುಗೊಂಡು, ಅದಕ್ಕೆ ತಕ್ಕ ಪರಿಹಾರವನ್ನು ಕಂಡುಕೊಳ್ಳುವ ಇಚ್ಛಾಶಕ್ತಿಯನ್ನು ಹೊಂದುತ್ತಾರೆ.



‘ನಡೆದದ್ದು ನಡೆದು ಹೋಯಿತು. ಅದರ ಬಗ್ಗೆಯೇ ಯೋಚಿಸುತ್ತಿರದೆ, ಮುಂದೆ ಆಗಬೇಕಾದ ಕೆಲಸ ನೋಡು’ ಎಂದು ಹಿಂದೆಲ್ಲ ಹಿರಿಯರು ಸಾಂತ್ವನ ಹೇಳುತ್ತಿದ್ದರು. ಈ ಮಾತಿನಲ್ಲಿ ಅತಿ ದೊಡ್ಡ ಸತ್ಯ ಅಡಗಿದೆ. ಏನಾಗಿ ಹೋಯಿತು ಎಂದು ಪಶ್ಚಾತ್ತಾಪ ಪಡುತ್ತಾ ನಡೆದದ್ದನ್ನೇ ಯೋಚಿಸಿಕೊಂಡು ಮೂಲೆಯಲ್ಲಿ ಕುಳಿತವರು ಅದರಿಂದ ಚೇತರಿಸಿಕೊಳ್ಳುವುದಿಲ್ಲ. ‘ಹೀಗೆ ಆಗುವುದಕ್ಕೆ ಏನೋ ಒಂದು ಕಾರಣ ಇರಬೇಕು’ ಎಂದು ಸಮಾಧಾನ ಮಾಡಿಕೊಳ್ಳುವವರು ಬೇಗ ಅದರಿಂದ ಚೇತರಿಸಿಕೊಂಡು ಬೇರೊಂದು ಅವಕಾಶವನ್ನು ಹುಡುಕುತ್ತಾರೆ. ಪ್ರೀತಿಯ ಬೆಸುಗೆಯಲ್ಲಿ ಬಿರುಕು ಮೂಡುವುದು, ನಿರೀಕ್ಷಿತ ಕೆಲಸ ಸಿಗದೇ ಹೋಗುವುದು, ವ್ಯಾಪಾರದಲ್ಲಿ ಅನಿರೀಕ್ಷಿತ ನಷ್ಟ ಏರ್ಪಡುವುದು... ಇಂತಹ ಸಮಸ್ಯೆಗಳಿಗೆಲ್ಲ ಜೀವನದಲ್ಲಿ ಬರವೇ ಇರುವುದಿಲ್ಲ. ಅಂತಹ ಸಮಯದಲ್ಲಿ ‘ನಾನು ಈ ಜಗತ್ತಿನ ಅತೀ ದುರಾದೃಷ್ಟದ ವ್ಯಕ್ತಿ’ ಎಂದು ಬೇಸರ ಮಾಡಿಕೊಂಡು ಮೂಲೆ ಹಿಡಿದರೆ ಮತ್ತೆ ಅದರಿಂದ ಚೇತರಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ‘ಏನಾಯಿತೋ ಅದು ಆಗಿ ಹೋಯಿತು. ಹಿಂದೆ ಇಂತಹ ಪರಿಸ್ಥಿತಿಗಳು ಎದುರಾದಾಗ ಅದರಿಂದ ಹೇಗೆ ನಾವು ಹೇಗೆ ಚೇತರಿಸಿಕೊಂಡೆವು? ಅದನ್ನು ಮರೆಯುವುದು ನಮ್ಮಿಂದ ಸಾಧ್ಯವಾದುದು ಹೇಗೆ? ಈಗ ಯಾಕೆ ಹೀಗಾಯಿತು, ಮುಂದೆ ಹೀಗಾಗದಂತೆ ತಡೆಯುವ ದಾರಿ ಏನು?’ ಹೀಗೆ ಯೋಚಿಸುವವರು ಎಂತಹ ಸಮಸ್ಯೆಗಳಿಂದಾದರೂ ಸರಿ, ಬೇಗ ಚೇತರಿಸಿಕೊಳ್ಳುತ್ತಾರೆ.

‘ಪ್ರತಿಯೊಂದಕ್ಕೂ ಯಾವುದೋ ಒಂದು ಕಾರಣ ಇದ್ದೇ ಇರುತ್ತದೆ’ ಎಂದು ಯೋಚಿಸುವುದು ನಮ್ಮ ನೋವನ್ನು ಕಡಿಮೆ ಮಾಡುತ್ತದೆ. ದೇಹದ ಮೇಲಿನ ಗಾಯ ಕೆಲವೇ ದಿನಗಳಲ್ಲಿ ವಾಸಿಯಾಗುತ್ತದೆ, ಗಾಯದ ಗುರುತು ಮಾತ್ರ ಉಳಿಯುತ್ತದೆ. ಆದರೆ ಇತರರು ಮನಸ್ಸಿಗೆ ಮಾಡಿದ ಗಾಯಗಳು ಗಾಯಗಳಾಗಿಯೇ ನಿರಂತರವಾಗಿ ಉಳಿದು ಬಿಡುತ್ತವೆ. ಅವರು ಮಾಡಿದ ದ್ರೋಹ ಮತ್ತು ಅವರು ನಮಗೆ ನೀಡಿದ ಅವಮಾನಗಳನ್ನು ನಮ್ಮ ಹೃದಯದಲ್ಲಿ ಹಾಗೆಯೇ ಇಟ್ಟುಕೊಂಡಿರುತ್ತೇವೆ. ಇದು ಮನಸ್ಸಿನ ಮೇಲೆ ಮಾತ್ರವಲ್ಲದೇ ದೇಹದ ಮೇಲೂ ಪರಿಣಾಮ ಬೀರುತ್ತದೆ. ಅದಕ್ಕೆ ಬದಲಾಗಿ, ‘ಅವರು ಹಾಗೆ ನಡೆದುಕೊಳ್ಳಲು ಏನಾದರೂ ಕಾರಣವಿರಬಹುದು’ ಎಂದು ನಾವು ಯೋಚಿಸಿದರೆ, ಆಗ ಆ ಕಾರಣದ ಮೇಲೆ ಆರೋಪ ಹೊರಿಸುತ್ತೇವೆ. ಇದರಿಂದ ಮನುಷ್ಯರ ಮೇಲಿನ ದ್ವೇಷ ಕಡಿಮೆಯಾಗುತ್ತದೆ. ತುಂಬಾ ಕೆಳಕ್ಕೆ ಬಿದ್ದಾಗ ಮಾತ್ರವೇ ತುಂಬಾ ಎತ್ತರಕ್ಕೆ ಹೋಗಬೇಕೆಂಬ ಛಲ ಹುಟ್ಟುವುದು. ಹಾಗೆ ಮೇಲಕ್ಕೆ ಬರಲು ಒಂದು ಮಾರ್ಗವನ್ನು ಆಗ ನೀವು ಹುಡುಕುತ್ತೀರಿ.

ಅನಿರೀಕ್ಷಿತವಾಗಿ ಏನಾದರೂ ಕೆಟ್ಟದ್ದು ಸಂಭವಿಸಿದಾಗ, ‘ಅದಕ್ಕೂ ಒಂದು ಕಾರಣವಿದೆ’ ಎಂದು ನಂಬುವುದು ಒಳ್ಳೆಯದು. ಹಾಗೆ ನಂಬಿದಾಗ ‘ಇದನ್ನು ತಡೆಯುವ ದಾರಿ ಯಾವುದು’ ಎಂದು ಯೋಚಿಸತೊಡಗುತ್ತೇವೆ? ಕೆಲಿಡೋಸ್ಕೋಪ್ ಅನ್ನು ತಿರುಗಿಸಿ ತಿರುಗಿಸಿ ನೋಡುವಾಗ ಅದರೊಳಗೆ ನಾವು ವಿಭಿನ್ನ ಮಾದರಿಗಳನ್ನು ನೋಡುವಂತೆ, ಹೊಸ ಹೊಸ ಮಾರ್ಗಗಳನ್ನು ನೋಡುತ್ತೇವೆ. ನಾವು ಮೊದಲು ಯೋಚಿಸದೇ ಇದ್ದ ಹಲವು ಹೊಸ ಕೋನಗಳು ಈಗ ಗೋಚರಿಸುತ್ತವೆ. ನಮ್ಮನ್ನು ನಾವು ಉತ್ತಮ ವ್ಯಕ್ತಿಯಾಗಿ ಪರಿವರ್ತಿಸಿಕೊಳ್ಳಲೂ ಅವಕಾಶ ಸಿಗುತ್ತದೆ. ಬೇಸರ ಮತ್ತು ನಿರಾಶೆಗಳೂ ಮಾಯವಾಗುತ್ತದೆ.



ಎಲ್ಲಾ ಭಾಗಗಳೂ ಸುಸ್ಥಿತಿಯಲ್ಲಿರುವವರೆಗೆ ಒಂದು ವಾಹನವು ಅದನ್ನು ಚಾಲನೆ ಮಾಡುವವರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತದೆ. ಯಾವುದಾದರೂ ಒಂದು ಭಾಗ ರಿಪೇರಿಗೆ ಬಂದರೆ ಆಮೇಲೆ ಅದರಲ್ಲಿ ಚಾಲಕನ ನಿಯಂತ್ರಣ ತಪ್ಪಿ ಅಡ್ಡಾದಿಡ್ಡಿ ಸಾಗಿ ಅಪಘಾತ ಸಂಭವಿಸುವ ಸಾಧ್ಯತೆಗಳಿರುತ್ತವೆ. ಇದೇ ರೀತಿಯಾಗಿ ಅನೇಕ ಜನರು ತಮ್ಮ ಜೀವನವನ್ನು ತಾವೇ ನಿಯಂತ್ರಿಸಲು ಬಯಸುತ್ತಾರೆ. ಆದರೆ ಹಠಾತ್ ಮತ್ತು ಅನಿರೀಕ್ಷಿತ ತಿರುವುಗಳು ಅವರನ್ನು ತತ್ತರಿಸುವಂತೆ ಮಾಡುತ್ತವೆ. ಅತ್ಯಂತ ಕೆಟ್ಟದಾಗಿರುವ ರಸ್ತೆಗಳು ಒಬ್ಬ ವ್ಯಕ್ತಿಯನ್ನು ಉತ್ತಮ ಚಾಲಕನನ್ನಾಗಿ ಬದಲಾಯಿಸಬಹುದು. ಹಾಗೆಯೇ ನಮ್ಮ ಜೀವನದಲ್ಲಿ ಸಂಭವಿಸುವ ಅನಿರೀಕ್ಷಿತ ಸಮಸ್ಯೆಗಳು ನಮ್ಮನ್ನು ಪುಟಕ್ಕಿಟ್ಟ ಬಂಗಾರವಾಗಿಸಬಹುದು.

ಯುದ್ಧದಲ್ಲಿ ಎಂದೂ ಪಾಲ್ಗೊಳ್ಳದ ಒಬ್ಬ ವ್ಯಕ್ತಿ ಎಂದಿಗೂ ಮಹಾನ್ ಯೋಧನಾಗಲು ಸಾಧ್ಯವಿಲ್ಲ. ಅಂತೆಯೇ ಜೀವನವು ಕೂಡ ತಿಳಿಯಾದ ನದಿಯಂತೆ ಹರಿಯುತ್ತಿದ್ದರೆ, ಅದರಲ್ಲಿ ಯಾವುದೇ ವ್ಯತ್ಯಾಸಗಳೂ ಇರುವುದಿಲ್ಲ. ಹಠಾತ್ತನೆ ಎದುರಾಗುವ ಚಂಡಮಾರುತಕ್ಕೂ ಅನಿರೀಕ್ಷಿತವಾಗಿ ಬೀಸುವ ಬಿರುಗಾಳಿಗೂ ಎದೆಯೊಡ್ಡಿ ನಿಂತು ಬೆಳೆಯುವ ಮರವೇ ಅತ್ಯಂತ ಎತ್ತರವಾಗಿಯೂ, ಆಳವಾಗಿಯೂ ದೃಢವಾಗಿಯೂ ಬೆಳೆಯಲು ಸಾಧ್ಯವಾಗುವುದು. ಅಂತೆಯೇ ಯಾವಯಾವುದೋ ಕಾರಣಗಳಿಂದಾಗಿ ನಾವು ಎದುರಿಸುವ ಸಮಸ್ಯೆಗಳೇ ನಮ್ಮನ್ನು ಭಾವನಾತ್ಮಕವಾಗಿಯೂ ಮಾನಸಿಕವಾಗಿಯೂ ಪಕ್ವಗೊಳಿಸುತ್ತವೆ. ಅವು ನಮ್ಮನ್ನು ಪ್ರಬುದ್ಧರನ್ನಾಗಿ ಮಾಡುತ್ತವೆ. ಅವು ನಮ್ಮ ಜೀವನದಲ್ಲಿ ನಡೆಯುವ ಎಲ್ಲಕ್ಕೂ ಅರ್ಥವನ್ನು ಕೊಡುತ್ತವೆ.

ನಮ್ಮ ಸುತ್ತಲಿನ ಎಲ್ಲವೂ ನಿಯಮಿತ ಅಂತರದೊಳಗೆ ನವೀಕರಿಸಲ್ಪಡುತ್ತದೆ. ಹೀಗಿರುವಾಗ ನಾವು ಮಾತ್ರ ಬದಲಾಗದಿದ್ದರೆ ಹೇಗೆ? ಕಾರಣಗಳು ಪ್ರತಿ ಬಾರಿಯೂ ನಮ್ಮನ್ನು ನವೀಕರಿಸಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಇವು ನಮ್ಮ ನಂಬಿಕೆಗಳು, ಆಲೋಚನೆಗಳು ಮತ್ತು ಪ್ರಾಯೋಗಿಕ ಜ್ಞಾನವನ್ನು ನವೀಕರಿಸಿಕೊಳ್ಳಲು ನಮಗೆ ಮಾರ್ಗದರ್ಶನ ನೀಡುತ್ತವೆ. ಅವು ನಮ್ಮನ್ನು ಅಳೆದು ತೂಗುವಂತೆ ಮಾಡುತ್ತವೆ. ನಾವು ನಿರೀಕ್ಷಿಸಿದಂತೆ ಒಳ್ಳೆಯದು ನಡೆಯದಿದ್ದರೆ ಅಥವಾ ನಾವು ನಿರೀಕ್ಷಿಸದ ಕೆಟ್ಟದ್ದು ಸಂಭವಿಸಿದಾಗ ನಮಗೆ ಎರಡು ಆಯ್ಕೆಗಳಿರುತ್ತವೆ. ಒಂದು, ಈ ಜಗತ್ತಿನಲ್ಲಿ ಎಲ್ಲರೂ ನನ್ನನ್ನು ಕೆಳಗೆ ತಳ್ಳಲು ಪಿತೂರಿ ನಡೆಸುತ್ತಿದ್ದಾರೆ ಎಂದು ಕೊರಗುತ್ತಾ ದಣಿದು ಮೂಲೆ ಸೇರುವುದು. ಎರಡು, ಆ ಅನುಭವವನ್ನು ಎದುರಿಸಿ, ಅದರಿಂದ ಪಾಠ ಕಲಿತು ಯಶಸ್ಸಿನತ್ತ ಸಾಗುವುದು.

ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳಲು ಬಯಸುತ್ತೀರಿ? ●



## ಬೆಳಕು ಬೇಗ ಮೂಡಲಿದೆ!

ಏನಾದರೂ ಒಂದು ಅನಾಹುತ ಸಂಭವಿಸಿದಾಗ 'ಇದಕ್ಕೂ ಒಂದು ಕಾರಣವಿದೆ' ಎಂದು ಯೋಚಿಸಿ, ಅದಕ್ಕೆ ಅಗತ್ಯವಾದುದೇನು ಎಂದು ಹುಡುಕಾಡುವಾಗಲೇ ಹೊಸ ದಾರಿ ಕಾಣಿಸುವುದು. ಇಂತಹ ಬಿಕ್ಕಟ್ಟಿನ ಸನ್ನಿವೇಶಗಳನ್ನು ಕೂಡ ನೀವು ನಿಮ್ಮ ಅವಕಾಶವಾಗಿ ಪರಿವರ್ತಿಸಿಕೊಳ್ಳಬಹುದು. ಇದಕ್ಕೆ ಈ ಹಿಂದಿನ ಅನುಭವಗಳು ನಿಮಗೆ ಸಹಾಯ ಮಾಡಬಹುದು. ಅಸ್ತವ್ಯಸ್ತವಾಗಿ ಚದುರಿದಂತಿರುವ ಚುಕ್ಕೆಗಳಿಂದ ಜೋಡಿಸಿ ಒಂದು ಆಕೃತಿಯನ್ನು ರಚಿಸಲು ಆಗ ಮಾತ್ರ ನಿಮ್ಮಿಂದ ಸಾಧ್ಯ. ಭವಿಷ್ಯದ ಬಗ್ಗೆ ಚಿಂತಿಸುವುದಕ್ಕಿಂತ, ಜೀವನದಲ್ಲಿ ದೊರೆತ ಅನುಭವಗಳಿಂದ ಕಲಿತ ಪಾಠಗಳನ್ನು ಕುರಿತು ಯೋಚಿಸುವುದು ಉತ್ತಮ. ನೀವು ಹಳ್ಳಕ್ಕೆ ಬಿದ್ದಾಗ ಕೂಡ, 'ಇದಕ್ಕಿಂತ ಕೆಳಗೆ ಹೋಗಲು ದಾರಿಯೇ ಇಲ್ಲ. ಇನ್ನು ಇಲ್ಲಿಂದ ಹೇಗಾದರೂ ಮೇಲೆ ಹೋಗಿಬಿಡಬಹುದು' ಎಂದು ನಂಬಬೇಕು. ಬೆಳಗಾಗುವ ಮುನ್ನ ಗಾಢವಾದ ಕತ್ತಲು ಆವರಿಸುತ್ತದೆ. ಆ ಕರಾಳ ಕತ್ತಲೆಯ ಮುನ್ಸೂಚನೆಯ ಸಂದೇಶವೇನೆಂದರೆ, ಮುಂಜಾನೆ ಶೀಘ್ರದಲ್ಲೇ ಬರಲಿದೆ ಎಂಬುದೇ ಆಗಿದೆ!



## ಒಂದು ಕಾರಣವನ್ನು ನೀಡೋಣ!

ನಮ್ಮ ಜೀವನದಲ್ಲಿ ನಡೆಯುವ ಅನೇಕ ಸಂಗತಿಗಳಿಗೆ ಕಾರಣವಿರಬಹುದು. ನಾವು ಕೂಡ ನಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದಕ್ಕೂ ಒಂದು ಕಾರಣವನ್ನು ನೀಡುತ್ತಿರುತ್ತೇವೆ. ವೈದ್ಯರೊಬ್ಬರು ಹೇಳುತ್ತಿದ್ದರು: 'ನಾನು ನನ್ನ ರೋಗಿಗಳ ಜೀವ ಉಳಿಸಲು ಬದುಕುತ್ತೇನೆ' ಎಂದು! ಹಾಸ್ಯನಟನ ಬದುಕಿನ ಉದ್ದೇಶ ಜನರನ್ನು ನಗಿಸುವುದೇ ಆಗಿರುತ್ತದೆ. ಜನರಿಗೆ ಜೀವನದಲ್ಲಿ ಒಳ್ಳೆಯ ದಾರಿಯನ್ನು ತೋರಿಸಲು ಅವರಿಗೆ ಉಪದೇಶ ಮಾಡುವುದೇ ಒಬ್ಬ ಸಂತನ ಜೀವನದ ಕಾರಣವಾಗಿರುತ್ತದೆ. ದೇವರ ಆರಾಧನೆಯೇ ಒಬ್ಬ ಆಧ್ಯಾತ್ಮಿಕ ವ್ಯಕ್ತಿಯ ಜೀವನವನ್ನು ಸಾರ್ಥಕಗೊಳಿಸುತ್ತದೆ. ನೀವೂ ನಿಮ್ಮ ಜೀವನಕ್ಕೆ ಇಂತಹ ಉದಾತ್ತ ಕಾರಣಗಳನ್ನು ಇಟ್ಟುಕೊಳ್ಳಿ!



## ಅರ್ಥಪೂರ್ಣ ಕಾರಣವಾಗಲಿ!

ಈ ಜಗತ್ತಿನಲ್ಲಿ ಪ್ರಕೃತಿಯ ಅದ್ಭುತ ಪವಾಡಗಳಾಗಿರುವ ಯಾವುದೂ ಸ್ವಾರ್ಥದಿಂದ ಇರುವುದಿಲ್ಲ. ಹರಿಯುವ ನದಿಯು ತಾನು ತರುವ ನೀರನ್ನು ಸ್ವತಃ ತಾನೇ ಕುಡಿಯಲು ಬಯಸುವುದಿಲ್ಲ. ಅದು ತಾನು ಹರಿಯುವ ದಾರಿಯಲ್ಲಿರುವ ಮಣ್ಣನ್ನು ಫಲವತ್ತಾಗಿಸಿ ಉತ್ಕೃಷ್ಟಗೊಳಿಸುತ್ತದೆ, ಬೆಳೆಗಳನ್ನು ಹುಲುಸಾಗಿಡುತ್ತದೆ ಮತ್ತು ಮನುಷ್ಯರಿಗೆ ಕುಡಿಯುವ ನೀರನ್ನು ಒದಗಿಸುತ್ತದೆ. ಹಾಗೆಯೇ ಮರಗಳು ಕೂಡ ತಾವು ಬಿಟ್ಟ ಹಣ್ಣುಗಳನ್ನು ಸ್ವತಃ ತಾವೇ ತಿನ್ನುವುದಿಲ್ಲ. ಪಕ್ಷಿಗಳು ಮತ್ತು ಮನುಷ್ಯರಿಗೆ ಆಹಾರವನ್ನು ಒದಗಿಸುವ ಮೂಲಕ ಅವು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತವೆ. ಹೂವು ತನಗಾಗಿ ಅರಳುವುದಿಲ್ಲ ಮತ್ತು ಅದು ತನ್ನ ಪರಿಮಳವನ್ನು ಎಲ್ಲೆಡೆಯೂ ಹರಡುತ್ತದೆ. ಸೂರ್ಯನು ತನಗಾಗಿ ಬೆಳಗುವುದಿಲ್ಲ. ಹೀಗೆ ಇತರರಿಗಾಗಿಯೇ ಬದುಕುವುದು ಪ್ರಕೃತಿಯ ನಿಯಮ.

ಈ ಜಗತ್ತಿನಲ್ಲಿ ಜನಿಸಿದ ಕೆಲವು ಉದಾತ್ತ ಮನುಷ್ಯರು ಕೂಡ ಹೀಗೆಯೇ ಇತರರಿಗಾಗಿ ಬದುಕಿ ತೋರಿಸಿದ್ದಾರೆ! ಸೃಷ್ಟಿಯಲ್ಲಿರುವ ಇತರ ಎಲ್ಲಾ ಜೀವಿಗಳೂ ತಮಗರಿವಿಲ್ಲದೆಯೇ ಇತರರಿಗೆ ಸಹಾಯ ಮಾಡುತ್ತವೆ. ಆದರೆ ಮಾನವರಿಗೆ ಮಾತ್ರ ಪ್ರಜ್ಞಾಪೂರ್ವಕವಾಗಿ ಸಹಾಯ ಮಾಡುವ ಆರನೇ ಇಂದ್ರಿಯವಿದೆ. ಈ ಮೂಲಕ ಬದುಕನ್ನು ಅರ್ಥಪೂರ್ಣವಾಗಿ ಬದುಕುವ ಶ್ರೇಷ್ಠತೆ ನಮ್ಮಲ್ಲಿದೆ. ಅದನ್ನು ಅರಿತು ಉನ್ನತವಾಗಿ ಬದುಕೋಣ.




## ಅದಕ್ಕೂ ಒಂದು ಕಾರಣವಿದೆ!

ಯುವಕನೊಬ್ಬ ಅಮೇರಿಕದಲ್ಲಿರುವ ತನ್ನ ಸಹೋದರನಿಗೆ ಪಾರ್ಸೆಲ್ ಕಳುಹಿಸಲು ಅಂಚೆ ಕಚೇರಿಗೆ ತೆರಳಿದ್ದ. ಪಾರ್ಸೆಲ್‌ಗೆ ಅಂಚೆ ಶುಲ್ಕವನ್ನು ಪಾವತಿಸಿದ ನಂತರ ಕಡೆಯಲ್ಲಿ ಎರಡು ರೂಪಾಯಿಗಳನ್ನು ನಗದು ರೂಪದಲ್ಲಿ ನೀಡಬೇಕಾಗಿತ್ತು. ಪೋಸ್ಟ್ ಆಫೀಸ್ ಉದ್ಯೋಗಿ 'ನನ್ನ ಬಳಿ ಯಾವುದೇ ಚಿಲ್ಲರೆ ಇಲ್ಲ' ಎಂದು ಹೇಳಿ ಎರಡು ರೆವಿನ್ಯೂ ಅಂಚೆಚೀಟಿಗಳನ್ನು ನೀಡಿದರು. 'ಅಂಗಡಿಯಲ್ಲಾದರೆ ಚಿಲ್ಲರೆ ಇಲ್ಲದಿದ್ದಲ್ಲಿ ಒಂದು ಚಾಕಲೇಟ್ ಕೊಡುತ್ತಾರೆ. ಅದನ್ನು ತಿನ್ನಬಹುದು. ಆದರೆ ಇಲ್ಲಿ ಏನೂ ಪ್ರಯೋಜನವಾಗದ ಸ್ಟಾಂಪ್ ಕೊಡುತ್ತಿದ್ದಾರೆ' ಎಂದು ಆತ ಸಿಟ್ಟಿಗೆದ್ದ. ಪೋಸ್ಟ್ ಮ್ಯಾನ್‌ನನ್ನು ಮನದಲ್ಲೇ ಶಪಿಸುತ್ತಾ ಅದನ್ನು ತೆಗೆದುಕೊಂಡು ತನ್ನ ಪರ್ಸ್‌ನಲ್ಲಿಟ್ಟುಕೊಂಡ. ಅದರ ನಂತರ ಸ್ಟಾಂಪ್ ಪರ್ಸ್‌ನಲ್ಲಿರುವ ವಿಷಯ ಅವನ ನೆನಪಿನಲ್ಲಿ ಉಳಿಯಲಿಲ್ಲ. ಸಂಪೂರ್ಣವಾಗಿ ಅವನು ಅದನ್ನು ಮರೆತುಬಿಟ್ಟ. ಇತ್ತೀಚಿನ ದಿನಗಳಲ್ಲಿ ಅನೇಕ ಯುವಕರು ತಮ್ಮ ಪರ್ಸ್ ಅನ್ನು ಸ್ವಚ್ಛಗೊಳಿಸುವ ಅಭ್ಯಾಸವನ್ನು ಕೂಡ ಇಟ್ಟುಕೊಂಡಿರುವುದಿಲ್ಲ. ಅವನೂ ಹಾಗೆಯೇ ಇದ್ದು ಬಿಟ್ಟ!

ವರ್ಷಗಳು ಕಳೆದವು. ಕಾಲೇಜು ವ್ಯಾಸಂಗ ಮುಗಿಸಿ ಸರ್ಟಿಫಿಕೇಟ್ ಖರೀದಿಸಲು ಹೋದಾಗ 'ಕಾಲೇಜಿಗೆ ಯಾವುದೇ ಬಾಕಿ ಉಳಿದಿಲ್ಲ' ಎಂದು ಅವನು ಬರೆದು ಕೊಡಬೇಕಾಗಿತ್ತು. ಅದರಲ್ಲಿ ರೆವಿನ್ಯೂ ಸ್ಟ್ಯಾಂಪ್ ಅಂಟಿಸಿ ಸಹಿ ಮಾಡಬೇಕು ಎಂದು ಕಾಲೇಜಿನ ಸಿಬ್ಬಂದಿ ತಿಳಿಸಿದರು. ಊರಾಚೆ ಹೆದ್ದಾರಿ ಬದಿಯಲ್ಲಿರುವ ಕಾಲೇಜ್ ಹತ್ತಿರ ಯಾವುದೇ ಅಂಚೆ ಕಛೇರಿ ಇರಲಿಲ್ಲ. ಇವನಂತೆಯೇ ಅನೇಕ ಜನರು ಏನು ಮಾಡಬೇಕೆಂದು ತೋಚದೆ ಅಸಹಾಯಕರಾಗಿ ನಿಂತುಕೊಂಡಿರುವ ಆ ಸಮಯದಲ್ಲಿ ಅವನಿಗೆ ತಕ್ಷಣ ಈ ಹಿಂದೆ ಎಂದೋ ಒಂದು ದಿನ ಪರ್ಸ್‌ನಲ್ಲಿ ಸ್ಟಾಂಪ್ ಇಟ್ಟಿದ್ದು ನೆನಪಿಗೆ ಬಂದು, ಕೂಡಲೇ ತನ್ನ ಪರ್ಸ್ ತೆರೆದು ನೋಡಿದ. ತಾನು ಖರೀದಿಸಿದ್ದ ಸ್ಟಾಂಪ್ ಅದರಲ್ಲಿ ಹೊಚ್ಚ ಹೊಸದಾಗಿದೆ! ಅವನು ಅದನ್ನು ತೆಗೆದು, ತನಗಾಗಿ ಒಂದನ್ನು ಬಳಸಿಕೊಂಡು ಇನ್ನೊಂದನ್ನು ತನ್ನ ಆತ್ಮೀಯ ಸ್ನೇಹಿತನಿಗೆ ನೀಡಿದ.

ಜೀವನದಲ್ಲಿ ನಡೆಯುವ ಪ್ರತಿಯೊಂದಕ್ಕೂ ಒಂದು ಅರ್ಥಪೂರ್ಣ ಕಾರಣವಿದೆ ಎಂದು ಆ ದಿನ ಅವನು ಅರ್ಥ ಮಾಡಿಕೊಂಡ!

## ದೇವರಿಗೆ ಧನ್ಯವಾದಗಳು!

ಒಬ್ಬ ರಾಜ ತನ್ನ ಸೇವಕನನ್ನು ಕರೆದು, ಅರಮನೆಯ ತೋಟಕ್ಕೆ ಹೋಗಿ ಕೆಲವು ಮಾಗಿದ ಮಾವಿನಹಣ್ಣುಗಳನ್ನು ಆರಿಸಿ ತರಲು ಆದೇಶಿಸಿದ. ಸೇವಕ ಹೋಗಿ ನೋಡಿದಾಗ ಎಲ್ಲಾ ಹಣ್ಣುಗಳೂ ಮರದ ಮೇಲಿದ್ದವು ಮತ್ತು ಅವುಗಳು ಕಾಯಿಗಳಾಗಿದ್ದವು. ಅವು ತಿನ್ನುವಷ್ಟು ಪಕ್ವವಾಗಿರಲಿಲ್ಲ. ಬರಿಗೈಯಲ್ಲಿ ಹಿಂದಿರುಗಿದರೆ ರಾಜ ಕೋಪಗೊಳ್ಳುತ್ತಾನೆ ಎಂಬುದು ಅವನಿಗೆ ತಿಳಿದಿತ್ತು. 'ರಾಜ ಹಣ್ಣನ್ನು ತಿನ್ನಬೇಕು. ಅಷ್ಟೇ ತಾನೇ? ಅದಕ್ಕೆ ಮಾವಿನ ಹಣ್ಣೇ ಆಗಬೇಕಾಗಿಲ್ಲ. ಬೇರೆ ಯಾವುದಾದರೂ ಹಣ್ಣನ್ನು ಹುಡುಕಿ ಕೊಂಡೊಯ್ಯೋಣ' ಎಂದು ಅವನು ಅಂದು– ಕೊಂಡ. ಸಮೀಪದಲ್ಲಿದ್ದ ದೊಡ್ಡ ಹಲಸಿನ ಮರದಲ್ಲಿ ಹೇರಳವಾಗಿ ಹಲಸಿನ ಹಣ್ಣುಗಳು ತೂಗುತ್ತಿದ್ದವು. ಆದರೆ ಅವೆಲ್ಲವೂ ತುಂಬ ಎತ್ತರದಲ್ಲಿದ್ದವು. ಅವುಗಳನ್ನು ಕೊಯ್ಯಲು ತಡವಾಗಬಹುದು ಎಂದು ಯೋಚಿಸಿ, ಪಕ್ಕದಲ್ಲೇ ಇದ್ದ ಬಾಳೆಗಿಡದಲ್ಲಿದ್ದ ಮಾಗಿದ ಹಣ್ಣುಗಳನ್ನು ಕೊಯ್ದು ಬುಟ್ಟಿಗೆ ಹಾಕಿ ತೆಗೆದುಕೊಂಡು ಹೋಗಿ ಅವನು ಅದನ್ನು ರಾಜನಿಗೆ ಕೊಟ್ಟನು.

ಮಾವಿನ ಹಣ್ಣನ್ನು ತಿನ್ನುವ ಆಸೆಯಲ್ಲಿದ್ದ ರಾಜನಿಗೆ ಬಾಳೆಹಣ್ಣು ಕಂಡು ನಿರಾಸೆಯಾಯಿತು. ಕೋಪದಿಂದ ಸೇವಕನು ತಂದ ಬಾಳೆಹಣ್ಣುಗಳನ್ನು ಅವನ ಮುಖದ ಮೇಲೆ ಎತ್ತಿ ಬೀಸಿ ಎಸೆದನು. ಪ್ರತಿಯೊಂದು ಬಾಳೆಹಣ್ಣೂ ತನ್ನ ಮುಖದ ಮೇಲೆ ಬೀಳುತ್ತಿದ್ದಂತೆ, ಸೇವಕನು ತನ್ನ ಕೈಗಳನ್ನು ಮುಗಿದು, 'ದೇವರಿಗೆ ಧನ್ಯವಾದಗಳು' ಎಂದು ಹೇಳುತ್ತಿದನು. ರಾಜನಿಗೆ ಏನೂ ಅರ್ಥವಾಗಲಿಲ್ಲ. "ನಾನು ನಿನ್ನ ಮೇಲೆ ಹಣ್ಣು ಎಸೆಯುತ್ತಿದ್ದೇನೆ. ಆದರೆ ನೀನು ದೇವರಿಗೆ ಧನ್ಯವಾದ ಹೇಳುತ್ತಿರುವೆಯಲ್ಲ... ಏಕೆ, ಏನು?" ಎಂದು ಕೇಳಿದ ರಾಜ. ಸೇವಕ ನಡೆದದ್ದನ್ನೆಲ್ಲ ಹೇಳಿ, 'ಬಹುಶಃ ಒಂದು ವೇಳೆ ನಾನು ಹಲಸಿನ ಹಣ್ಣು ತಂದಿದ್ದರೆ, ಅವುಗಳನ್ನೂ ಹೀಗೇ ನೀವು ನನ್ನ ಮೇಲೆ ಎಸೆಯುತ್ತಿದ್ದಿರಿ. ಆಗ ನನಗೆ ಏಟಾಗುತ್ತಿತ್ತು. ಅದೃಷ್ಟವಶಾತ್ ನಾನು ಬಾಳೆಹಣ್ಣು ತಂದಿದ್ದೇನೆ, ಅದಕ್ಕಾಗಿಯೇ ನಾನು ದೇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ' ಎಂದು ಹೇಳಿದ. ಸತ್ಯವನ್ನು ಅರಿತ ರಾಜ ಅವನ ಬಳಿ ಕ್ಷಮೆ ಕೇಳಿದ.

●



# ಜೀವನದಲ್ಲಿ ಕಾರಣಗಳನ್ನು ಸೃಷ್ಟಿಸಿರಿ!

ಒಬ್ಬ ರಾಜ ಕಾಡಿಗೆ ಬೇಟೆಯಾಡಲು ಹೋದ. ಕಾಡಿನಲ್ಲಿ ಅವನು ಒಂದು ಚಿರತೆಯನ್ನು ಹಿಂಬಾಲಿಸಿಕೊಂಡು ಬಹುದೂರ ಹೋಗಿಬಿಟ್ಟ. ಅವನ ವೇಗಕ್ಕೆ ಅವನೊಂದಿಗೆ ಸೈನಿಕಲು ಬರಲಾಗಲಿಲ್ಲ. ಇದರಿಂದಾಗಿ ರಾಜ ತನ್ನೊಂದಿಗೆ ಬಂದ ಸೈನಿಕರಿಂದ ಬೇರ್ಪಟ್ಟು ಒಂಟಿಯಾಗಿ ಬಿಟ್ಟ. ಚಿರತೆಯನ್ನು ಹಿಂಬಾಲಿಸಿಕೊಂಡು ಬಂದು ಬೇಟೆಯಾಡಿ ಬೇಸತ್ತಿದ್ದಾಗಲೇ, ದರೋಡೆಕೋರರ ಒಂದು ತಂಡ ಕಾಡಿನಲ್ಲಿ ಇವನ ಹಿಂದೆ ಹೊಂಚು ಹಾಕುತ್ತಿತ್ತು. ಅವರು ಬಹುತೇಕ ರಾಜನನ್ನು ಹತ್ಯೆ ಮಾಡಲು ಸಂಚು ರೂಪಿಸಿ ಅವನನ್ನು ಆಕ್ರಮಿಸಿದರು. ರಾಜನು ಅಪಾಯದ ಮುನ್ಸೂಚನೆಯರಿತು ಜೋರಾಗಿ ಕಿರುಚಿದ. ಅದೃಷ್ಟವಶಾತ್, ಕಾಡಿನ ಸಮೀಪದ ಹಳ್ಳಿಯಲ್ಲಿ ವಾಸಿಸುತ್ತಿದ್ದ ಆರು ಜನ ಯುವಕರು ಸ್ವಲ್ಪ ದೂರದಲ್ಲಿ ನಡೆದು ಬರುತ್ತಿದ್ದರು. ದರೋಡೆಕೋರರ ಕೈಗೆ ಸಿಕ್ಕಿಬಿದ್ದಿರುವುದು ರಾಜ ಎಂಬುದನ್ನು ಅರಿಯದೆಯೇ ಅವರು ದರೋಡೆಕೋರರನ್ನು ಹೊಡೆದು ಓಡಿಸಿ ರಾಜನನ್ನು ರಕ್ಷಿಸಿದರು. ಸ್ವಲ್ಪ ಹೊತ್ತಿನಲ್ಲಿ ಅರಸನ ಸೈನ್ಯವೂ ಅಲ್ಲಿಗೆ ಹುಡುಕಿಕೊಂಡು ಬಂದಿತು.

ರಾಜನು ತನ್ನನ್ನು ರಕ್ಷಿಸಿದ ಆ ಆರು ಜನರನ್ನೂ ಅರಮನೆಗೆ ಆಹ್ವಾನಿಸಿ ಕೃತಜ್ಞತಾ ಪೂರ್ವಕವಾಗಿ ಅವರಿಗೆ ಔತಣವನ್ನು ಏರ್ಪಡಿಸಿದ. ಹೊರಡುವ ಅವರಿಗೆ ಅವರು ಕೇಳಿದ ಉಡುಗೊರೆಗಳನ್ನು ಕೊಡುವುದಾಗಿ ತಿಳಿಸಿ, ಏನು ಬೇಕೆಂದು ಕೇಳಿದ. ಮೊದಲ ವ್ಯಕ್ತಿ, "ನೀವು ನನಗೆ ಸ್ವಲ್ಪ ಭೂಮಿ ಕೊಟ್ಟರೆ ಸಹಾಯವಾಗುತ್ತದೆ" ಎಂದ. ರಾಜ ಅವನು ಕೇಳಿದ್ದನ್ನು ಕೊಟ್ಟ. ಎರಡನೆಯವನು, 'ನಾನು ಯಾವುದಾದರು ವ್ಯಾಪಾರ ಮಾಡೋಣ ಎಂದುಕೊಂಡಿದ್ದೇನೆ. ನನಗೆ ಹಣ ಬೇಕು' ಎಂದ. ಅವನಿಗೆ ಅದು ಸಿಕ್ಕಿತು. ಮೂರನೇ ವ್ಯಕ್ತಿ, ತನಗೆ ಮನೆ ನಿರ್ಮಿಸಿ ಕೊಡುವಂತೆ ಕೇಳಿಕೊಂಡ. ರಾಜ ಆಯಿತು ಎಂದು ಹೇಳಿ ಅದಕ್ಕೆ ತಕ್ಕ ಏರ್ಪಾಟು ಮಾಡುವುದಾಗಿ ಭರವಸೆ ನೀಡಿದ. ನಾಲ್ಕನೆಯ ಯುವಕ ಅರಮನೆಯಲ್ಲಿ ಸರ್ಕಾರಿ ನೌಕರಿ ಕೇಳಿ ಪಡೆದ. ಐದನೇ ಯುವಕ, "ನಾನು ಕೆಲವೇ ದಿನಗಳಲ್ಲಿ ಮದುವೆಯಾಗುತ್ತಿದ್ದೇನೆ. ರಾಜನೇ ಖುದ್ದಾಗಿ ಬಂದು ಅಭಿನಂದಿಸಿದರೆ ನನಗೆ ಗೌರವವಾಗಿರುತ್ತದೆ" ಎಂದ. ರಾಜ ಅದಕ್ಕೂ ಒಪ್ಪಿಕೊಂಡ.

ಈಗ ಆರನೇ ಯುವಕ ತನ್ನ ಉಡುಗೊರೆಯನ್ನು ಕೇಳಬೇಕು. ಅವನು ಸ್ವಲ್ಪ ಹಿಂಜರಿದ. ನಂತರ ಧೈರ್ಯದಿಂದ ರಾಜನನ್ನು ನೋಡಿ, 'ನನಗೆ ವಸ್ತುವಾಗಿ ಯಾವ ಉಡುಗೊರೆಯೂ ಬೇಡ. ನಿಮ್ಮನ್ನು ಕಾಪಾಡುವ ಸದವಕಾಶ ದೊರೆತ ಈ ಶುಭದಿನದಂದು, ಪ್ರತಿವರ್ಷ ನೀವು ನಮ್ಮೂರಿಗೆ ಬಂದು, ಈ ಬಡವನ ಮನೆಯಲ್ಲಿ ನಾವು ಕೊಡುವ ಸರಳ ಆಹಾರವನ್ನು ಸ್ವೀಕರಿಸಿ ನಮ್ಮೊಡನೆ ಸ್ವಲ್ಪ ಕಾಲ ಇದ್ದು ನಮ್ಮ ಊರಿಗೇ ಹೆಮ್ಮೆಯನ್ನು ತರಬೇಕು' ಎಂದು ಕೇಳಿಕೊಂಡ. ರಾಜನೂ ಪ್ರತಿ ವರ್ಷ ಅವರ ಮನೆಗೆ ಬರುವುದಾಗಿ ಭರವಸೆ ನೀಡಿದ. ತನ್ನಿಂದ ಪಡೆದುಕೊಳ್ಳುವುದಕ್ಕೆ ಬದಲಾಗಿ ತನ್ನನ್ನೇ ಅವರ ಮನೆಗೆ ಕರೆದು ತನಗೇ ಊಟ ನೀಡಬೇಕೆಂದು ಬಯಸುವ ಅವನ ಪ್ರೀತಿ ರಾಜನಿಗೆ ಇಷ್ಟವಾಯಿತು. ಆದರೆ ಅವನ ಜೊತೆಯಲ್ಲಿದ್ದವರು 'ರಾಜನಿಂದ ಉತ್ತಮ ಉಡುಗೊರೆಯನ್ನು ಪಡೆಯುವ ಅವಕಾಶವನ್ನು ಇವನು ವೃಥಾ ವ್ಯರ್ಥ ಮಾಡಿಕೊಂಡ ಮೂರ್ಖ ಇವನು' ಎಂದು ಅವನನ್ನು ಅಪಹಾಸ್ಯ ಮಾಡಿಕೊಂಡು ನಕ್ಕರು. ಅವರು ಹೇಳಿದ್ದನ್ನು ಕೂಡ ಅವನು ನಗುತ್ತಲೇ ಸ್ವೀಕರಿಸಿದ. ಪ್ರತಿಯಾಗಿ ಏನೂ ಹೇಳಲಿಲ್ಲ.

ಮುಂದಿನ ವರ್ಷ ರಾಜ ಅವನ ಮನೆಗೆ ಬರುವ ದಿನ ಸಮೀಪಿಸುತ್ತಿತ್ತು. ಸೇನೆಯ ನಾಯಕ ಮೊದಲು ಬಂದು ಬಡವನ ಮನೆಗೆ ಹೋಗುವ ದಾರಿ ಚೆನ್ನಾಗಿಲ್ಲದಿರುವುದನ್ನು ಕಂಡು ಮೊದಲು ಆ ಊರಿಗೆ ಒಳ್ಳೆಯ ರಸ್ತೆಯನ್ನು ನಿರ್ಮಿಸಲು ಆದೇಶಿಸಿದ. ಹಲವು ಸಚಿವರು ಕೂಡ ಪಟ್ಟಣಕ್ಕೆ ಆಗಮಿಸಿ ಕುಡಿಯುವ ನೀರು ಸೇರಿದಂತೆ ಊರಿಗೆ ಎಲ್ಲ ಸೌಲಭ್ಯ ಕಲ್ಪಿಸಿದರು. ರಾಜ ಕೆಲವು ಗಂಟೆಗಳ ಕಾಲ ಆ ಮನೆಯಲ್ಲಿ ಇರಬೇಕಾಗಿದೆ ಎಂದು ಚಿಂತಿಸಿದ ಮುಖ್ಯಮಂತ್ರಿಗಳು ಬಡವನ ಮನೆಯನ್ನು ಅರಮನೆಯನ್ನಾಗಿ ಪರಿವರ್ತಿಸಿದರು. ಎಷ್ಟೇ ಜನ ಬಂದರೂ ಅವರೆಲ್ಲರಿಗೂ ಸಾಕಾಗುವಷ್ಟು ಆಹಾರ ಧಾನ್ಯಗಳು ಹಾಗೂ ಇತರ ಸಾಮಾನುಗಳು ಅವನ ಮನೆಗೆ ಬಂದಿಳಿದವು. ತನ್ನ ಪ್ರಾರ್ಥನೆಯಿಂದ ಊರಿಗೆ ಉಪಕಾರ ಮಾಡಿದ ಆ ಯುವಕನನ್ನು ಜನ ಕೊಂಡಾಡಿದರು.

ಊರಿನಲ್ಲಿ ಪ್ರತಿ ವರ್ಷವೂ ರಾಜನ ದರ್ಶನದ ದಿನ ಹಬ್ಬವಾಗುತ್ತಿತ್ತು. ಗ್ರಾಮಸ್ಥರು ನಾನಾರೀತಿಯ ಪ್ರಯೋಜನ ಪಡೆದರು. ಒಮ್ಮೆ ರಾಜನ ಜೊತೆಯಲ್ಲಿದ್ದ ರಾಜಕುಮಾರಿ ತಾನೂ ರಾಜನೊಂದಿಗೆ ಆ ಊರಿಗೆ ಬರುವುದಾಗಿ ಒತ್ತಾಯಿಸಿದಳು. ಅವಳು ಆ ಯುವಕನನ್ನು ಮೆಚ್ಚಿದಳು. ಅವನ ಸೌಂದರ್ಯ ಮತ್ತು ಜ್ಞಾನವನ್ನು ಅವಳು ಪ್ರೀತಿಸಿದಳು. ರಾಜನು ತನ್ನ ಮಗಳನ್ನು ಅವಳ ಇಚ್ಛೆಯಂತೆ ಅವನಿಗೆ ಕೊಟ್ಟು ಮದುವೆ ಮಾಡಿಸಿದ. ರಾಜನಿಗೆ ಮಗನಿರಲಿಲ್ಲ. ಆದ್ದರಿಂದ ವೃದ್ಧಾಪ್ಯದಲ್ಲಿ ಆ ಯುವಕನನ್ನು ಕರೆದು ಅವನಿಗೇ ರಾಜ್ಯವನ್ನು ಒಪ್ಪಿಸಿದ.

ಆ ಯುವಕ ತನ್ನ ಮನಸ್ಸಿನಲ್ಲಿ ಆ ಉಡುಗೊರೆಯನ್ನು ಕೇಳುವ ಸಮಯದಲ್ಲಿ ತನ್ನ ಊರಿಗೆ ಪ್ರಯೋಜನಕಾರಿಯಾಗಿರಲಿ ಎಂಬ





ಜನಸಾಮಾನ್ಯ ಹಿತವನ್ನು ಮಾತ್ರವೇ ಹೊಂದಿದ್ದನು. ಆದರೆ ಅದು ಅವನಿಗೆ ಬಹಳ ಒಳ್ಳೆಯದನ್ನು ಮಾಡಿತು. ನಾವು ಒಳ್ಳೆಯ ಕಾರಣಗಳೊಂದಿಗೆ ವರ್ತಿಸಿದಾಗ, ಪ್ರಯೋಜನಗಳು ನಮ್ಮನ್ನು ಅನುಸರಿಸುತ್ತವೆ.

ಒಳ್ಳೆಯ ಕಾರಣವು ನಮಗೆ ಮಾರ್ಗದರ್ಶನ ಮಾಡಿದಾಗ, ನಾವು ಯಾವುದಕ್ಕಾಗಿ ಬದುಕುತ್ತೇವೆ ಎಂಬುದನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತೇವೆ. ನಾವು ಏನಾಗಲು ಬಯಸುತ್ತೇವೆ ಎಂಬುದೂ ಸ್ಪಷ್ಟವಾಗುತ್ತದೆ. ನಿಮ್ಮ ಹಣೆಬರಹವನ್ನು ಸಂಪಾದಿಸಲು ಮತ್ತು ಬರೆಯಲು ನೀವು ಶಕ್ತಿಯನ್ನು ಪಡೆಯುತ್ತೀರಿ. ನಮ್ಮ ಸಮಯ ಕಡಿಮೆ ಇದೆ, ಇರುವ ಅಲ್ಪ ಸಮಯದೊಳಗೇ ನಾವಂದುಕೊಂಡದ್ದನ್ನು ಮಾಡಿ ಮುಗಿಸಬೇಕು ಎಂಬ ಭಾವನೆಯಿಂದ ನೀವು ಕಾರ್ಯ ಪ್ರವೃತ್ತರಾಗುತ್ತೀರಿ.

ದೇವರು ಸೂರ್ಯನಾಗಿದ್ದರೆ, ಸೂರ್ಯನ ಬೆಳಕಿನಲ್ಲಿ ನೀವು ಕಾಣುವ ನಿಮ್ಮ ನೆರಳೇ ನಿಮ್ಮ ಜೀವನಕ್ಕೆ ಅಗತ್ಯವಾದ ಕಾರಣಗಳ ಗುಂಪಾಗಿರುತ್ತದೆ. ಆ ಕಾರಣಗಳು ನಿಮ್ಮೊಂದಿಗೆ ಎಲ್ಲೆಡೆ ಬರುತ್ತವೆ. ಜೀವನದಲ್ಲಿ ನೀವು ಏನೇ ಮಾಡಿದರೂ ಅದನ್ನು ಪರಿಪೂರ್ಣತೆಯ ಭಾವದಿಂದ ಮಾಡುತ್ತೀರಿ. ನೀವು ಎಲ್ಲರ ಮೇಲೂ ಪ್ರೀತಿಯನ್ನು ಸುರಿಸುತ್ತೀರಿ ಮತ್ತು ನಿಮ್ಮ ಸುತ್ತಲಿರುವ ಎಲ್ಲರಿಗೂ ಪ್ರಯೋಜನವಾಗುವಂತಹ ಕೆಲಸಗಳನ್ನು ಮಾಡುತ್ತೀರಿ.

❖ ಜೀವನವು ಒಂದು ದೊಡ್ಡ ಕೊಡುಗೆಯಾಗಿದೆ. ಪ್ರತಿಯೊಬ್ಬರೂ ಅದನ್ನು ಪೂರ್ಣವಾಗಿ ಬದುಕಲು ವಿಭಿನ್ನ ಕಾರಣಗಳನ್ನು ಹುಡುಕಿಕೊಳ್ಳುತ್ತಾರೆ.

❖ ಯಾವುದೋ ಒಂದು ಕಾರಣಕ್ಕಾಗಿಯೇ ಈ ಭೂಮಿಯಲ್ಲಿ ನಾವು ಹುಟ್ಟಿದ್ದೇವೆ. ನಾವು ಬದುಕಲು ಕೂಡ ಒಂದು ಕಾರಣ ಇರುತ್ತದೆ. ಕೆಲವರು ಇದನ್ನು ಚಿಕ್ಕ ವಯಸ್ಸಿನಲ್ಲಿಯೇ ಅರ್ಥ ಮಾಡಿಕೊಳ್ಳುತ್ತಾರೆ.



❖ ಇದೇ ತಮಗಾಗಿ ಇರುವ ದಾರಿ ಎಂದು ಸ್ಪಷ್ಟವಾಗಿ ಅರಿತು ಅದನ್ನು ಸರಿಯಾಗಿ ಆಯ್ದುಕೊಂಡವರು ಆ ನಿರ್ದಿಷ್ಟ ಕ್ಷೇತ್ರದಲ್ಲಿ ಮಹತ್ತರ ಸಾಧನೆಯನ್ನು ಮಾಡುತ್ತಾರೆ.

❖ ನನ್ನ ಬದುಕಿಗೆ ಇದೇ ಕಾರಣ ಎಂದು ಅರಿತವರು, ತಮ್ಮೊಳಗೆ ಅದಕ್ಕೆ ಅಗತ್ಯವಾಗಿ ಬೇಕಾದ ಹುರುಪು ತುಂಬಿಸಿಕೊಳ್ಳುತ್ತಾರೆ. ಅಂತಃಪ್ರಜ್ಞೆಯು ಅವರಿಗೆ ಮಾರ್ಗದರ್ಶನ ನೀಡುತ್ತದೆ.

❖ 'ನಾವು ಯಾವುದಕ್ಕಾಗಿ ಬದುಕುತ್ತಿದ್ದೇವೆ' ಎಂಬುದರ ಕಾರಣವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ ಬದುಕುವ ಜನರು ತಮಗೂ ತಾವು ಒಳ್ಳೆಯದನ್ನು ಮಾಡಿಕೊಳ್ಳುವುದಿಲ್ಲ; ಇತರರಿಗೂ ಸಹಾಯ ಮಾಡುವುದಿಲ್ಲ. ಅವರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ

❖ ತಾವು ಯಾವುದಕ್ಕಾಗಿ ಬದುಕುತ್ತಿದ್ದೇವೆ ಎಂದು ತಮ್ಮ ಜೀವನದ ಅರ್ಥವನ್ನು ಅರ್ಥ ಸರಿಯಾಗಿ ತಿಳಿದುಕೊಳ್ಳುವವರ ಕಾರಣದಿಂದಲೇ ಈ ಜಗತ್ತಿನಲ್ಲಿ ನಾಗರಿಕತೆಯು ಪ್ರವರ್ಧಮಾನಕ್ಕೆ ಬಂದಿರುವುದು. ಅವರು ಮನುಷ್ಯರೊಳಗೆ ನಂಬಿಕೆಯನ್ನು ಬಿತ್ತುತ್ತಾರೆ. ಅವರು ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾರೆ, ಜಗತ್ತನ್ನು ಬದಲಾಯಿಸುತ್ತಾರೆ ಮತ್ತು ಅವರು ನಮ್ಮ ಜೀವನವನ್ನು ಸುಲಭಗೊಳಿಸುತ್ತಾರೆ.


RAMRAJ



## ಕೇಳಬಾರದು!

ಖ್ಯಾತ ಸಂಗೀತ ಸಂಯೋಜಕ ಮೊಜಾರ್ಟ್ ಅವರನ್ನು ಭೇಟಿಯಾದ ಯುವಕನೊಬ್ಬ ಕೇಳಿದ: "ಸರ್, ನೀವು ಉತ್ತಮ ಸಂಯೋಜನೆಗಳೊಂದಿಗೆ ಹಾಡುಗಳನ್ನು ರಚಿಸಿ ಹೇಗೆ ಪ್ರಸಿದ್ಧರಾಗುತ್ತೀರಿ?" ಅವರು ಹೇಳಿದರು: "ನೀವು ಚಿಕ್ಕವರು, ಸರಳವಾದ ಹಾಡುಗಳನ್ನು ಸಂಯೋಜಿಸಲು ಮೊದಲು ಪ್ರಯತ್ನಿಸಿ, ನೀವು ಅದರಲ್ಲಿ ಅನುಭವವನ್ನು ಪಡೆದ ನಂತರ ದೊಡ್ಡ ಮಟ್ಟದಲ್ಲಿ ಪ್ರಯತ್ನಿಸಬಹುದು."


"10ನೇ ವಯಸ್ಸಿನಲ್ಲಿ ಶ್ರೇಷ್ಠ ಗೀತೆಗಳನ್ನು ರಚಿಸಿದ್ದು ನೀವೊಬ್ಬರೇ ಅಲ್ಲವೇ?" ಹುಡುಗ ಮತ್ತೆ ಕೇಳಿದ. ಅದಕ್ಕೆ ಮೊಜಾರ್ಟ್ ಮುಗುಳ್ನಗುತ್ತಲೇ ಉತ್ತರಿಸಿದರು: "ನಿಜ. ಆದರೆ ಹಾಡುಗಳನ್ನು ಹೇಗೆ ರಚಿಸಬೇಕೆಂದು ನಾನು ಯಾರನ್ನೂ ಕೇಳಿದ್ದಿಲ್ಲ."

## ಎರಡನೇ ಬಹುಮಾನ!

ಹಲವಾರು ವರ್ಷಗಳ ಹಿಂದೆ ಪೆಸಿಫಿಕ್ ಕರಾವಳಿ ತೀರದ ಒಂದು ಪಟ್ಟಣದಲ್ಲಿ ಸಮಾರಂಭವೊಂದು ನಡೆಯಿತು. ಖ್ಯಾತ ಕಾಮಿಡಿಯನ್ ಚಾರ್ಲಿ ಚಾಪ್ಲಿನ್ ಅವರಂತೆ ನಟಿಸುವ ನಟನಿಗೆ ಬಹುಮಾನ ನೀಡುವ ಸ್ಪರ್ಧೆಯನ್ನು ಅಲ್ಲಿ ಏರ್ಪಡಿಸಿದ್ದರು.

ಆ ಸಮಯದಲ್ಲಿ ಚಾರ್ಲಿ ಚಾಪ್ಲಿನ್ ವಿಶ್ರಾಂತಿಗಾಗಿ ಆ ನಗರಕ್ಕೆ ಬಂದಿದ್ದರು. ಅವರು ಅಲ್ಲಿರುವುದು ಯಾರಿಗೂ ಗೊತ್ತಿರಲಿಲ್ಲ. ಈ ಸ್ಪರ್ಧೆಯ ಬಗ್ಗೆ ಕೇಳಿದ ಅವರು ತಾವು ಯಾವಾಗಲೂ ಚಲನಚಿತ್ರದ ಚಿತ್ರೀಕರಣದಲ್ಲಿ ಧರಿಸುವ ಉಡುಪಿನಲ್ಲಿ ಬಂದು ಸ್ವತಃ ಸ್ಪರ್ಧೆಯಲ್ಲಿ ಭಾಗವಹಿಸಿದರು.

ಚಾಪ್ಲಿನ್‌ಗೆ ಎರಡನೇ ಬಹುಮಾನ ನೀಡಲಾಯಿತು ಮತ್ತು ಇನ್ನೊಬ್ಬ ವೇಷಧಾರಿ ಪ್ರಥಮ ಬಹುಮಾನ ಪಡೆದಿದ್ದ! ಜನರು ಸತ್ಯಕ್ಕಿಂತ ಸುಳ್ಳನ್ನು ಹೆಚ್ಚು ನಂಬುತ್ತಾರೆ ಎಂಬುದನ್ನು ಈ ಘಟನೆ ತೋರಿಸುತ್ತದೆ!






## ಅದು ದುರಾದೃಷ್ಟವಲ್ಲ!

ಸ್ಕಾಟ್ಲೆಂಡ್‌ನಲ್ಲಿ ನೆಲೆಸಿದ್ದ ಕ್ಲಾರ್ಕ್ ಕುಟುಂಬ ಅಮೆರಿಕಕ್ಕೆ ಹೋಗಬೇಕೆಂಬ ಕನಸು ಕಂಡಿತ್ತು. ವಿಮಾನಗಳೇ ಇಲ್ಲದ ಆ ಕಾಲದಲ್ಲಿ ಹಡಗಿನಲ್ಲಿ ಮಾತ್ರ ಅಮೆರಿಕಕ್ಕೆ ಹೋಗಬಹುದಿತ್ತು. ಅನೇಕ ವರ್ಷಗಳ ಕಾಲ ಅವರು ಹಣವನ್ನು ಉಳಿಸಿದರು; ಕ್ಲಾರ್ಕ್ ಮತ್ತು ಅವರ ಪತ್ನಿ ಇಬ್ಬರೂ ದುಡಿದು ಕಷ್ಟಪಟ್ಟು, ಒಂಬತ್ತು ಮಕ್ಕಳ ಪ್ರಯಾಣಕ್ಕಾಗಿ ಹಣ ಕೂಡಿಟ್ಟರು.

ಆ ಸಮಯದಲ್ಲಿ ಹೊಸದಾಗಿ

## ದೇವರು ದೊಡ್ಡವನು!

ಗಾಂಧೀಜಿ 'ಪ್ರಾರ್ಥನೆ' ಮಾಡುವ ಸಮಯವನ್ನು 'ದೇವರೊಂದಿಗೆ ಮಾತನಾಡುವ ಸಮಯ' ಎಂದು ಬಣ್ಣಿಸುತ್ತಿದ್ದರು. ಒಮ್ಮೆ ಗಾಂಧೀಜಿ ತಮ್ಮ ಕ್ರಿಶ್ಚಿಯನ್ ಸ್ನೇಹಿತರೊಬ್ಬರ ಮನೆಗೆ ಹೋಗಿದ್ದರು. ಆ ವೇಳೆ ಪ್ರಾರ್ಥನೆ ಮಾಡುತ್ತಿದ್ದ ಗೆಳೆಯನಿಗೆ ಗಾಂಧೀ ಬಂದಿದ್ದು ಗೊತ್ತಾಗಿ, ಬೇಗನೇ ಪ್ರಾರ್ಥನೆ ಮುಗಿಸಿ ಹೊರಬಂದರು. ಗಾಂಧಿಯನ್ನು ನೋಡಿ, 'ಇಷ್ಟು ಹೊತ್ತು ನಿಮ್ಮನ್ನು ಕಾಯಿಸಿದ್ದಕ್ಕಾಗಿ ಕ್ಷಮೆ ಯಾಚಿಸುತ್ತೇನೆ' ಎಂದು ವಿನಯದಿಂದ ಹೇಳಿದರು.



## ತಿಳಿಯದುದರಿಂದ ಸಾಧ್ಯವಾಯಿತು!

ಒಂದು ಕಾಲೇಜಿನಲ್ಲಿ ಗಣಿತದ ತರಗತಿ ನಡೆಯುತ್ತಿತ್ತು. ಜಗತ್ತಿನ ಮಹಾನ್ ಗಣಿತದ ಮೇಧಾವಿಗಳಿಂದ ಕೂಡ ಬಿಡಿಸಲಾಗದ ಎರಡು ಲೆಕ್ಕಗಳನ್ನು ಅಧ್ಯಾಪಕರು ಕಪ್ಪುಹಲಗೆಯ ಮೇಲೆ ಬರೆದರು. ನಂತರ ವಿದ್ಯಾರ್ಥಿಗಳತ್ತ ತಿರುಗಿ, "ಇವು ಇಂದಿಗೂ ಅರ್ಥವಾಗದ ಒಗಟುಗಳು. ಈ ಲೆಕ್ಕಗಳಿಗೆ ಉತ್ತರವನ್ನು ಇದುವರೆಗೂ ಯಾರೂ ಕಂಡು ಹಿಡಿಯಲು ಸಾಧ್ಯವಾಗಿಲ್ಲ"ಎಂದು ಅವರು ಹೇಳಿದರು.

ಆ ದಿನ ಒಬ್ಬ ವಿದ್ಯಾರ್ಥಿ ತುಂಬಾ ತಡವಾಗಿ ತರಗತಿಗೆ ಬಂದಿದ್ದ. ಅಷ್ಟೊತ್ತಿಗೆ ತರಗತಿ ಮುಗಿದಿತ್ತು. ಇತರ ವಿದ್ಯಾರ್ಥಿಗಳು ಬಿಡುವಿನ ವೇಳೆಯಲ್ಲಿ ಹೊರಗೆ ಹೋದರು. ತಡವಾಗಿ ಬಂದ ಈ ವಿದ್ಯಾರ್ಥಿ ಕಪ್ಪು ಹಲಗೆಯ ಮೇಲೆ ಬರೆದ ಲೆಕ್ಕವನ್ನು ಹೋಮ್‌ವರ್ಕ್ ಎಂದು ಭಾವಿಸಿ ತನ್ನ ನೋಟ್‌ಪುಸ್ತಕದಲ್ಲಿ ಬರೆದು–ಕೊಂಡ. ದಿನವೂ ಮಾಡುವ ಮಾಮೂಲಿ ಲೆಕ್ಕಗಳಿಗಿಂತ ಇವು ಸ್ವಲ್ಪ ಕಷ್ಟ ಎನ್ನಿಸಿದರೂ ಮರುದಿನವೇ ಅವನು ಆ ಲೆಕ್ಕಗಳಿಗೆ ಉತ್ತರ ಬರೆದುಕೊಂಡು ಬಂದು ಅಧ್ಯಾಪಕರಿಗೆ ತೋರಿಸಿದ! ಪ್ರೊಫೆಸರ್ ದಿಗ್ಭ್ರಮೆಗೊಂಡರು.

ಆ ವಿದ್ಯಾರ್ಥಿಯ ಹೆಸರೇ ಜಾರ್ಜ್ ಡ್ಯಾನ್ಸಿಕ್! ಮುಂದೆ ಪ್ರಸಿದ್ಧ ಗಣಿತ ತಜ್ಞನಾಗಿ ಹೆಸರು ಗಳಿಸಿದ ಪ್ರತಿಭಾನ್ವಿತ ವ್ಯಕ್ತಿ. ತಾವು ಮಾಡಿದ ಈ ಸಾಧನೆಗೆ ಅವರು ನೀಡಿದ ಕಾರಣ: 'ಯಾರೂ ಆ ಲೆಕ್ಕಗಳನ್ನು ಪರಿಹರಿಸಿರಲಿಲ್ಲ ಎಂಬ ವಿಷಯ ನನಗೆ ತಿಳಿದಿರಲಿಲ್ಲ. ಅದಕ್ಕಾಗಿಯೇ ನಾನು ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಾಯಿತು'.


ಒಂದು ಹಡಗನ್ನು ನಿರ್ಮಿಸಲಾಯಿತು. ಅದು ಅಮೇರಿಕದಿಂದ ಇಂಗ್ಲೆಂಡ್‌ಗೆ ಮೊದಲ ಪ್ರಯಾಣ ಮಾಡಿ ಬಂದು ತಲುಪಿತು. ಕ್ಲಾರ್ಕ್ ಕುಟುಂಬದವರು ಆ ಐಷಾರಾಮಿ ಹಡಗಿನಲ್ಲಿ ಟಿಕೆಟ್ ಖರೀದಿಸಿದರು. ಆ ಐಷಾರಾಮಿ ಹಡಗಿನಲ್ಲಿ ಪ್ರಯಾಣ ಮಾಡುವುದೇ ಒಂದು ಆಹ್ಲಾದಕರ ಅನುಭವವಾಗಿರುತ್ತದೆ ಎಂದು ಅವರು ಆನಂದಿಸಿದರು.

ಅವರು ಅಮೇರಿಕಕ್ಕೆ ಹೊರಡುವ ಒಂದು ವಾರದ ಮೊದಲು, ಕ್ಲಾರ್ಕ್‌ನ ಕೊನೆಯ ಮಗನಿಗೆ ಒಂದು ನಾಯಿ ಕಚ್ಚಿ ಬಿಟ್ಟಿತು. ಹುಚ್ಚು ನಾಯಿಗಳ ಕಡಿತದಿಂದ ಹರಡುವ ರೇಬಿಸ್ ಕಾಯಿಲೆಗೆ ಹೆದರಿ ಜಗತ್ತೇ ಬೆಚ್ಚಿಬೀಳುತ್ತಿದ್ದ ಕಾಲವದು. ಬಾಲಕನಿಗೆ ಚಿಕಿತ್ಸೆ ನೀಡಲಾಗಿದ್ದರೂ, ವೈದ್ಯರು ಅವರ ಇಡೀ ಕುಟುಂಬವನ್ನು 14 ದಿನಗಳ ಕಾಲ ಕ್ವಾರಂಟೈನ್‌ನಲ್ಲಿ ಇರಿಸಿದರು. ಅವರ ಮನೆ ಬಾಗಿಲಿಗೆ ಎಲ್ಲಾ ಅಡೆತಡೆಗಳನ್ನು ಹಾಕಿದರು. ಮನೆಯಿಂದ ಯಾರೂ ಹೊರಗೆ ಹೋಗಬಾರದು ಎಂದು ತಿಳಿಸಲಾಯಿತು. ಕೈಬಿಟ್ಟು ಹೋದ ಅಮೇರಿಕ ಪ್ರಯಾಣದ ಬಗ್ಗೆ ಇಡೀ ಕ್ಲಾರ್ಕ್‌ನ ಕುಟುಂಬ ಪರಿತಪಿಸಿ ಹೋಯಿತು. ಕ್ಲಾರ್ಕ್ ತನ್ನ ಮಗನೊಂದಿಗೆ ಆ ನಾಯಿಯನ್ನೂ, ಜೊತೆಗೆ ದೇವರನ್ನೂ ಸೇರಿಸಿಯೇ ಬೈದುಕೊಂಡರು.

ನಿರ್ದಿಷ್ಟ ದಿನ ಇವರಿಲ್ಲದೆಯೇ ಆ ಹಡಗು ತನ್ನ ಪ್ರಯಾಣವನ್ನು ಆರಂಭಿಸಿತು. ಹಡಗು ಹೊರಟ ಐದನೇ ದಿನ ಒಂದು ಆಘಾತಕಾರಿ ಸುದ್ದಿ ಬಂದು ತಲುಪಿತು. ನಡುಗಡಲಿನಲ್ಲಿ ಮಂಜುಗಡ್ಡೆಯ ಬಂಡೆಗೆ ಗುದ್ದಿ ಆ ಹಡಗು ಸಂಪೂರ್ಣವಾಗಿ ಮುಳುಗಿ ಹೋಯಿತು ಎಂದು! ಆ ಹಡಗಿನಲ್ಲಿದ್ದ ನೂರಾರು ಸಂಖ್ಯೆಯ ಪ್ರಯಾಣಿಕರಲ್ಲಿ ಯಾರೂ ಉಳಿದುಕೊಳ್ಳಲಿಲ್ಲ. ಹಾಂ! ಹೌದು, ನಿಮ್ಮ ಊಹೆ ಸರಿ! ಅವರು ಪ್ರಯಾಣ ಮಾಡಬೇಕಾಗಿದ್ದು ಟೈಟಾನಿಕ್ ಹಡಗಿನಲ್ಲಿ! ನಾಯಿ ಕಚ್ಚಿದ್ದನ್ನು ದುರದೃಷ್ಟವೆಂದು ಭಾವಿಸಿದ್ದ ಕ್ಲಾರ್ಕ್ ಕುಟುಂಬ ಈ ಮೂಲಕ ಬಚಾವಾಗಿತ್ತು. ಇದನ್ನು ಅರ್ಥ ಮಾಡಿಕೊಂಡ ಅವರು ದೇವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು.

"ನೀವು ಯಾಕೆ ಹೀಗೆ ಮಾಡಿದಿರಿ?" ಎಂದು ಪಶ್ಚಾತ್ತಾಪ ಪಟ್ಟರು ಗಾಂಧಿ. "ನೀವು ತುಂಬ ದೊಡ್ಡ ವ್ಯಕ್ತಿ. ನನ್ನೊಂದಿಗೆ ಮಾತನಾಡಲು ಸ್ವತಃ ನೀವೇ ಬಂದಿರುವುದರಿಂದ ನಿಮ್ಮೊಂದಿಗೆ ಮಾತನಾಡುವುದಕ್ಕಾಗಿ ನಾನು ನನ್ನ ಪ್ರಾರ್ಥನೆಯ ಸಮಯವನ್ನು ಕಡಿಮೆ ಮಾಡಿಕೊಂಡಿದ್ದೇನೆ" ಎಂದು ಅವರು ಹೇಳಿದರು. 'ದೇವರು ನನಗಿಂತ ತುಂಬಾ ದೊಡ್ಡ ವ್ಯಕ್ತಿ. ನೀವು ಅವನೊಂದಿಗೆ ಮಾತನಾಡುತ್ತಿರುವಾಗ ಅವನಿಗಿಂತ ಕಡಿಮೆ ಮನುಷ್ಯನಾದ ನಾನು ಕಾಯಬೇಕಾದುದೇ ಸರಿಯಾದುದು', ಎಂದರು ಮಹಾತ್ಮಗಾಂಧಿ.

ಮಹಾತ್ಮ ಗಾಂಧೀಜಿಗೆ ಪ್ರಾರ್ಥನೆ ಎಂಬುದು ಕೇವಲ ಆಚರಣೆಯಲ್ಲ; ದೇವರೊಂದಿಗೆ ಮಾತನಾಡುವ ಸಮಯ ಅದು!




RAMRAJ



# ಜೀವನ ನೀತಿಗಳನ್ನು ಅರಿಯೋಣ

ಬೀದಿಯಲ್ಲಿ ಅಡ್ಡಾಡುತ್ತಿದ್ದ ಒಂದು ನಾಯಿ, ಯಾರೂ ಇಲ್ಲದ ಒಂದು ಬಂಗಲೆಯೊಳಗೆ ಪ್ರವೇಶಿಸಿತು. ತಿನ್ನಲು ಏನಾದರೂ ಸಿಗಬಹುದೆಂದು ಭಾವಿಸಿ ಅಲ್ಲಿದ್ದ ಒಂದು ಕೋಣೆಯೊಳಗೆ ಹೋಯಿತು. ಆ ಕೋಣೆಯೊಳಗೆ ಸುತ್ತಲೂ ಹೇರಳವಾದ ನಾಯಿಗಳು ನಿಂತಿದ್ದವು. ಅದನ್ನು ನೋಡಿ ಕೋಪಗೊಂಡ ನಾಯಿ, ‘ಉರ್ರ್... ಲೊಳ್... ಲೊಳ್...’ ಎಂದು ಬೊಗಳಿತು. ಅಲ್ಲಿದ್ದ ಎಲ್ಲಾ ನಾಯಿಗಳೂ ಉತ್ತರವೆಂಬಂತೆ ಕೂಡಲೇ ತಾವೂ, ‘ಉರ್ರ್... ಲೊಳ್.... ಲೊಳ್...’ ಎಂದು ಬೊಗಳಿದವು.

ಅದನ್ನು ನೋಡಿ ಈ ನಾಯಿಗೆ ಕೊಂಚ ಹೆದರಿಕೆಯಾಯಿತು. ಆದರೂ ತನ್ನ ಭಯವನ್ನು ಹೊರಗೆ ತೋರ್ಪಡಿಸಿಕೊಳ್ಳದೆ ಮತ್ತೆ, ‘ಲೊಳ್... ಲೊಳ್...’ ಎಂದು ಬೊಗಳಲು ಆರಂಭಿಸಿತು. ಕೂಡಲೇ ಅಲ್ಲಿದ್ದ ಎಲ್ಲ ನಾಯಿಗಳು ಪ್ರತಿಯಾಗಿ ಬೊಗಳಿದವು. ಸ್ವಲ್ಪ ಹೊತ್ತು ಬೊಗಳಿದ ಈ ನಾಯಿಗೂ ಸಾಕಾಗಿ ಹೋಗಿ, ಬೊಗಳುವುದನ್ನು ನಿಲ್ಲಿಸಿತು. ಕೂಡಲೇ ಇತರ ನಾಯಿಗಳೂ ಬೊಗಳುವುದನ್ನು ನಿಲ್ಲಿಸಿದವು. ಸ್ವಲ್ಪ ಹೊತ್ತಿನಲ್ಲಿ ಮತ್ತೆ ಕೋಪ ಮತ್ತು ಬೇಸರದಿಂದ ಇದು ಬೊಗಳಲು ಆರಂಭಿಸಿದ ಕೂಡಲೇ, ಅವೂ ಮತ್ತೆ ಬೊಗಳ ತೊಡಗಿದವು. ಹೆದರಿಕೊಂಡ ಈ ನಾಯಿ ಕೊನಗೆ ಭಯದಲ್ಲಿ ಸತ್ತೇ ಹೋಯಿತು!

ಆ ನಾಯಿ ಕೋಪವನ್ನು ಬಿಟ್ಟು, ಸ್ವಲ್ಪ ತಾಳ್ಮೆಯಿಂದ ಅಲ್ಲಿರುವ ಎಲ್ಲವನ್ನೂ ಗಮನಿಸಿದ್ದರೆ ಅದಕ್ಕೆ ನಿಜ ಏನೆಂಬುದು ಅರ್ಥವಾಗುತ್ತಿತ್ತು. ಏಕೆಂದರೆ ಆ ಕೋಣೆಯಲ್ಲಿ ಸುತ್ತಲೂ ಸಾಕಷ್ಟು ನಿಲುವುಗನ್ನಡಿಗಳಿದ್ದವು. ತನ್ನ ಸುತ್ತಲೂ ಇದ್ದುದು ತನ್ನದೇ ಪ್ರತಿಬಿಂಬ ಎಂಬುದನ್ನು ಅದು ಅರ್ಥ ಮಾಡಿಕೊಳ್ಳಲಿಲ್ಲ. ಅಲ್ಲಿ ಬೊಗಳುತ್ತಿದ್ದುದು ಸುತ್ತಲೂ ಇದ್ದ ನಾಯಿಗಳಲ್ಲ. ತನ್ನದೇ ಮಾರ್ದನಿ ಎಂಬುದನ್ನು ಅದು ಅರ್ಥ ಮಾಡಿಕೊಳ್ಳಲೇ ಇಲ್ಲ.

‘ಕಬ್ಬಿಣವನ್ನು ಬೇರೆ ಯಾವುದರಿಂದಲೂ ನಾಶ ಮಾಡಲು ಸಾಧ್ಯವಿಲ್ಲ. ಸ್ವತಃ ಅದೇ ತುಕ್ಕು ಹಿಡಿಸಿಕೊಂಡು ತನಗೆ ತಾನೇ ನಾಶವಾಗಿ ಹೋಗುತ್ತದೆ’ ಎಂಬ ನಾಣ್ಣುಡಿಯೊಂದು ಉಂಟು. ಯಾವೊಬ್ಬ ಮನುಷ್ಯನನ್ನೇ ಆಗಲಿ ಬೇರೆ ಯಾರೂ ನಾಶ ಮಾಡಲು ಸಾಧ್ಯವಿಲ್ಲ. ಆದರೆ ಅವರು ಮಾಡುವ ಕೆಲಸಗಳೇ ಅವರನ್ನು ಕೆಳಗೆ ಬೀಳಿಸುವ ಆಯುಧಗಳಾಗಿ ಬದಲಾಗುತ್ತವೆ. ಒಬ್ಬ ವ್ಯಕ್ತಿ ತನ್ನ ಮನಸ್ಸಿನಲ್ಲಿ ಏನು ಭಾವಿಸುತ್ತಾನೋ, ಅದರ ಮೂಲಕವೇ ಆತನ ಬೆಳವಣಿಗೆಯೋ ಅವನತಿಯೋ ನಡೆಯುವುದು.

ಹಿಂದುಮುಂದೆ ಪರಿಚಯವೇ ಇಲ್ಲದ ಯಾರಾದರೂ ತಪ್ಪು ಮಾಡಿದರೂ ಕೂಡ, ಅವರನ್ನು ಕ್ಷಮಿಸಲು ಸಿದ್ಧವಿರುವವರು ಕೆಲವರು. ಆದರೆ ತಮ್ಮ ಗೆಳೆಯರೋ, ಬಂಧುಗಳೋ ಏನಾದರೂ ತಪ್ಪು ಮಾಡಿದರೆ ಅದನ್ನು ಕೂಡ ಸಹಿಸಿಕೊಳ್ಳಲು ಸಾಧ್ಯವಿಲ್ಲದವರೂ ಇದ್ದಾರೆ. ಕೂಡಲೇ ಇವರು ಶಿಕ್ಷೆ ವಿಧಿಸುವ ನ್ಯಾಯಾಧೀಶರಾಗಿ ಬದಲಾಗಿ ಬಿಡುತ್ತಾರೆ. ಕೋಪದ ಭರದಲ್ಲಿ ಆಡಿದ ಯಾವುದೋ ಒಂದೇ ಒಂದು ಮಾತಿಗಾಗಿ, ಜೊತೆಯಲ್ಲಿ ಹುಟ್ಟಿದ ಸಹೋದರರನ್ನು ಕೂಡ ತಮ್ಮ ಜನ್ಮವಿರೋಧಿಯ ಹಾಗೆ ಭಾವಿಸಿ ನಡೆದುಕೊಳ್ಳುವ ವ್ಯಕ್ತಿಗಳು ಹಲವರು ನಮ್ಮ ನಡುವೆಯೇ ಇದ್ದಾರೆ.

ಅವಸರವಾಗಿ ಹೊರಗೆ ಹೊರಡುವಾಗ, ಎದುರಿನಲ್ಲಿ ಬರುವವರನ್ನು ನೋಡಿ, ‘ಇವರ ಮುಖ ನೋಡಿ ನಾನು ಹೊರಗೆ ಹೋಗಬೇಕಾಗಿ ಬಂದಿದೆ. ಹೋಗುವ ಕೆಲಸ ಏನಾಗುತ್ತದೋ’ ಎಂದು ಕೆಲವರು ಶಕುನ ನೋಡುತ್ತಾರೆ. ‘ಈಗ ಹೋಗಿ ಇವರೇಕೆ ಫೋನ್ ಮಾಡುತ್ತಿದ್ದಾರೆ’ ಎಂದು ಸೆಲ್‌ಫೋನ್




ಪರದೆಯನ್ನು ನೋಡಿದ ಕೂಡಲೇ ಕೆಲವರು ಸಿಡುಕುತ್ತಾರೆ. 'ನಾನೇನು ಮಾತನಾಡಿದರೂ ಇವರು ಅದಕ್ಕೆ ವಿರುದ್ಧವಾದ ಅಭಿಪ್ರಾಯವನ್ನೇ ಯಾವಾಗಲೂ ಪ್ರಕಟಪಡಿಸುವುದೇಕೆ?' ಎಂದು ಕೆಲವರು ಕೋಪದಲ್ಲಿ ಕುದ್ದು ಹೋಗುತ್ತಾರೆ.



ಬದುಕಿನ ನಾಲ್ಕು ನಿಯಮಗಳನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳುವುದೇ ಇಲ್ಲ. ಇಲ್ಲಿ ನಡೆಯುವ ಹಲವು ಘಟನೆಗಳು ಸಹಜವಾಗಿ ನಡೆಯುವಂತೆ ಅನ್ನಿಸಿದರೂ, ಯಾವುದೋ ಒಂದು ಕಾರಣದಿಂದಾಗಿಯೇ ಅವು ನಡೆಯುತ್ತವೆ ಎಂಬುದನ್ನು ಈ ನಾಲ್ಕು ನಿಯಮಗಳು ನಮಗೆ ತಿಳಿಸಿಕೊಡುತ್ತವೆ. 'ಗೇಯಾಸ್ ಥಿಯರಿ' ಎಂಬ ಒಂದು ಪ್ರಸಿದ್ಧ ಸಿದ್ಧಾಂತವಿದೆ. 'ಬಣ್ಣದ ಚಿಟ್ಟೆಗಳು ಭೂಮಿಯ ಮೇಲೆ ಹಾರಾಡುತ್ತಾ ರೆಕ್ಕೆ ಬಡಿಯುವುದಕ್ಕೂ, ಭೂಮಿಯೊಳಗೆ ನಡೆಯುವ ಭೂಕಂಪಕ್ಕೂ ಸಂಬಂಧ ಇದೆ' ಎಂಬುದೇ ಆ ನಿಯಮ. ಅದೇ ರೀತಿಯಾದವುಗಳು ಈ ನಿಯಮಗಳು!

ಅವುಗಳಲ್ಲಿ ಮೊದಲನೇ ನಿಯಮ : 'ನೀವು ಯಾವ ನಿಮಿಷದಲ್ಲಿ ಯಾರನ್ನು ಭೇಟಿಯಾದರೂ, ತುಂಬಾ ಸರಿಯಾದ ವ್ಯಕ್ತಿಯನ್ನು ಭೇಟಿಯಾಗಿದ್ದೀರಿ' ಎಂಬುದೇ ಆಗಿದೆ.

ನಿಮ್ಮ ಬಂಧುಗಳು ಯಾರು ಎಂಬುದು ನೀವು ಹುಟ್ಟುವಾಗಲೇ ನಿರ್ಣಯವಾಗಿ ಬಿಟ್ಟಿರುತ್ತದೆ. ಆದರೆ ನಿಮ್ಮ ಗೆಳೆಯರು ನೀವು ಜೀವಿಸುವ ಸ್ಥಳದಲ್ಲಿ ನೀವು ಯಾರೊಂದಿಗೆ ಬೆರೆಯುತ್ತೀರಿ ಎಂಬುದನ್ನಾಧರಿಸಿರುತ್ತದೆ. ನಿಮ್ಮ ಜೀವನದಲ್ಲಿ ಯಾರೂ ಆಕಸ್ಮಿಕವಾಗಿಯೋ, ಅಕಾರಣವಾಗಿಯೋ ಅಡ್ಡ ಬರುವುದಿಲ್ಲ. ಪ್ರತಿಯೊಂದು ವಿಷಯವೂ ತುಂಬ ಖಚಿತವಾಗಿ ಯೋಜಿಸಲ್ಪಟ್ಟವು. ನಿಮ್ಮ ಜೀವನದಲ್ಲಿ ಬರುವ ಇವರು ನಿಮಗೆ ಹಲವು ಬಗೆಯ ಅನುಭವಗಳನ್ನು ನೀಡುತ್ತಾರೆ, ಪಾಠಗಳನ್ನು ಕಲಿಸಿ ಕೊಡುತ್ತಾರೆ. ನಿಮಗೆ ಅಗತ್ಯವಾಗಿ ಬೇಕಾದ ಸಹಾಯವನ್ನು ಮಾಡಿ ನಿಮ್ಮನ್ನು ಬಲಪಡಿಸುತ್ತಾರೆ. ತಪ್ಪುಗಳ ಮೂಲಕ ನಿಮ್ಮನ್ನು ಪಕ್ವಗೊಳಿಸುತ್ತಾರೆ. ಆದುದರಿಂದಲೇ ಯಾವ ಕಾರಣಕ್ಕೇ ಆಗಲಿ ಇವರು ಯಾರ ಮೇಲೂ ನೀವು ಕೋಪ ಮಾಡಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ.



ಎರಡನೇ ನಿಯಮ : 'ಯಾವುದು ನಡೆಯಿತೋ ಅದೊಂದನ್ನು ಬಿಟ್ಟು ಬೇರೆ ಯಾವುದೂ ನಡೆಯಲು ಸಾಧ್ಯವಿರಲಿಲ್ಲ'.

ಕೆಲವರು ಹಳೆಯ ತಪ್ಪುಗಳ ಬಗ್ಗೆಯೇ ಯೋಚಿಸಿ ಕಾಲ ಕಳೆಯುತ್ತಾರೆ. 'ನಗರದಲ್ಲಿ ಪ್ರಮುಖ ಕಾಲೇಜ್ ಪಕ್ಕದಲ್ಲಿ ಒಂದು ಗ್ರೌಂಡ್ ಸಾವಿರ ರೂಪಾಯಿಗಳೆಂದು ಹೇಳಿ, 10 ಗ್ರೌಂಡ್‌ಗಳನ್ನು ತೆಗೆದುಕೊಳ್ಳುವಂತೆ ನನಗೆ ಬಲವಂತ ಮಾಡಿದರು. ಆಗ ನಾನು ಅದನ್ನು ಕೊಂಡು ಕೊಂಡಿದ್ದರೆ ಈಗ ನಾನು ಕೋಟೀಶ್ವರನಾಗಿರುತ್ತಿದ್ದೆ' ಎಂದು ಹಲಬುತ್ತಲೇ ಇರುತ್ತಾರೆ ಕೆಲವರು. 'ಬಂಗಾರದ ಬೆಲೆ ಗ್ರಾಂಗೆ 400 ರೂಪಾಯಿಗಳಿದ್ದಾಗ ಹತ್ತು ಸವರನ್‌ನಲ್ಲಿ ಒಂದು ಚೈನ್ ಕೊಡಿಸುವಂತೆ ನಮ್ಮ ಮನೆಯವರ ಬಳಿ ಎಷ್ಟೆಷ್ಟೋ ಕೇಳಿ ನೋಡಿದೆ. ಅವರು ಅದನ್ನು ಕಿವಿಗೂ ಹಾಕಿಕೊಳ್ಳಲಿಲ್ಲ. ಈಗ ಅದರ ಹತ್ತು ಪಟ್ಟಿಗಿಂತ ಹೆಚ್ಚು ಬೆಲೆ ಏರಿ ಹೋಗಿದೆ' ಎಂದು ಕೆಲವು ಮಹಿಳೆಯರು ಕೊರಗುತ್ತಾರೆ. 'ಹಠ ಮಾಡಿ ನನ್ನನ್ನು ಎಂಜಿನಿಯರಿಂಗ್‌ಗೆ ಸೇರಿಸಿದರು. ಅದರ ಬದಲು ನಾನು ಕಾಮರ್ಸ್ ಓದಿದ್ದರೆ ಯಾವುದಾದರೂ ಒಂದು ಬ್ಯಾಂಕ್ ಕೆಲಸದಲ್ಲಿ ಟೆನ್ಷನ್ ಇಲ್ಲದೆ ಇರುತ್ತಿದ್ದೆ' ಎಂದು ಬೇಸರ ಮಾಡಿಕೊಳ್ಳುವವರು ಕೆಲವರು. 'ಎಲ್ಲರಿಗೂ ದೂರದ ಬೆಟ್ಟ ನುಣ್ಣಗೆ' ಇರುತ್ತದೆ. ಯಾರಿಗೆ ಗೊತ್ತು... 'ಕೈಬಿಟ್ಟ ಅವಕಾಶ' ಎಂದು ಇವರು ಭಾವಿಸುವ ಸ್ಥಳಗಳಲ್ಲಿ ಇರುವವರು, ಆ ಅವಕಾಶವನ್ನು ಶಾಪವಾಗಿ ಭಾವಿಸಲೂಬಹುದು!

ಮೂರನೇ ನಿಯಮ : 'ಪ್ರತಿ ಕ್ಷಣವೂ ಯಾವುದು ನಡೆಯಲು ಆರಂಭವಾಗುತ್ತದೆಯೋ, ಆ ಕ್ಷಣವೇ ಅದನ್ನು ಆರಂಭಿಸಲು ಇರುವ ಸೂಕ್ತವಾದ ಸಮಯ'.

ಇಪ್ಪತ್ತನೇ ವರ್ಷದಲ್ಲೇ ಒಂದು ಉದ್ಯಮವನ್ನು ಆರಂಭಿಸಿ ಕೋಟೀಶ್ವರರಾದವರೂ ಉಂಟು; ನಿವೃತ್ತಿಯ ನಂತರ ಹೊಸ ಉದ್ಯಮವನ್ನು ಆರಂಭಿಸಿ ಅದರಲ್ಲಿ ಯಶಸ್ಸನ್ನು ಗಳಿಸಿದವರೂ ಉಂಟು. ಕೆಲವರು 60 ವಯಸ್ಸಾಗುವ ಮುನ್ನವೇ ನಡೆದಾಡಲು ಕಷ್ಟ ಪಡುತ್ತಾರೆ. ನೂರು ವರ್ಷಗಳಾದ ಮೇಲೂ, ವೃದ್ಧರಿಗಾಗಿ ನಡೆಸಲ್ಪಡುವ 100 ಮೀಟರ್ ಓಟದ ಪಂದ್ಯದಲ್ಲಿ ಓಡಿ, ಗಿನ್ನೆಸ್ ರೆಕಾರ್ಡ್ ಮಾಡಿದವರೂ ಉಂಟು. 'ನನಗೆ ಈಗಷ್ಟೇ ಇದರಲ್ಲಿ ಭಾಗವಹಿಸುವ ಅವಕಾಶ ದೊರಕಿದೆ' ಎಂದು ನಂಬುವವರಿಗೆ ಯಾವಾಗಲೂ ಸೋಲು ಎಂಬುದು ಇರುವುದಿಲ್ಲ.


ನಾಲ್ಕನೇ ನಿಯಮ : 'ಮುಗಿದದ್ದು ಮುಗಿದು ಹೋಯಿತು'.

ಜೀವನದಲ್ಲಿ ಯಾವುದಾದರೂ ಒಂದು ವಿಷಯ ನಾವಂದುಕೊಂಡದ್ದಕ್ಕಿಂತ ಭಿನ್ನವಾಗಿ ನಡೆದು ಬಿಡಬಹುದು. 'ಒಂದು ವೇಳೆ ಇದು ಹೀಗೆ ನಡೆದಿದ್ದರೆ' ಎಂದು ಕಲ್ಪನೆ ಮಾಡಿಕೊಂಡು, ಅದರಲ್ಲೇ ಜೀವಿಸುವುದರಲ್ಲಿ ಅರ್ಥವಿಲ್ಲ. ಯಾರಿಂದಲೂ ಕಳೆದು ಹೋದ ಕ್ಷಣದಲ್ಲಿ ಬದುಕಲು ಸಾಧ್ಯವಿಲ್ಲ. ಹಾಗೇ ಕಾಲಯಂತ್ರದೊಳಗೆ ನುಸುಳಿ ನಡೆದು ಹೋದುದನ್ನು ಬದಲಾಯಿಸಲೂ ಯಾರಿಂದಲೂ ಸಾಧ್ಯವಿಲ್ಲ. ಜೀವನಕ್ಕೆ ರಿವರ್ಸ್ ಗೇರ್ ಎನ್ನುವುದು ಇಲ್ಲವೇ ಇಲ್ಲ.

ಪ್ರತಿಯೊಂದು ಘಟನೆಯೂ ನಮಗೆ ಜೀವನದಲ್ಲಿ ಕೆಲವು ಪಾಠಗಳನ್ನು ಹೇಳಿ ಕೊಡುತ್ತವೆ. ಅದನ್ನು ಕಲಿತುಕೊಳ್ಳಲು ಇಷ್ಟ ಇರುವವರು ಜೀವನದಲ್ಲಿ ಮುಂದೆ ಬರುತ್ತಾರೆ. ಹಠ ಹಿಡಿದು ಅಲ್ಲಿಯೇ ಮಡುಗಟ್ಟಿದಂತಿರುವವರು ಕಾಣದೆಯೇ ಹೋಗಿ ಬಿಡುತ್ತಾರೆ. ●



# ಅದಕ್ಕೂ ಕಾರಣ ಇದೆ!



ಎಲ್ಲಾ ಬಗೆಯ ಅನುಕೂಲಗಳೂ ಹೆಚ್ಚಾಗಿಯೇ ಇರುವ ಈ ನವೀನ ಕಾಲಘಟ್ಟದಲ್ಲಿ, ನಮ್ಮ ಬಳಿ ಕೊರತೆಯಾಗಿ ಹೋಗಿರುವ ಒಂದೇ ಒಂದು ವಿಷಯವೆಂದರೆ ಅದು, ತಾಳ್ಮೆ! ಯಾವುದಕ್ಕೆ ಕಾಯಲೂ ತಾಳ್ಮೆ ಇಲ್ಲದವರಾಗಿಯೇ ತುಂಬ ಜನ ಕಾಣಿಸುತ್ತಾರೆ. ಸಿಗ್ನಲ್‌ನಲ್ಲಿ ಕೆಂಪು ದೀಪ ಬಿದ್ದರೆ ಅಸಹನೆ, ನಾವು ಹೋಗಬೇಕಾದ ಬಸ್ ತಡವಾಗಿ ಬಂದರೆ ಅದಕ್ಕೂ ಅಸಹನೆ, ನಾವು ಭೇಟಿಯಾಗಲ ಹೋದ ವ್ಯಕ್ತಿಯನ್ನು ಭೇಟಿಯಾಗಲು ಸಾಧ್ಯವಾಗದೇ ಹೋದರೆ ಅದಕ್ಕೂ ಅಸಹನೆ... ಹೀಗೆ ದಿನವೂ ಜೀವನದಲ್ಲಿ ಪ್ರತಿದಿನವೂ ಎದುರಾಗುವ ಸಣ್ಣಪುಟ್ಟ ತೊಂದರೆಗಳು, ತಡವಾಗುವಿಕೆ, ಅಜಾಗರೂಕತೆ ಮೊದಲಾದವುಗಳಿಗೆಲ್ಲ ನಾವು ಬೇಸರಿಸಿಕೊಂಡು, ಕೋಪ ಮಾಡಿಕೊಂಡು ನಮ್ಮ ಸಹಜತೆಯನ್ನು ಕಳೆದುಕೊಳ್ಳಬೇಕೇನು? ಈ ಪ್ರಶ್ನೆ ನಿಮ್ಮೊಳಗೆ ಮೂಡಿದರೆ, ನೀವು ಖಂಡಿತವಾಗಿ ಇದನ್ನು ಓದಲೇಬೇಕು...

2001ನೇ ವರ್ಷದ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು, ಅಮೇರಿಕದ ನ್ಯೂಯಾರ್ಕ್ ನಗರದಲ್ಲಿರುವ ವಿಶ್ವಮಾರುಕಟ್ಟೆಯ ಜೋಡಿ ಗೋಪುರಗಳ

ಕಟ್ಟಡಗಳು ಭಯೋತ್ಪಾದಕರ ದಾಳಿಗೆ ತುತ್ತಾಗಿ ಧರೆಗುರುಳಿದವು. ಎರಡು ವಿಮಾನಗಳು ದಾಳಿ ಮಾಡಿದುದರಿಂದ, ವಿಶ್ವಮಾರುಕಟ್ಟೆಯ ಕಟ್ಟಡಗಳು ನುಚ್ಚುನೂರಾಗಿ ಕೆಳಗುರುಳಿ ಸಾವಿರಾರು ಸಂಖ್ಯೆಯ ಜನರು ದಾರುಣವಾಗಿ ಮರಣ ಹೊಂದಿದರು. ಆ ಕಟ್ಟಡಗಳಲ್ಲಿ ಹಲವು ಸಂಸ್ಥೆಗಳ ಕಛೇರಿಗಳು ಇದ್ದವು. ಈ ದಾಳಿಯಿಂದ ಏರ್ಪಟ್ಟ ಆಘಾತ ಹಾಗೂ ಆ ದುಃಖದಿಂದ ಹೊರಬರಲು ಅಲ್ಲಿನ ಜನರಿಗೆ ತುಂಬಾ ದಿನಗಳೇ ಹಿಡಿದವು.

ಅದರ ನಂತರ ಕೆಲವು ತಿಂಗಳುಗಳ ನಂತರ ನ್ಯೂಯಾರ್ಕ್‌ನಲ್ಲಿ ಒಂದು ಸಭೆ ಏರ್ಪಾಡಾಯಿತು. ದಾಳಿ ನಡೆದ ಕಟ್ಟಡಗಳಲ್ಲಿ ಇದ್ದ ಕೆಲಸ ಮಾಡುತ್ತಿದ್ದವರಲ್ಲಿ, ದಾಳಿಗೆ ತುತ್ತಾಗದೆ ಬದುಕುಳಿದವರು ಸೇರಿ ನಡೆಸಿದ ಸಭೆ ಇದು. ತಾವು ಹೇಗೆ ಮರಣದಿಂದ ತಪ್ಪಿಸಿಕೊಂಡೆವು ಎಂಬ ಅನುಭವವನ್ನು ಅವರು ಅಲ್ಲಿ ಹಂಚಿಕೊಂಡರು.

▪ ಒಂದು ಸಂಸ್ಥೆಯ ಮ್ಯಾನೇಜರ್ ಅಂದು ತಡವಾಗಿ ಕಛೇರಿಗೆ ಬರಲು ಕಾರಣ ಅವರ ಮಗು. ಅವರ ಮಗು ಅಂದೇ ಮೊದಲ ಬಾರಿಗೆ ಶಾಲೆಗೆ ಹೋಗಬೇಕಾಗಿತ್ತು. 'ನನ್ನನ್ನು ಶಾಲೆಗೆ ಅಪ್ಪ ಕರೆದು–



ಕೊಂಡು ಹೋಗಿ ಬಿಡಬೇಕು' ಎಂದು ಹಠ ಹಿಡಿದುದರಿಂದ ಬೇರೆ ದಾರಿಯಿಲ್ಲದೆ ಅವರು ಕೋಪದಿಂದಲೇ ಮಗುವನ್ನು ಶಾಲೆಗೆ ಕರೆದು-ಕೊಂಡು ಹೋದರು. ಹಿಂದಿರುಗಿ ಬರಲು 15 ನಿಮಿಷ ತಡವಾಯಿತು. ಹೀಗಾಗಿ ಅವರು ಜೀವ ಉಳಿಸಿಕೊಂಡರು.

▪ ಒಬ್ಬ ಮಹಿಳೆ ಲೇಟಾಗಿ ಬರಲು ಹೇಳಿದ ಕಾರಣ ಇದು: ಅವರ ಮನೆಯ ಅಲಾರಂನಲ್ಲಿ ದಿಢೀರನೆ ಬ್ಯಾಟರಿ ಮುಗಿದು ಹೋದುದರಿಂದ, ಆ ಗಡಿಯಾರ ಸರಿಯಾದ ಸಮಯವನ್ನು ತೋರಿಸಲಿಲ್ಲ. ಹೀಗಾಗಿ ಅವರು ಸರಿಯಾದ ಸಮಯಕ್ಕೆ ಕಛೇರಿಗೆ ಬರಲು ಸಾಧ್ಯವಾಗಲಿಲ್ಲ. ತಡವಾಗಿ ಎದ್ದು, ಅಲಾರಾಂ ಅನ್ನು ಬೈದುಕೊಳ್ಳುತ್ತಲೇ ಅವಸರ ಅವಸರವಾಗಿ ಸಿದ್ಧವಾಗಿ ಹೊರಡುವಷ್ಟರಲ್ಲಿ ಅರ್ಧ ಗಂಟೆ ತಡವಾಗಿತ್ತು. ಅವರು ಕಛೇರಿಯನ್ನು ಸಮೀಪಿಸುವಾಗ, ತಮ್ಮ ಕಛೇರಿ ಇದ್ದ ಕಟ್ಟಡ ಹೊಗೆಯಿಂದ ತುಂಬಿಕೊಂಡು, ನಿಧಾನವಾಗಿ ಕೆಳಗುರುಳುತ್ತಿರುವುದನ್ನು ಅವರು ಕಣ್ಣಾರೆ ನೋಡಿದರು.

▪ ಎಂದೂ ಕಛೇರಿಗೆ ತಡವಾಗಿ ಬಾರದ ಒಬ್ಬರು ಅಂದು ಅನಿವಾರ್ಯವಾಗಿ ತಡವಾಗಿ ಬರಬೇಕಾಯಿತು. ಅವರು ದಿನವೂ ಬರುವ ದಾರಿಯಲ್ಲಿ ಎರಡು ಕಾರುಗಳು ಗುದ್ದಿಕೊಂಡುದರಿಂದ ಒಂದು ದೊಡ್ಡ ಅಪಘಾತ ಸಂಭವಿಸಿ, ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಏರ್ಪಟ್ಟಿತು. ಪೊಲೀಸರು ಬಂದು ಪರಿಸ್ಥಿತಿಯನ್ನು ಹತೋಟಿಗೆ ತರುವಷ್ಟರಲ್ಲಿ ಒಂದು ಗಂಟೆ ತಡವಾಗಿತ್ತು. ಅವಸರ ಅವಸರವಾಗಿ ಕಾರ್ ಓಡಿಸಿಕೊಂಡು ಬಂದು ಇನ್ನೇನು ಕಛೇರಿಯನ್ನು ಸಮೀಪಿಸುವಾಗ, ಇನ್ನೊಂದು ಟ್ರಾಫಿಕ್ ಜಾಮ್‌ನಲ್ಲಿ ಅವರು ಸಿಕ್ಕಿಕೊಳ್ಳಬೇಕಾಯಿತು. ಕೋಪದಿಂದ ಎಲ್ಲರನ್ನೂ, ಎಲ್ಲವನ್ನೂ ಬೈದುಕೊಳ್ಳುತ್ತಲೇ ಕಾರಿನಿಂದ ಕಛೇರಿಯ ಕಡೆಗೆ ಇಣುಕಿ ನೋಡಿದ ಅವರಿಗೆ, ಅವರ ಕಛೇರಿ ಇದ್ದ ಕಟ್ಟಡ ಕೆಳಗುರುಳಿ ಬಿದ್ದುದರಿಂದಲೇ ಅಲ್ಲಿ ಟ್ರಾಫಿಕ್ ಜಾಮ್ ಏರ್ಪಟ್ಟಿರುವುದು ಎಂದು ತಿಳಿಯಿತು!

▪ ಒಂದು ಕಛೇರಿಯಲ್ಲಿ ಟೆಲಿಫೋನ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ಒಬ್ಬ ಯುವತಿಯ ಜೀವ ಉಳಿದ ಕಾರಣ ಕೇಳಿದರೆ ನಗು ಬಾರದೇ ಇರದು! ಬೆಳಿಗ್ಗೆ ಎದ್ದು, ಸಿದ್ಧವಾಗಿ, ಉಪಹಾರ ಸೇವಿಸಲು ಕುಳಿತುಕೊಂಡಾಗ ಅವರು ತಿನ್ನುತ್ತಿದ್ದ ಆಹಾರ ಆಕಸ್ಮಿಕವಾಗಿ ಅವರ ಬಟ್ಟೆಯ ಮೇಲೆ ಚೆಲ್ಲಿಕೊಂಡಿತು. ಬಟ್ಟೆ ಬದಲಾಯಿಸಿಕೊಂಡು ಹೊರಬರುವುದರೊಳಗೆ ಅವರು ದಿನವೂ ಪ್ರಯಾಣಿಸುವ ಬಸ್ ಹೊರಟು ಹೋಗಿಯಾಗಿತ್ತು. ಮುಂದಿನ ಬಸ್‌ಗಾಗಿ 20 ನಿಮಿಷ ಕಾಯಬೇಕಾಯಿತು. ಟೆನ್ಷನ್ ಮಾಡಿಕೊಂಡೇ ಆ ಬಸ್ ಹತ್ತಿ ಇವರು ಕಛೇರಿಗೆ ಬಂದರು. ಬಸ್‌ನ ಕಿಟಕಿಯಿಂದ ಅವರು ತಮ್ಮ ಕಛೇರಿಯಿದ್ದ ಕಟ್ಟಡದ ಕಡೆ ಕಣ್ಣು ಹಾಯಿಸಿದಾಗ ಅವರು ನೋಡಿದ ದೃಶ್ಯ ಅವರಿಗೆ ಆಘಾತವನ್ನೇ ಉಂಟು ಮಾಡಿತು. ಅವರ ಕಛೇರಿಯಿಂದ ಕಟ್ಟಡಗಳಿಗೆ ವಿಮಾನ ಗುದ್ದುವುದನ್ನು ಅವರು ಕಣ್ಣಾರೆ ನೋಡಿದರು!

▪ ಇನ್ನೊಂದು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಾರ್ವಜನಿಕ ಸಂಪರ್ಕಾಧಿಕಾರಿಯೊಬ್ಬರು, ಕಛೇರಿಗೆ ಹೊರಡುವುದಕ್ಕಾಗಿ ಮನೆಯಿಂದ ಹೊರಗೆ ಬರಲು ಹೊಸಲು ದಾಟುವ ಸಮಯದಲ್ಲಿ ಅವರ ಮನೆಯ ಲ್ಯಾಂಡ್ ಫೋನ್ ರಿಂಗಣಿಸಿತು. ಫೋನಿನಲ್ಲಿ ಮಾತನಾಡಿದ್ದು ಹಳ್ಳಿಯಲ್ಲಿದ್ದ ಅವರ ಅಜ್ಜಿ. ಇವರ ಅವಸರವನ್ನು ಅರ್ಥ ಮಾಡಿಕೊಳ್ಳದ ಅಜ್ಜಿ, ತುಂಬ ಹೊತ್ತು ಮಾತನಾಡುತ್ತಲೇ ಇದ್ದರು. ಕೆಲವಾರು ತಿಂಗಳ ನಂತರ ಬಂದ ಫೋನ್ ಅದಾಗಿದ್ದುದರಿಂದ ಇವರೂ ಅವಸರ ಪಟ್ಟು ಫೋನ್ ಇಡಲು ಸಾಧ್ಯವಾಗಲಿಲ್ಲ. ಆ 10 ನಿಮಿಷಗಳ ಫೋನ್ ಕರೆ ಇವರ ಜೀವವನ್ನು ಉಳಿಸಿತ್ತು.

▪ ಇನ್ನೊಬ್ಬರು ಹೇಳಿದ್ದು ಇದು : ರಾತ್ರಿ ಶೆಡ್‌ನಲ್ಲಿ ನಿಲ್ಲಿಸಿದ್ದ ಕಾರ್, ಬೆಳಿಗ್ಗೆ ಕಛೇರಿಗೆ ಹೊರಡುವ ಸಮಯದಲ್ಲಿ ನೋಡಿದರೆ ಪಂಕ್ಚರ್ ಆಗಿ ಹೋಗಿತ್ತು! ಟಯರ್ ಬದಲಾಯಿಸಿಕೊಂಡು ಹೊರಡಲು ತಡವಾದುದರಿಂದ ಅಂದು ಅವರ ಜೀವ ಉಳಿದಿತ್ತು!

▪ ಒಬ್ಬ ಸಾಫ್ಟ್ ವೇರ್ ಇಂಜಿನಿಯರ್ ಹೊಸದಾಗಿ ಖರೀದಿಸಿದ್ದ ಶೂ ಅನ್ನು ಅಂದೇ ಮೊದಲ ಸಲ ಧರಿಸಿ ಕಛೇರಿಗೆ ಹೊರಟರು. ಕೊಂಚ ಬಿಗಿಯಾಗಿದ್ದ ಆ ಶೂ ಧರಿಸಿ ಸ್ವಲ್ಪ ದೂರ ನಡೆಯುವಷ್ಟರಲ್ಲಿ ಅವರ ಪಾದಗಳಲ್ಲಿ ಗುಳ್ಳೆಗಳಾಗಿ ಹೋದವು. ಅವರಿಂದ ಒಂದು ಹೆಜ್ಜೆ ಕೂಡ ಕಾಲೆತ್ತಿಡಲು ಆಗಲೇ ಇಲ್ಲ. ಬಸ್‌ನಿಂದ ಇಳಿದು, ಒಂದು ಮೆಡಿಕಲ್ ಷಾಪ್‌ಗೆ ಹೋಗಿ, ಬ್ಯಾಂಡ್ ಏಯ್ಡ್ ಕೊಂಡು ಧರಿಸಿದ ನಂತರವೂ ಸಹಜವಾಗಿ ನಡೆಯಲು ಅವರಿಂದ ಸಾಧ್ಯವಾಗಲಿಲ್ಲ. ನಿಧಾನವಾಗಿ ಆಫೀಸ್‌ನತ್ತ ಹೆಜ್ಜೆ ಹಾಕಿಕೊಂಡು ಬಂದಾಗ, ಅದು ನುಚ್ಚುನೂರಾಗಿ ಕೆಳಗುರುಳುತ್ತಿದ್ದುದನ್ನು ಅವರು ನೋಡಿದರು.

▪ ಒಬ್ಬ ಯುವತಿಗೆ ಮಗು ಹುಟ್ಟಿ ಕೆಲವು ದಿನಗಳಷ್ಟೇ ಆಗಿದ್ದವು. ಅವಳ ಮಗುವನ್ನು ನೋಡಿಕೊಳ್ಳಲು ದಿನವೂ ಒಬ್ಬ ಕೆಲಸದಾಕೆ ಮನೆಗೆ ಬರುತ್ತಿದ್ದಳು. ಆ ದಿನ ಆ ಕೆಲಸದಾಕೆ ದಿಢೀರನೆ ರಜೆ ತೆಗೆದು-ಕೊಂಡುದರಿಂದ, ಬೇರೆ ದಾರಿಯಿಲ್ಲದೆ ಅವಳು ಅಂದು ರಜೆ ಹಾಕಿ ಮನೆಯಲ್ಲೇ ಉಳಿಯಬೇಕಾಯಿತು. ಒಂದು ವೇಳೆ ಆ ಕೆಲಸದಾಕೆ ಎಂದಿನಂತೆ ಅಂದೂ ಕೆಲಸಕ್ಕೆ ಬಂದಿದ್ದರೆ, ಆ ಮಗು ತನ್ನ ತಾಯಿಯನ್ನು ನಿರಂತರವಾಗಿ ಕಳೆದುಕೊಳ್ಳಬೇಕಾಗುತ್ತಿತ್ತು.

▪ ಗರ್ಭಿಣಿಯಾಗಿದ್ದ ಒಬ್ಬ ಯುವತಿಗೆ ಅದರ ಹಿಂದಿನ ದಿನ ಬೆಳಿಗ್ಗೆ ಎದ್ದಾಗಿನಿಂದಲೂ ವಾಂತಿಯಾಗುತ್ತಿತ್ತು. ಆದುದರಿಂದ ಅವಳು ತಡವಾಗಿಯೇ ಕಛೇರಿಗೆ ಬಂದಿದ್ದಳು. ಅದನ್ನು ಸಹಿಸಿಕೊಳ್ಳದ ಅವಳ ಕಛೇರಿಯ ಮ್ಯಾನೇಜರ್, ಅವಳನ್ನು ಕೆಲಸದಿಂದ ತೆಗೆದೇ ಹಾಕಿಬಿಟ್ಟರು. 'ತನ್ನ ಹೊಟ್ಟೆಯಲ್ಲಿರುವ ಮಗುವಿನ ಕಾರಣದಿಂದಾಗಿಯೇ ತನಗೆ ಕೆಲಸ ಹೋದದ್ದು' ಎಂದು ಅವಳು ಮಗುವನ್ನು ಬೈದುಕೊಂಡಳು. ಆಕೆ ಕೆಲಸ ಕಳೆದುಕೊಂಡ ಮರುದಿನವೇ ಈ ದಾಳಿ ನಡೆದದ್ದು!

ತಮ್ಮ ಜೀವನದಲ್ಲಿ ಅನಿರೀಕ್ಷಿತವಾಗಿ ನಡೆದ ತಪ್ಪು ಘಟನೆಗಳೋ, ತಡವಾದ ಕಾರಣಗಳೋ ತಾವು ಜೀವದಿಂದಿರಲು ಕಾರಣವಾಗಿದ್ದುದನ್ನು ಅಂದು ಅವರೆಲ್ಲರೂ ಕಣ್ಣೀರು ತುಂಬಿಕೊಂಡು ಹಂಚಿಕೊಂಡರು. ಮುಂದಿನ ಸಲ ಬಸ್ ತಪ್ಪಿ ಹೋದಾಗ, ಕ್ಯೂನಲ್ಲಿ ಕಾಯಬೇಕಾಗಿ ಬಂದಾಗ, ಮಗು ಬೆಳಿಗ್ಗೆ ಶಾಲೆಗೆ ಹೊರಡಲು ತಡ ಮಾಡುವಾಗ, ಯಾರೋ ಫೋನ್ ಮಾಡಿ ನಮ್ಮ ಅವಸರವನ್ನು ಅರ್ಥ ಮಾಡಿಕೊಳ್ಳದೆ ಸುಮ್ಮನೆ ಮಾತನಾಡುವಾಗ, ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಕೊಂಡು ತತ್ತರಿಸುವಾಗ ಕೋಪ ಅಥವಾ ಅಸಹನೆ ಪಟ್ಟುಕೊಳ್ಳಬೇಡಿ. ಈ ಕ್ಷಣ ಹೀಗೆ ಸಿಕ್ಕಿಕೊಳ್ಳಲು ಕೂಡ ಯಾವುದೋ ಒಂದು ಕಾರಣ ಇದೆ ಎಂದು ಭಾವಿಸಿಕೊಳ್ಳಿ. ಅವು ದೇವರ ಅನುಗ್ರಹದಿಂದ ದೊರೆತ ಒಳ್ಳೆಯ ವಿಷಯವಾಗಿರಲೂ ಬಹುದು ಎಂದು ಭಾವಿಸಿಕೊಂಡರೆ... ಯಾವಾಗಲೂ ನಿಮ್ಮೊಳಗೆ ಕೋಪವಾಗಲೀ, ಅಸಹನೆಯಾಗಲೀ ಮೂಡಲು ಸಾಧ್ಯವೇ ಇಲ್ಲ! ●

# ಕಾರಣ ಇರುವ ಲೆಕ್ಕ!

ಪ್ರಸಿದ್ಧ ದೇವಾಲಯವೊಂದರಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿ ಇದ್ದ. ದಿನವೂ ಹೇರಳವಾದ ಭಕ್ತರು ಬಂದು ಹೋಗುತ್ತಿದ್ದ ಆ ದೇವಾಲಯವನ್ನು ಶುಚಿಗೊಳಿಸುವ ಕೆಲಸ ಮಾಡುತ್ತಿದ್ದ ಆ ವ್ಯಕ್ತಿ ಮನಸ್ಸಿನಲ್ಲಿ ದೇವರ ಧ್ಯಾನದ ಹೊರತಾಗಿ ಬೇರೆ ಚಿಂತನೆ ಇರುತ್ತಿರಲಿಲ್ಲ. ದೇವಾಲಯಕ್ಕೆ ಬರುವ ಎಲ್ಲರೂ ದೇವರ ಮುಂದೆ ನಿಂತು ಏನೇನೋ ಬೇಡುತ್ತಿದ್ದರು. ಈತ ಯಾವಾಗಲೂ ದೇವಸ್ಥಾನದಲ್ಲೇ ಇದ್ದರೂ ದೇವರ ಮುಂದೆ ಬಂದು ನಿಂತು ಎಂದೂ ಏನನ್ನೂ ಬೇಡಿದ್ದೇ ಇಲ್ಲ!

ಆತ ತನ್ನ ಮನಸ್ಸಿನಲ್ಲಿ, 'ದೇವರು ಯಾವಾಗಲೂ ಹೀಗೆ ನಿಂತೇ ಇರುತ್ತಾನಲ್ಲ, ಆತನ ಕಾಲುಗಳು ನೋಯದೇ?' ಎಂಬ ಅನುಕಂಪ ಇರುತ್ತಿತ್ತು. ಒಂದು ದಿನ ಗರ್ಭಗುಡಿಯೊಳಗೆ ಹೋಗಿ, 'ಬೇಕಾದರೆ ನಿನಗೆ ಬದಲಾಗಿ ನಾನು ಸ್ವಲ್ಪ ಹೊತ್ತು ನಿಂತುಕೊಳ್ಳುತ್ತೇನೆ. ನೀನು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೋ ದೇವರೇ!' ಎಂದು ದೇವರಿಗೆ ಹೇಳಿದ.

ದೇವರು ಆತನ ಮುಂದೆ ಪ್ರತ್ಯಕ್ಷನಾದ. 'ನಿನ್ನಿಷ್ಟದಂತೆಯೇ ಇಂದು ನಾನು ವಿಶ್ರಾಂತಿ ಪಡೆದುಕೊಳ್ಳುತ್ತೇನೆ. ನನ್ನ ಬದಲಿಗೆ ನೀನು ಇಲ್ಲಿ ನಿಂತುಕೋ. ಆದರೆ ನನ್ನ ಹಾಗೆಯೇ ನೀನೂ ಕೊಂಚ ಕೂಡ ಅಲುಗಾಡದೆ ನಿಂತುಕೊಳ್ಳಬೇಕು. ನೀನು ವಿಗ್ರಹ ಎಂಬುದನ್ನು ಯಾವ ಕಾರಣಕ್ಕೂ ಮರೆತು ಬಿಡಬಾರದು. ಯಾರ ಜೊತೆಯಲ್ಲೂ ನೀನು ಮಾತನಾಡಬಾರದು' ಎಂದು ಸೂಚನೆ ನೀಡಿದ. ಇವನೂ ಅದಕ್ಕೆ ಸಮ್ಮತಿಸಿದ. ಅವನನ್ನು ತನ್ನ ವಿಗ್ರಹದಂತೆಯೇ ದೇವರು ಪರಿವರ್ತಿಸಿದ.

ಅಂದು ಮೊದಲಿಗೆ ದೇವಾಲಯಕ್ಕೆ ಬಂದದ್ದು ಒಬ್ಬ ಶ್ರೀಮಂತ. 'ನನ್ನ ಉದ್ಯಮ ಚೆನ್ನಾಗಿ ಅಭಿವೃದ್ಧಿಯಾಗಬೇಕು' ಎಂದು ಅವನು ಬೇಡಿಕೊಂಡು, ತುಂಬಾ ದೊಡ್ಡ ಮೊತ್ತದ ಹಣವನ್ನು ಹುಂಡಿಗೆ ಹಾಕಿದ. ಆತ ಹಿಂದಿರುಗಿ ಹೋಗುವ ಮುನ್ನ, ಹಣ ಇದ್ದ ತನ್ನ ಕೈಚೀಲವನ್ನು ತೆಗೆದುಕೊಂಡು ಹೋಗಲು ಮರೆತು ಹೋದ. ನಂತರ ಒಬ್ಬ ಕಡು ಬಡವನಾಗಿದ್ದವ ಬಂದ. ಹುಂಡಿಯೊಳಗೆ ಹಾಕಲು ಆತನ ಬಳಿ ಇದ್ದದ್ದು ಕೇವಲ ಒಂದೇ ಒಂದು ರೂಪಾಯಿ. ಅದನ್ನು ಹುಂಡಿಗೆ ಹಾಕಿ, 'ನನ್ನ ಕುಟುಂಬದ ಎಲ್ಲಾ ಸಮಸ್ಯೆಗಳು ಪರಿಹಾರವಾಗಲು ಯಾವುದಾದರೂ ದಾರಿ ತೋರಿಸು ದೇವರೇ!' ಎಂದು ಬೇಡಿಕೊಂಡ. ಆತ ಪ್ರಾರ್ಥನೆ ಮುಗಿಸಿ ಕಣ್ಣುಗಳನ್ನು ತೆರೆದಾಗ, ಆತನ ಕಣ್ಣಿಗೆ ಈ ಹಿಂದೆ ಬಂದು ಹೋದ ಶ್ರೀಮಂತ ಅಲ್ಲಿಯೇ ಬಿಟ್ಟು ಹೋಗಿದ್ದ ಹಣದ ಚೀಲ ಕಾಣಿಸಿತು. 'ಓ! ದೇವರೇ! ನನ್ನ ಪ್ರಾರ್ಥನೆಗೆ ಓಗೊಟ್ಟು ನನಗೆ ಈ ಹಣ ಕರುಣಿಸಿದ್ದಕ್ಕೆ ಧನ್ಯವಾದಗಳು' ಎಂದು ಹೇಳಿ ಅವನು ಆ ಹಣದ ಚೀಲವನ್ನು ತೆಗೆದುಕೊಂಡು ಹೋದ.

ಸ್ವಲ್ಪ ಸಮಯ ಕಳೆದ ಮೇಲೆ ಒಬ್ಬ ವ್ಯಾಪಾರಿ ಅಲ್ಲಿಗೆ ಬಂದ. 'ನಾನು ವ್ಯಾಪಾರದ ನಿಮಿತ್ತ ತುಂಬಾ ದೂರ ಕಡಲಿನಲ್ಲಿ ಹೋಗಬೇಕಾಗಿದೆ. ನನ್ನನ್ನು ಆಶೀರ್ವದಿಸು ದೇವರೇ!' ಎಂದು ಅವನು ಪ್ರಾರ್ಥಿಸಿಕೊಂಡ. ಆ ಸಮಯದಲ್ಲಿ ಈ ಹಿಂದ ಹಣ ಕಳೆದುಕೊಂಡಿದ್ದ ಶ್ರೀಮಂತ ವ್ಯಕ್ತಿ ಕಾವಲುಗಾರನನ್ನು ಜೊತೆಯಲ್ಲಿ ಕರೆದುಕೊಂಡು ಗರ್ಭಗುಡಿಯೊಳಗೆ ಬಂದ. ಅಲ್ಲಿ ನಿಂತಿದ್ದ ವ್ಯಾಪಾರಿಯನ್ನು ನೋಡಿ, 'ಈತನೇ ನನ್ನ ಹಣದ ಚೀಲ ತೆಗೆದುಕೊಂಡಿರಬೇಕು. ಇವನನ್ನು ಹಿಡಿದುಕೊಂಡು ಹೋಗಿ ವಿಚಾರಿಸಿ' ಎಂದು ಅವನು ಆಜ್ಞಾಪಿಸಿದ. ಕಾವಲುಗಾರನೂ ಅದೇ ರೀತಿಯಾಗಿ ಅವನ್ನು ಹಿಡಿದು ಎಳೆದುಕೊಂಡು ಹೋದ.

ಇಷ್ಟು ಹೊತ್ತು ದೇವರಂತೆ ಸುಮ್ಮನೆ ನಿಂತಿದ್ದ ಈತನಿಗೆ, ತನ್ನ ಕಣ್ಣ ಮುಂದೆಯೇ ನಡೆಯುತ್ತಿರುವ ಈ ಅನ್ಯಾಯವನ್ನು ನೋಡಿ ಸುಮ್ಮನೆ ಇರಲು ಸಾಧ್ಯವಾಗಲೇ ಇಲ್ಲ. 'ಹಣದ ಚೀಲವನ್ನು ಇವನು ತೆಗೆದುಕೊಳ್ಳಲಿಲ್ಲ' ಎಂದು ಅವನು ಬಾಯ್ತೆರೆದು ಮಾತನಾಡಲು ನೋಡುವಾಗ, ದೇವರು ಅವನು ಮಾತನಾಡಲಾಗದಂತೆ ಅವನ ಬಾಯಿ ಮುಚ್ಚಿಸಿಬಿಟ್ಟ.

'ನಾನು ಕೊಡುವುದಕ್ಕೂ ಕಾರಣವಿದೆ. ತಡೆಯಲೂ ಕಾರಣವಿದೆ. ಆ ಶ್ರೀಮಂತ ತಪ್ಪು ದಾರಿಯಲ್ಲಿ ಸಂಪಾದಿಸಿದ ಹಣವನ್ನು, ತುಂಬ ಅಗತ್ಯವಿರುವ ಬಡವನಿಗೆ ಸಿಗುವಂತೆ ಮಾಡಿದೆ. ಇದರಿಂದ ಆ ಶ್ರೀಮಂತನ ಪಾಪದ ಪ್ರಮಾಣವೂ ತಗ್ಗುತ್ತದೆ. ಆ ತಪ್ಪನ್ನು ವ್ಯಾಪಾರಿಯ ಮೇಲೆ ಹಾಕಿದ್ದಕ್ಕೂ ಕೂಡ ಕಾರಣವಿದೆ. ಇಂದು ಆತ ಪ್ರಯಾಣವನ್ನು ಆರಂಭಿಸಿದರೆ, ಆತ ಪ್ರಯಾಣಿಸುವ ಹಡಗು ಚಂಡಮಾರುತಕ್ಕೆ ಸಿಕ್ಕಿ ಮುಳುಗುವ ಅಪಾಯವಿದೆ. ಅದನ್ನು ತಡೆಯುವುದಕ್ಕಾಗಿಯೇ ಅವನನ್ನು ಹೀಗೆ ತಡೆದು ನಿಲ್ಲಿಸಬೇಕಾಯಿತು. ನಾನು ಮಾಡುವ ಪ್ರತಿಯೊಂದು ಕೆಲಸಕ್ಕೂ ಕಾರಣಗಳು ಇರುತ್ತವೆ' ಎಂದು ದೇವರು ಹೇಳಿದ.

ಆ ಕೆಲಸಗಾರನಿಗೆ ಸತ್ಯ ಏನೆಂಬುದು ಅರ್ಥವಾಯಿತು. ●




Power of Trust
India's Most Trusted Dhoti Brand
RAMRAJ
CULTURE CLUB®
MATCHING DHOTIS ● SHIRTS
SCAN QR CODE FOR STORE LOCATION
Shop Online @ www.ramrajcotton.in


RAMRAJ ©
PRESTIGE WHITE FABRICS
SCAN QR CODE FOR STORE LOCATION


Culture India™
TRADITIONAL KURTA • DHOTI
RAMRAJ ©
INFUSE CULTURE IN EVERY CELEBRATION WITH THE PERFECT WEAVE.
Step into every celebration with grace, class, and elegance in a Ramraj Kurta, crafted for comfort and tailored for every occasion. Made using traditional weaving techniques, our kurtas are the perfect choice for unforgettable moments!
SCAN QR CODE FOR STORE LOCATION
Power of Trust
India's Most Trusted Dhoti Brand
India's Most Attractive Brands
India's Most Attractive Dhoti Brands
Available @ Ramraj Showrooms & All leading textile shops | Shop online @ www.ramrajcotton.in

Kokhila®

WOMEN'S INNERWEAR

By

RAMRAJ©

Comfort That Perfect INSIDE



www.ramrajcotton.in



Shop Online @ www.ramrajcotton.in

ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ** : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.
**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe GPay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯQR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**

# ನಿರಾಕರಣೆಯ ಕಾರಣ!



ಬೆಟ್ಟದ ತಪ್ಪಲಿನಲ್ಲಿದ್ದ ಒಂದು ದೇವಾಲಯದಲ್ಲಿ, ದೇವಾಲಯವನ್ನು ಶುಚಿಗೊಳಿಸುವ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿ. ಓದಲು ಬರೆಯಲು ಗೊತ್ತಿಲ್ಲದ ಆತನಿಗೆ 40 ವರ್ಷಗಳು. ದಿನವೂ ಒಂದೆ ರೀತಿಯಾಗಿ, ಬೆಳಗ್ಗಿನಿಂದ ಸಾಯಂಕಾಲದವರೆಗೂ ಆ ದೇವಾಲಯವನ್ನು ಶುಚಿಗೊಳಿಸುವ ಕೆಲಸ ಮಾಡಿ ಮಾಡಿ ಅತನಿಗೆ ಬೇಸರ ಮೂಡಿತ್ತು.

ಇತಿಹಾಸ ಪ್ರಸಿದ್ಧಿ ಗಳಿಸಿರುವ ಆ ದೇವಾಲಯವನ್ನು ನೋಡಲು ಹೇರಳವಾದ ಪ್ರಯಾಣಿಕರೂ, ಭಕ್ತರೂ ಅಲ್ಲಿಗೆ ಬಂದು ಹೋಗುತ್ತಿದ್ದರು. ಅವರಿಗೆ ದೇವಾಲಯವನ್ನು ಸುತ್ತಿ ತೋರಿಸಿ, ವಿವರಿಸಲು ಸುಮಾರು 500 ಜನ ಗೈಡ್‌ಗಳು ಅಲ್ಲಿದ್ದರು. ಅವರಂತೆಯೇ ತಾನೂ ಒಬ್ಬ ಮಾರ್ಗದರ್ಶಿಯಾಗಲು ಆತ ಆಶಿಸಿದ. ದಿನವೂ ಹೊಸಹೊಸ ಮನುಷ್ಯರೊಂದಿಗೆ ಮಾತನಾಡಿ ಪರಿಚಯ ಬೆಳೆಸಿಕೊಂಡರೆ ಇಂತಹ ಬೇಸರ ಇರುವುದಿಲ್ಲ ಎಂದು ಅವನು ಭಾವಿಸಿದ. ದೇವಾಲಯದ ನಿರ್ವಾಹಕರ ಬಳಿ ಹೋಗಿ ಅವನು ತನ್ನ ಆಸೆಯನ್ನು ಹೇಳಿಕೊಂಡ.

ಅವರು, 'ನಿನಗೆ ಓದಲು ಬರೆಯಲು ಕೂಡ ಗೊತ್ತಿಲ್ಲ. ಬರುವ ಭಕ್ತರ ಜೊತೆಯಲ್ಲಿ ನಾಗರಿಕವಾಗಿ ಬೆರೆಯಲೂ ತಿಳಿಯದು. ನಿನ್ನಿಂದ ಯಾವಾಗಲೂ ಮಾರ್ಗದರ್ಶಿಯ ಕೆಲಸ ಮಾಡಲು ಸಾಧ್ಯವೇ ಇಲ್ಲ' ಎಂದು ಬಿಟ್ಟರು. ಇದನ್ನು ಕೇಳಿ ಅವನಿಗೆ ತೀವ್ರ ನಿರಾಶೆಯಾಯಿತು. 'ನನಗೆ ಈ ಶುಚಿಗೊಳಿಸುವ ಕೆಲಸ ಮಾಡಲು ಸ್ವಲ್ಪವೂ ಇಷ್ಟವಿಲ್ಲ. ನಾನು ಕೆಲಸ ಬಿಟ್ಟು ಹೋಗಿ ಬಿಡುತ್ತೇನೆ' ಎಂದು ಇವನು ನಿರಾಶೆಯಿಂದ ಹೇಳಿದ.

ದೇವಾಲಯದ ನಿರ್ವಾಹಕರು ಆತನನ್ನು ಸಮಾಧಾನ ಪಡಿಸಿ, 'ಮಗನೇ! ನಿನಗೆ ಇಲ್ಲಿ ಮೂರು ಹೊತ್ತೂ ಉಚಿತವಾಗಿ ಊಟ ದೊರಕುತ್ತದೆ. ನಿಮಗೆ ವಾಸ ಮಾಡಲು ಮನೆಯನ್ನೂ ನೀಡಿದ್ದೇವೆ. ಮಾಡಿದ ಕೆಲಸಕ್ಕೆ ಸಂಬಳವನ್ನೂ ನೀಡುತ್ತಿದ್ದೇವೆ. ಇದೆಲ್ಲವನ್ನೂ ತ್ಯಜಿಸಿ ನೀನು ಇಲ್ಲಿಂದ ಹೊರಟು ಹೋದರೆ ಜೀವನದಲ್ಲಿ ನೀನು ತುಂಬಾ ಕಷ್ಟಪಡಬೇಕಾಗುತ್ತದೆ' ಎಂದು ತಿಳಿ ಹೇಳಿದರು.

ಆದರೆ ಆತ ಹಠ ಹಿಡಿದು, 'ಇಲ್ಲ, ಮನಸ್ಸಿಗೆ ಇಷ್ಟವಾಗದ ಒಂದು ಕೆಲಸವನ್ನು ಮಾಡುವುದಕ್ಕಿಂತ, ಹೊರಗೆ ಹೋಗಿ ಕಷ್ಟ ಪಡಲು ನಾನು ಸಿದ್ಧವಾಗಿದ್ದೇನೆ'. ಎಂದು ಬಿಟ್ಟ. ಆತನ ಆಸ್ತಿ ಎಂದರೆ ಆತ ಉಡುತ್ತಿದ್ದ ಕೆಲವೇ ಕೆಲವು ಬಟ್ಟೆಗಳು ಮಾತ್ರವೇ. ಅವುಗಳನ್ನು ಒಂದು ಕೈಚೀಲದಲ್ಲಿ ಹಾಕಿಕೊಂಡು ಅವನು ಅಲ್ಲಿಂದ ಹೊರಟು ಬಿಟ್ಟ.

ಮುಖ್ಯರಸ್ತೆಯಲ್ಲಿ ಹಾಗೇ ಸಾಗಿ, ಪಕ್ಕದಲ್ಲಿರುವ ನಗರಕ್ಕೆ ಹೋಗಿ, ಅಲ್ಲಿ ಯಾವುದಾದರೂ ಕೆಲಸ ಹುಡುಕಿಕೊಳ್ಳೋಣ ಎಂದು ಭಾವಿಸಿ ಅವನು ಮುಖ್ಯರಸ್ತೆಯನ್ನು ತಲುಪಿದ. ಸುಡುವ ಬಿಸಿಲಿನಲ್ಲಿ ಹೀಗೆ ತುಂಬಾ ದೂರ ನಡೆದುದುರಿಂದ ಆತನಿಗೆ ವಿಪರೀತ ಆಯಾಸವಾಯಿತು. ಅಪರಿಮಿತ ದಾಹ ಬೇರೆ. ಎಲ್ಲೂ ನೀರು ಕೂಡ ಇರಲಿಲ್ಲ. ಆಗಷ್ಟೇ ಒಂದು ವಿಷಯ ಅವನ ಗಮನಕ್ಕೆ ಬಂತು. ನಗರದಿಂದ ದೇವಾಲಯಕ್ಕೆ ಬರುವ ದಾರಿಯಲ್ಲಿ ಒಂದೇ ಒಂದು ಅಂಗಡಿ ಕೂಡ ಇರಲಿಲ್ಲ! ಅಲ್ಲಿ ಒಂದು ಅಂಗಡಿಯನ್ನು ಆರಂಭಿಸಿದರೆ, ದೇವಾಲಯಕ್ಕೆ ಬಂದು ಹೋಗುವ ಭಕ್ತರು ಖಂಡಿತ ಅಲ್ಲಿ ವ್ಯಾಪಾರ ಮಾಡಿ ಏನಾದರೂ ಕೊಳ್ಳುತ್ತಾರೆ ಎಂದು ಅವನು ಯೋಚಿಸಿದ.

ಬೀದಿ ಬದಿಯಲ್ಲಿ ಮರಗಳು ನೆರಳು ಇದ್ದ ಒಂದು ಸ್ಥಳದಲ್ಲಿ ಅವನು ಒಂದು ಅಂಗಡಿಯನ್ನು ಆರಂಭಿಸಿದ. ನೀರು ಕುಡಿಯಲು, ಎಳನೀರು ಕುಡಿಯಲು, ಬಿಸ್ಕೆಟ್ ಕೊಳ್ಳಲು ಎಂದು ಜನರು ನಿಧಾನವಾಗಿ ಅಲ್ಲಿಗೆ ಬರಲು ಆರಂಭಿಸಿದರು. ಚೆನ್ನಾಗಿ ವ್ಯಾಪಾರ ಮಾಡಿ, ಲಾಭ ಗಳಿಸಲು ಆರಂಭಿಸಿದ ಮೇಲೆ ಅವನು ಆ ಸ್ಥಳವನ್ನು ಕೊಂಡುಕೊಂಡು, ಅಂಗಡಿಯನ್ನು ಸ್ವಲ್ಪ ದೊಡ್ಡದಾಗಿಸಿದದೆ. ಹೀಗೇ ನಿಧಾನವಾಗಿ ಕಟ್ಟಡ ಬೆಳೆದು, ಜ್ಯೂಸ್ ಸ್ಟಾಲ್, ಕಾಫಿ ಶಾಪ್, ಬೇಕರಿ, ಹೋಟೆಲ್ ಎಲ್ಲವೂ ಅಲ್ಲಿ ಆರಂಭವಾದವು. ಕೆಲವೇ ವರ್ಷಗಳಲ್ಲಿ ಆತನ ಕಟ್ಟಡಗಳ ಸಂಕೀರ್ಣವು ಪಕ್ಕದೂರಿನವರೆಗೂ ಖ್ಯಾತಿ ಗಳಿಸಿತು. ಈಗ ಆತ ಅಲ್ಲೂ ಒಂದು ಶಾಖೆಯನ್ನು ಆರಂಭಿಸಿದ. ಆತನ ಬಳಿ ಈಗ ಐವತ್ತಕ್ಕಿಂತ ಹೆಚ್ಚಿನ ಕೆಲಸಗಾರರು ಇದ್ದರು.

ಒಬ್ಬ ವ್ಯಕ್ತಿ ಶ್ರೀಮಂತನಾದರೆ, ಅವನನ್ನು ಭೇಟಿಯಾಗಲು ತುಂಬಾ ಜನ ಅಧಿಕಾರಿಗಳು ಬರುವುದು ಸಹಜ ತಾನೇ! ಅವನನ್ನು ಭೇಟಯಾಗಲು ಬಂದ ಒಬ್ಬ ಬ್ಯಾಂಕಿನ ಅಧಿಕಾರಿ, ತಮ್ಮ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದು, ಹಣವನ್ನು ಠೇವಣಿ ಇಡುವಂತೆ ವಿನಂತಿಸಿಕೊಂಡರು. ಬ್ಯಾಂಕಿನ ಅರ್ಜಿಯಲ್ಲಿ ಅವರು ಸಹಿ ಮಾಡುವ ಬದಲಿಗೆ ಹೆಬ್ಬೆಟ್ಟಿನ ಗುರುತು ಇಟ್ಟದ್ದನ್ನು ನೋಡಿದ ಬ್ಯಾಂಕಿನ ಮ್ಯಾನೇಜರ್, 'ಓದಲು ಬರೆಯಲು ಗೊತ್ತಿಲ್ಲದೆಯೇ ನೀವು ಇಷ್ಟೊಂದು ಹಣ ಸಂಪಾದಿಸಿದ್ದೀರಿ. ಒಂದು ವೇಳೆ ನೀವು ಚೆನ್ನಾಗಿ ಓದಿದ್ದರೆ ಏನಾಗಿರುತ್ತಿದ್ದಿರೋ' ಎಂದ.

'ಪ್ರವಾಸಿಗರಿಗೆ ಮಾರ್ಗದರ್ಶನ ಮಾಡುವ ಒಬ್ಬ ಸಾಮಾನ್ಯ ಮಾರ್ಗದರ್ಶಿಯಾಗಿ, ಒಬ್ಬ ಸಾಮಾನ್ಯ ಮನುಷ್ಯನಂತೆ ಜೀವನ ನಡೆಸುತ್ತಿದ್ದೆ' ಎಂದು ಶಾಂತವಾಗಿ ಆತ ಹೇಳಿದ. ಜೀವನದಲ್ಲಿ ನಿರಾಕರಿಸಲ್ಪಡುವುದು ಕೂಡ ಬೆಳವಣಿಗೆಗೆ ಕಾರಣವಾಗಿರಬಹುದು.

ಇದು ಇನ್ನೊಂದು ನಿರಾಕರಣೆಯ ಕಥೆ. ಒಬ್ಬ ಕ್ರಮವಾಗಿ ಏಳು ಸಂದರ್ಶನಗಳಲ್ಲೂ ನಿರಾಕರಣೆಗೊಳಗಾಗಿದ್ದ. ಎಲ್ಲ ಸಂದರ್ಶನಗಳಲ್ಲೂ ಯಾವುದೋ ಒಂದು ಹಂತದಲ್ಲಿ ಅವನನ್ನು ಸೋಸಿ ಹೊರಕಳಿಸಿಬಿಡುತ್ತಿದ್ದರು. ಸಂಬಳ ಕಡಿಮೆಯಾಗಿದ್ದರೂ ಸರಿ, ಯಾವ ಊರಿನಲ್ಲಿ ಕೆಲಸ ಸಿಕ್ಕರೂ ಸರಿ ಎಂಬ ಮನಸ್ಥಿತಿಗೆ ಅವನು ಬಂದು ತಲುಪಿಯಾಗಿತ್ತು. ಆದರೂ ಅವನಿಗೆ ಎಲ್ಲೂ ಕೆಲಸ ದೊರಕಲಿಲ್ಲ.

ಇದು ಆತನಿಗೆ ಎಂಟನೇ ಸಂದರ್ಶನ. ಇದಕ್ಕೆ ಮುನ್ನ ಅವನನ್ನು ನಿರಾಕರಿಸಿದ ಕಂಪನಿಗಳಿಗಿಂತ ತುಂಬಾ ದೊಡ್ಡ ಕಂಪನಿ ಇದು. ಚಿಕ್ಕ ಚಿಕ್ಕ ಕಂಪನಿಗಳೇ ನನಗೆ ಕೆಲಸ ನೀಡಲಿಲ್ಲ. ಹಾಗಿರುವಾಗ ಇವರು ಮಾತ್ರ ಏನು ನನಗೆ ಕೆಲಸ ಕೊಟ್ಟು ಬಿಡುತ್ತಾರಾ? ಎಂಬ ನಿರಾಶೆಯಲ್ಲೇ ಅವನು ಸಂದರ್ಶನಕ್ಕೆ ಹೋಗಲು ನಿರಾಕರಿಸಿದ. ಗೆಳೆಯರ ಒತ್ತಾಯಕ್ಕೆ ಮಣಿದು, ಶಿಸ್ತಾಗಿ ಉಡುಪು ಧರಿಸಿ, ಸರ್ಟಿಫಿಕೇಟ್‌ಗಳು ಇರುವ ಫೈಲ್ ತೆಗೆದು ಕೊಂಡು ಬಂದ. 'ನನ್ನನ್ನು ಪ್ರೀತಿಸುವ ಇವರೆಲ್ಲರೂ ನನ್ನ ಮೇಲೆ ನಂಬಿಕೆ ಕಳೆದುಕೊಳ್ಳದೆ ಮಾತನಾಡುತ್ತಿದ್ದಾರೆ. ಹಾಗಿರುವಾಗ ನಾನು ಮಾತ್ರ ನನ್ನ ಮೇಲೆ ಏಕೆ ನಂಬಿಕೆ ಕಳೆದುಕೊಳ್ಳಬೇಕು' ಎಂದು ಭಾವಿಸಿಕೊಂಡೇ ಆತ ಒಳಗೆ ಪ್ರವೇಶಿಸಿದ.

ಸಂದರ್ಶನದ ಸಂದರ್ಭದಲ್ಲಿ ಮೊದಲು ಲಿಖಿತ ಪರೀಕ್ಷೆ ನಡೆಸಲಾಯಿತು. ಆ ಪರೀಕ್ಷೆ ಬರೆಯುವುದಕ್ಕಾಗಿ ಅವನಿಗೆ ನೀಡಿದ್ದ ಕಂಪ್ಯೂಟರ್ ಕೆಲಸ ಮಾಡುತ್ತಿರಲಿಲ್ಲ. ಸಂಸ್ಥೆಯ ಎಂಜಿನಿಯರ್‌ಗಳು ಬಂದು ಅದನ್ನು ಸರಿ ಪಡಿಸುವವರೆಗೆ ಅವನು ತಾಳ್ಮೆಯಿಂದ ಕಾಯುತ್ತಿದ್ದ. ಎಲ್ಲರೂ ಒಂದು ಗಂಟೆಯ ಕಾಲ ಬರೆದ ಪರೀಕ್ಷೆಯನ್ನು ಇವನು ಅವಸರ ಅವಸರವಾಗಿ ಅರ್ಧ ಗಂಟೆಯೊಳಗೇ ಬರೆದು ಮುಗಿಸಿದ. ಅವನಿಗೆ ಹೆಚ್ಚುವರಿಯಾಗಿ ಸಮಯವನ್ನು ನೀಡುವುದಾಗಿ ಸಂಸ್ಥೆಯ ಅಧಿಕಾರಿಗಳು ಹೇಳಿದಾಗ, 'ಇಲ್ಲ ಮುಗಿಸಿಬಿಟ್ಟೆ' ಎಂದು ಹೇಳಿ ಅವರನ್ನು ಆಶ್ಚರ್ಯಕ್ಕೀಡು ಮಾಡಿದ.

ಅವನು ಲಿಖಿತ ಪರೀಕ್ಷೆ ಬರೆದು ಮುಗಿಸಿ ಹಾಲ್‌ಗೆ ಬರುವಷ್ಟರೊಳಗೆ ಅಲ್ಲಿ ಗ್ರೂಪ್ ಡಿಸ್‌ಕಷನ್ ಆರಂಭವಾಗಿಬಿಟ್ಟಿತ್ತು. ಇವನು ಸೇರಬೇಕಾದ ಗುಂಪಿನಲ್ಲಿದ್ದವರು ಈಗಾಗಲೇ ಮಾತನಾಡಲು ಆರಂಭಿಸಿದ್ದರು. ಆದರೂ ಇವನು ಯಾವ ಆತಂಕವನ್ನೂ ತೋರಿಸದೆ ಸಮಾಧಾನದಿಂದ ಅವರ ಜೊತೆ ಹೋಗಿ ಕುಳಿತುಕೊಂಡ.

ಅದು ಮುಗಿದ ಕೂಡಲೇ 20 ಜನರನ್ನು ಮಾತ್ರವೇ ಆಯ್ಕೆ ಮಾಡಿ, ಅವರಿಗೆ ಮೌಖಿಕ ಸಂದರ್ಶನ ನಡೆಸುವುದಾಗಿ ಘೋಷಿಸಿದರು. ಎಲ್ಲರನ್ನೂ ಹಾಲ್‌ನಲ್ಲಿ ಕಾಯುವಂತೆ ತಿಳಿಸಿ, ಒಂದು ಗಂಟೆಯ ನಂತರ ಆಯ್ಕೆಯಾದ 20 ಜನರ ಹೆಸರನ್ನು ಬಂದು ಓದಿದರು. 19 ಜನರ ಹೆಸರು ಬರುವವರೆಗೂ ಇವನ ಹೆಸರು ಇರಲಿಲ್ಲ. 'ಇದು ಎಂಟನೆಯ ನಿರಾಕರಣೆಯೋ ಏನೋ?' ಎಂದು ಅವನು ಮನಸ್ಸಿನಲ್ಲಿ ಅಂದುಕೊಳ್ಳುವಷ್ಟರಲ್ಲಿ, 20ನೆಯದಾಗಿ ಅವನ ಹೆಸರನ್ನು ಹೇಳಿದರು!

ಇನ್ನುಳಿದದ್ದು ಮೌಖಿಕ ಸಂದರ್ಶನ. ಈ ಹಿಂದಿನ ಎಲ್ಲಾ ಸಂದರ್ಶನಗಳಿಗೂ ಅವನು ಸಾಕಷ್ಟು ಪೂರ್ವ ತಯಾರಿ ಮಾಡಿಕೊಂಡೇ ಹಾಜರಾಗಿದ್ದ. ಪ್ರಶ್ನೆಗಳನ್ನು ಕೇಳಿದಾಗ ಪಟಪಟನೆ ಉತ್ತರಿಸಿದ್ದ. ಈ ಸಲ ಸಂದರ್ಶನಕ್ಕೆ ಹೋಗುವುದೇ ಬೇಡ ಎಂದು ಅವನು ನಿರ್ಣಯಿಸಿಕೊಂಡಿದ್ದುದರಿಂದಲೂ, ಗೆಳೆಯರ ಒತ್ತಾಯಕ್ಕೆ ಮಣಿದು ಕೂಡಲೇ ಹೊರಟು ಬಂದು ಬಿಟ್ಟುದುದರಿಂದಲೂ ಅವನಿಗೆ ಸಿದ್ಧತೆ ಮಾಡಿಕೊಳ್ಳಲು ಸಮಯವೇ ಇರಲಿಲ್ಲ. ಆದುದರಿಂದ ಇಂದಿನ ಸಂದರ್ಶನದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಅವುಗಳಿಗೆ ಉತ್ತರವನ್ನು ಯೋಚಿಸಿ ತನ್ನ ಮನಸ್ಸಿನಾಳದಿಂದ ಹೇಳಿದ. ಸಂದರ್ಶನದ ನಂತರ ಕೇವಲ ಐದು ಜನರನ್ನು ಮಾತ್ರವೇ ಆಯ್ಕೆ ಮಾಡಿಕೊಂಡಿದ್ದರು ಅದರಲ್ಲಿ ಮೊದಲನೆಯದಾಗಿ ಇವನ ಹೆಸರೇ ಇತ್ತು. ಅನಿರೀಕ್ಷಿತವಾಗಿ ಅವನ ಸ್ವಂತ ಊರಿನಲ್ಲೇ ಒಳ್ಳೆಯ ಸಂಬಳದ ಉದ್ಯೋಗ ಅವನಿಗೆ ಸಿಕ್ಕಿತ್ತು!

ಈ ಒಳ್ಳೆಯ ಅವಕಾಶ ಅವನಿಗೆ ದೊರಕಬೇಕಾಗಿದ್ದುದರಿಂದಲೋ ಏನೋ, ಈ ಹಿಂದೆ ಏಳು ಸಲ ತಾನು ನಿರಾಕರಣೆಗೆ ಒಳಗಾಗಿದ್ದೇನೆ ಎಂದು ಅವನು ಅಂದುಕೊಂಡ. ●




RAMRAJ



# ಕಾಲದ ಕೈಯಲ್ಲಿದೆ!

ಒಂದು ದೇಶದಲ್ಲಿ ಒಬ್ಬ ರಾಜಕುಮಾರ ಇದ್ದ. ಆತ ಒಬ್ಬ ಒಳ್ಳೆಯ ಯುದ್ಧ ವೀರ. ಅವನ ಜೊತೆ ಕತ್ತಿ ಯುದ್ಧ ಮಾಡಲು ಯಾರೂ ಸಮಾನರಿರಲಿಲ್ಲ. ಅಷ್ಟೊಂದು ಒಳ್ಳೆಯ ಯೋಧ ಅವನು. ಅವನು ಒಂದು ದಿನ ಅರಮನೆಯಲ್ಲಿ ಕತ್ತಿ ಅಭ್ಯಾಸ ಮಾಡುತ್ತಿದ್ದಾಗ ಒಂದು ಇಲಿ ಅವನ ಮುಂದೆ ಓಡಿ ಹೋಯಿತು. ಕೂಡಲೇ ಇವನು ಅದರ ಮೇಲೆ ಖಡ್ಗ ಬೀಸಿದ. ಆ ಇಲಿ ಲಾಘವದಿಂದ ತಪ್ಪಿಸಿಕೊಂಡು ಓಡಿ ಹೋಯಿತು. ಇವನು ಅದನ್ನು ಹಿಂಬಾಲಿಸಿಕೊಂಡು ಹೋಗಿ ಮತ್ತೆ ಅದರ ಮೇಲೆ ಖಡ್ಗ ಬೀಸಿದ. ಆದರೂ ಅದು ತುಂಬ ಸಾಮರ್ಥ್ಯದಿಂದ ತಪ್ಪಿಸಿಕೊಂಡು ಓಡಿ ಹೋಗಿ ಬಿಲದೊಳಗೆ ಸೇರಿಕೊಂಡಿತು.

ಅವನು ಇದರಿಂದ ಕುಗ್ಗಿ ಹೋದ. ಆಗ ಅಲ್ಲಿಗೆ ಬಂದ ರಾಜ, 'ಏಕೆ ಶೋಕದಿಂದ ಇರುವೆ?' ಎಂದು ಪ್ರಶ್ನಿಸಿದ. 'ಈ ಜಗತ್ತಿನಲ್ಲಿ ಯಾರೂ ನನ್ನ ಖಡ್ಗದ ಮುಂದೆ ನಿಲ್ಲಲು ಸಾಧ್ಯವೇ ಇಲ್ಲ. ಆದರ ಈ ಒಂದು ಯಃಕಶ್ಚಿತ್ ಇಲಿಯನ್ನು ಕೊಲ್ಲಲು ನನ್ನಿಂದ ಸಾಧ್ಯವಾಗಲಿಲ್ಲವಲ್ಲ!' ಎಂದು ತನ್ನ ದುಃಖದ ಕಾರಣವನ್ನು ಹೇಳಿದ ರಾಜಕುಮಾರ. ರಾಜ ನಕ್ಕು, 'ಇಲಿಯನ್ನು ಕೊಲ್ಲಲು ಖಡ್ಗ ಏಕೆ ಬೇಕು? ಒಂದು ಬೆಕ್ಕು ಸಾಕು. ನಿನ್ನ ಖಡ್ಗದ ಮೌಲ್ಯವನ್ನು ನೀನು ಕಡಿಮೆ ಮಾಡಿಬಿಡಬೇಡ' ಎಂದ.

ಅರಮನೆಯಲ್ಲಿದ್ದ ಬೆಕ್ಕನ್ನು ಅಲ್ಲಿಗೆ ಕರೆಸಲಾಯಿತು. ಅದು ಇಲಿಯನ್ನು ಬೇಟೆಯಾಡಲು ನೋಡಿತು. ಇಲಿ ಬೆಕ್ಕಿನ ಕೈಗೂ ಸಿಗದೆ ತಪ್ಪಿಸಿಕೊಂಡು ಓಡಿ ಹೋಯಿತು. ಕೆಲವು ದಿನಗಳು ಕಳೆದರೂ ಆ ಇಲಿಯನ್ನು ಹಿಡಿಯುವುದು ಬೆಕ್ಕಿಗೆ ಸಾಧ್ಯವಾಗಲೇ ಇಲ್ಲ. ಈಗ ರಾಜಕುಮಾರನ ಜೊತೆಯಲ್ಲಿ ಅರಸನೂ ಶೋಕಾಕುಲಿತನಾದ.

ಇವರಿಬ್ಬರೂ ಶೋಕಭರಿತರಾಗಿದ್ದುದನ್ನು ನೋಡಿದ ಮಂತ್ರಿ ಅವರಿಗೆ ಒಂದು ಸಲಹೆ ನೀಡಿದ. 'ನಮ್ಮ ದೇಶದ ಬೆಕ್ಕುಗಳೇ ಸರಿ ಇಲ್ಲ. ಹೊರದೇಶಗಳಲ್ಲಿರುವ ಬೆಕ್ಕುಗಳು ದೊಡ್ಡ ಗಾತ್ರದಲ್ಲಿರುತ್ತವೆ. ನೋಡಲು ಅವು 'ಇವೇನು ಬೆಕ್ಕುಗಳೋ ಹುಲಿಗಳೋ ಎನ್ನಬೇಕು' ಹಾಗಿರುತ್ತವೆ. ಅವುಗಳನ್ನು ತರಿಸೋಣ. ಇಲಿ ಅವುಗಳ ಕೈಗೆ ಸುಲಭವಾಗಿ ಸಿಕ್ಕಿ ಹಾಕಿಕೊಳ್ಳುತ್ತದೆ' ಎಂದು ಸಲಹೆ ನೀಡಿದ. ಹೊರ ದೇಶಗಳಿಂದ ದೊಡ್ಡ ದೊಡ್ಡ ಬೆಕ್ಕುಗಳನ್ನು ತರಿಸಲಾಯಿತು. ಆದರೆ ಅವುಗಳು ಕೂಡ ಈ ಇಲಿಯನ್ನು ಹಿಡಿಯುವಲ್ಲಿ ವಿಫಲವಾದವು. ಇನ್ನೂ ಸರಿಯಾಗಿ ಹೇಳಬೇಕೆಂದರೆ ಆ ಇಲಿ ಈ ಬೆಕ್ಕುಗಳ ಮುಂದೆಯೇ ನಿರ್ಭಯವಾಗಿ ಓಡಾಡುತ್ತಿತ್ತು.

'ಒಂದು ಸಾಮಾನ್ಯ ಇಲಿಯೊಳಗೆ ಇಷ್ಟೊಂದು ಸಾಮರ್ಥ್ಯವಿದೆಯೇ?' ಎಂದು ಎಲ್ಲರೂ ಆಶ್ಚರ್ಯ ಪಡುವ ಮಟ್ಟಿಗೆ ಅದು ನಡೆದುಕೊಳ್ಳುತ್ತಿತ್ತು. ಅರಮನೆಯ ಕಾವಲುಗಾರ, 'ರಾಜಕುಮಾರ! ಈ ಇಲಿಯನ್ನು ಕೊಲ್ಲಲು ಹೊರದೇಶದ ಬೆಕ್ಕುಗಳೇಕೆ ಬೇಕಿತ್ತು? ನನ್ನ ಮನೆಯಲ್ಲಿರುವ ಒಂದು ಸಾಮಾನ್ಯ ಬೆಕ್ಕು ಸಾಕು' ಎಂದು ಹೇಳಿದ.

ರಾಜಕುಮಾರ ನಕ್ಕ. 'ಅರಮನೆಯ ಬೆಕ್ಕಿನ ಕೈಯಿಂದಲೂ, ಹೊರ ದೇಶಗಳಿಂದ ಬಂದಿರುವ ಬೆಕ್ಕಿನ ಕೈಯಿಂದಲೂ ಸಾಧ್ಯವಿಲ್ಲದ ಕಾರ್ಯವನ್ನು ನಿನ್ನ ಮನೆಯ ಒಂದು ಸಾಮಾನ್ಯ ಬೆಕ್ಕು ಮಾಡಲು ಸಾಧ್ಯವೇ?' ಎಂದು ಅವನು ಕೇಳಿದ. ಆದರೂ, 'ಅದನ್ನೂ ಒಮ್ಮೆ ಪರೀಕ್ಷಿಸಿ ನೋಡಿ ಬಿಡೋಣ. ತೆಗೆದುಕೊಂಡು ಬಾ ನಿನ್ನ ಮನೆಯ ಬೆಕ್ಕನ್ನು' ಎಂದು ಆಜ್ಞಾಪಿಸಿದ.

ಕಾವಲುಗಾರ ತನ್ನ ಮನೆಗೆ ಹೋಗಿ ಬೆಕ್ಕನ್ನು ತೆಗೆದುಕೊಂಡು ಬಂದ. ಆ ಬೆಕ್ಕು ಒಂದೇ ಜಿಗಿತದಲ್ಲಿ ಹಾರಿ ಆ ಇಲಿಯನ್ನು ಹಿಡಿದು ಬಿಟ್ಟಿತು.

ರಾಜಕುಮಾರನಿಗೆ ಇದನ್ನು ನೋಡಿ ತುಂಬ ಆಶ್ಚರ್ಯವಾಯಿತು. 'ಇದೇನಾಶ್ಚರ್ಯ! ನಮ್ಮ ಅರಮನೆಯ ಬೆಕ್ಕುಗಳಿಂದಲೂ, ಹೊರದೇಶದ ಬೆಕ್ಕುಗಳಿಂದಲೂ ಆಗದ ಕೆಲಸವನ್ನು ಈ ಬೆಕ್ಕು ಅದು ಹೇಗೆ ಕ್ಷಣ ಮಾತ್ರದಲ್ಲಿ ಮಾಡಿ ತೋರಿಸಿತು? ಇದರ ಬಳಿ ಅಂತಹ ವಿಶೇಷ ಗುಣ ಏನಿದೆ? ಇದಕ್ಕೆ ಬೇರೇನಾದರೂ ವಿಶೇಷ ತರಬೇತಿ ನೀಡಿರುವೆಯೇನು? ಎಂದು ಕೇಳಿದ.

ಕಾವಲುಗಾರ ಶಾಂತವಾಗಿ ಹೇಳಿದ: 'ಇದಕ್ಕೆ ಅಂತಹ ವಿಶೇಷ ಸಾಮರ್ಥ್ಯವಾಗಲೀ, ತರಬೇತಿಯಾಗಲೀ ಏನೂ ಇಲ್ಲ ರಾಜಕುಮಾರ! ನನ್ನ ಬೆಕ್ಕಿಗೆ ಅಪಾರ ಹಸಿವು. ಆದುದರಿಂದಲೇ ಅದು ಇಲಿಯನ್ನು ಕೂಡಲೇ ಕೊಂದು ಹಾಕಿತು' ಎಂದ. ರಾಜಕುಮಾರನಿಗೆ ನಿಜ ಏನೆಂಬುದು ಅರ್ಥವಾಯಿತು. ಆ ಬೆಕ್ಕುಗಳು ಚೆನ್ನಾಗಿ ಹೊಟ್ಟೆ ತುಂಬ ತಿನ್ನುವುದರಿಂದ ಅವುಗಳಿಗೆ ಹಸಿವು ಎಂದರೇನೆಂಬುದೇ ತಿಳಿಯುವುದಿಲ್ಲ. ಅವುಗಳ ಕೈಯಿಂದ ಅದು ಹೇಗೆ ಇಲಿಯನ್ನು ಹಿಡಿಯಲು ಸಾಧ್ಯ?

ಯಾವುದೇ ಕೆಲಸವಾಗಿದ್ದರೂ ಅದನ್ನು ಯಶಸ್ವಿಯಾಗಿ ಮಾಡಿ ಮುಗಿಸಬೇಕಾದರೆ ಮೊದಲಿಗೆ ಅದರ ಬಗೆಗೆ ಒಂದು ದಾಹ ಇರಬೇಕು. ಆಗ ಮಾತ್ರವೇ ಅದನ್ನು ಪ್ರಾಮಾಣಿಕವಾಗಿಯೂ, ಪೂರ್ಣವಾಗಿಯೂ ಮಾಡಿ ಮುಗಿಸಲು ಸಾಧ್ಯ.

ಪ್ರತಿದಿನ ಬೆಳಿಗ್ಗೆ ಏಳುವಾಗ, ನಾವು ಬದುಕಲು ಅಗತ್ಯವಾಗಿರಬೇಕಾದ ಕಾರಣಗಳನ್ನು ಹುಡುಕಾಡಬೇಕು. ಪ್ರತಿ ದಿನ ರಾತ್ರಿ ನಿದ್ರೆ ಮಾಡಲು ಹೋಗುವ ಮುನ್ನ, ಆ ದಿನವನ್ನು ನಾವು ಹೇಗೆ ತೃಪ್ತಿಕರವಾಗಿಯೂ, ಪೂರ್ಣವಾಗಿಯೂ ಬದುಕಿದ್ದೇವೆ ಎಂಬುದರ ಕಾರಣಗಳನ್ನು ಹುಡುಕಾಡಬೇಕು. ಪ್ರತಿ ಕ್ಷಣವೂ ನಂಬಿಕೆ, ಪ್ರೀತಿ, ಕನಸುಗಳನ್ನು ಮನಸ್ಸಿನಲ್ಲಿ ಹೊತ್ತುಕೊಂಡು ಪ್ರಯತ್ನಗಳನ್ನು ಆರಂಭಿಸಿದರೆ, ಖಂಡಿತವಾಗಿಯೂ ಹೀಗೆ ಬದುಕಿ ತೋರಿಸಲು ಸಾಧ್ಯ. ನಮ್ಮ ಸುತ್ತಲೂ ಇರುವ ವಾತಾವರಣದಲ್ಲಿ ಗೊಂದಲ ಬಿಕ್ಕಟ್ಟುಗಳು ಇರಬಹುದು. ನಮ್ಮ ಸುತ್ತಲೂ ಇರುವ ಮನುಷ್ಯರ ಮನಸ್ಸಿನಲ್ಲಿ ಭಯ ಇರಬಹುದು. ಆದರೆ, ಆ ಯಾವುವೂ ನಮ್ಮ ಮನಸ್ಸಿನೊಳಗೆ ಆಳವಾಗಿ ಹೋಗಿ ಬೇರೂರದ ಹಾಗೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ.


ಒಬ್ಬ ಮುಲ್ಲಾಗೆ ಸಂಬಂಧಿಸಿದ ಒಂದು ಸ್ವಾರಸ್ಯಕರವಾದ ಕಥೆ ಇದೆ! ಮದುವೆಯಾದ ಹೊಸದರಲ್ಲಿ ಮುಲ್ಲಾ ತನ್ನ ಹೊಸ ಹೆಂಡತಿಯೊಂದಿಗೆ ಕಡಲಿನಲ್ಲಿ ಪ್ರಯಾಣ ಮಾಡಿದ. ಅದು ಅವರಿಗೆ ತುಂಬಾ ಆನಂದಕರವಾದ ಪ್ರಯಾಣವಾಗಿತ್ತು. ದಿಢೀರನೆ ಕಡಲಿನಲ್ಲಿ ಏನೋ ಗೊಂದಲ ಕಾಣಿಸಿಕೊಂಡಿತು. ದೊಡ್ಡ ದೊಡ್ಡ ಅಲೆಗಳು ಕಡಲಿನಲ್ಲಿ ಕಾಣಿಸಿಕೊಂಡು ಹಡಗನ್ನು ಅವು ಮೇಲೂ ಕೆಳಗೂ ಅಸ್ತವ್ಯಸ್ತವಾಗಿ ಆಡಿಸುತ್ತಿದ್ದವು. ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದವರೆಲ್ಲರೂ 'ಇನ್ನು ನಮ್ಮ ಜೀವನ ಇಲ್ಲಿಗೆ ಮುಗಿಯಿತು!' ಎಂದು ಹೆದರಿಕೊಂಡರು. ಕೆಲವರು ಹೆದರಿಕೆಯಿಂದ ದೇವರ ಪ್ರಾರ್ಥನೆ ಮಾಡತೊಡಗಿದರು. ಇನ್ನು ಕೆಲವರು ಹೆದರಿಕೆಯಿಂದ ಕಿರುಚಿಕೊಳ್ಳುತ್ತಿದ್ದರು. ಕೆಲವರು ಭಯದಲ್ಲಿ ಅತ್ತಿತ್ತ ಓಡಾಡುತ್ತಿದ್ದರು.

ಆದರೆ ಮುಲ್ಲಾ ಮಾತ್ರ ಎಂದಿನಂತೆ ನಗುತ್ತಾ ಸಮಾಧಾನದಿಂದಿದ್ದ. ಆತನ ಹೆಂಡತಿಗೆ ಆಶ್ಚರ್ಯ. 'ಇಲ್ಲಿ ಇಷ್ಟೊಂದು ಗೊಂದಲಮಯ ವಾತಾವರಣ ಇದೆ. ನಿಮಗೆ ಹೆದರಿಕೆಯಾಗುತ್ತಿಲ್ಲವೇ?' ಎಂದು ಕೇಳಿದಳು.

ಮುಲ್ಲಾ ಕೂಡಲೇ ಕೋಪದಿಂದ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಖಡ್ಗವನ್ನು ಸೆಳೆದು ಆಕೆಯ ಕುತ್ತಿಗೆಯ ಮೇಲಿಟ್ಟು ಅವಳನ್ನು ದುರುಗುಟ್ಟಿ ನೋಡಿದ. ಆಕೆ ಏನೂ ಮಾತನಾಡದೆ ಸುಮ್ಮನಾದಳು. 'ಈ ಖಡ್ಗ ನಿನ್ನನ್ನು ಕೊಂದು ಬಿಡಬಹುದು ಎಂದು ನಿನಗೆ ಭಯವಾಗಲಿಲ್ಲವೇ?' ಎಂದು ಮುಲ್ಲಾ ಕೇಳಿದ. 'ಖಡ್ಗಕ್ಕೆ ಕೊಲ್ಲುವ ಶಕ್ತಿ ಇರಬಹುದು ನಿಜ, ಆದರೆ ಅದನ್ನು ಹಿಡಿದುಕೊಂಡಿರುವುದು ನನ್ನ ಪ್ರೀತಿಯ ಗಂಡನ ಕೈ! ಅವರು ನನ್ನನ್ನು ಕೊಲ್ಲುವುದಿಲ್ಲ ಎಂಬ ನಂಬಿಕೆ ನನಗುಂಟು' ಎಂದು ಆಕೆ ಹೇಳಿದಳು.

ಮುಲ್ಲಾ ಖಡ್ಗವನ್ನು ತನ್ನ ಒರೆಯಲ್ಲಿ ಸಿಕ್ಕಿಸುತ್ತಾ ಹೇಳಿದ : 'ನನ್ನ ಮನಸ್ಸಿನೊಳಗಿರುವುದು ಕೂಡ ಇದೇ ಭಾವನೆಯೇ. ಈ ಕಡಲು ನಮ್ಮನ್ನು ಮುಳುಗಿಸಲು ನೋಡಬಹುದು. ಈ ಅಲೆಗಳು ನಮ್ಮನ್ನು ಕೆಳಗೆ ತಳ್ಳುವ ಶಕ್ತಿಯನ್ನು ಹೊಂದಿವೆ ಎಂಬುದೂ ನಿಜ. ಆದರೆ ಇವುಗಳನ್ನೆಲ್ಲ ನಿಯಂತ್ರಿಸುವ ದೇವರು ಕರುಣಾಮಯಿಯಾದವನು. ಅವನು ನನ್ನನ್ನು ಕೊಲ್ಲಲಾರ ಎಂಬ ನಂಬಿಕೆಯಿರುವುದರಿಂದಲೇ ನಾನು ಯಾವ ಹೆದರಿಕೆಯನ್ನೂ ಇಟ್ಟುಕೊಳ್ಳದೆ ನಿರ್ಭಯವಾಗಿದ್ದೇನೆ' ಎಂದ.

ನಮ್ಮ ಪ್ರಯಾಣ ಯಾವ ಕಡೆ ಸಾಗುತ್ತಿದೆ, ನಮ್ಮ ಗುರಿ ಯಾವುದು, ನಾವದನ್ನು ಗಳಿಸಿಕೊಳ್ಳುತ್ತೇವೆಯೇ ಎಂಬುದನ್ನೆಲ್ಲ ನಿರ್ಣಯಿಸುವುದು ಕಾಲವೇ ಆಗಿದೆ. ಕಾಲ ಬದಲಾಗುತ್ತಿದ್ದಂತೆ ಎಲ್ಲವೂ ಬದಲಾಗುತ್ತದೆ. ಕೆಲವು ಒಳ್ಳೆಯದಾಗಿ ಬದಲಾದರೆ, ಕೆಲವು ಕೆಟ್ಟದಾಗಿಯೂ ಬದಲಾಗಬಹುದು. ಯಾವುದನ್ನೇ ಆಗಲಿ ನಾವು ಗಳಿಸಿ ತೀರಲೇ ಬೇಕು ಎಂಬ ಹಸಿವಿನಿಂದ, ಅದನ್ನು ಖಂಡಿತಾ ಗಳಿಸಿಯೇ ತೀರುತ್ತೇವೆ ಎಂಬ ನಂಬಿಕೆಯಿಂದ ಪ್ರಯಾಣವನ್ನು ಆರಂಭಿಸುವುದಷ್ಟೇ ನಮ್ಮ ಕೆಲಸ. ಅದು ನಮ್ಮನ್ನು ಗುರಿಯ ಸಮೀಪ ಕರೆದುಕೊಂಡು ಹೋಗುತ್ತದೆ.




RAMRAJ

# ನಮ್ಮನು ದೃಢವಾಗಿಸುವ ಕಾರಣಗಳು!



ಮರ ಕತ್ತರಿಸುವ ಒಬ್ಬ ಕೆಲಸಗಾರನಿಗೆ ಒಂದು ವಾರದಿಂದಲೂ ದಿನವೂ ಒಂದೇ ರೀತಿಯ ಕನಸು ಬೀಳುತ್ತಿತ್ತು. 5678 ಎಂದು ಮುಗಿಯುವ ಹತ್ತು ಅಂಕಿಗಳನ್ನೊಳಗೊಂಡ ಒಂದು ಸಂಖ್ಯೆ ಮತ್ತೆ ಮತ್ತೆ ಆತನ ಕನಸಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಬರುತ್ತಲೇ ಇತ್ತು. ಅವನು ತನ್ನ ಕೊಡಲಿಯಿಂದ ಆ ಸಂಖ್ಯೆಯ ಮರವನ್ನು ಕತ್ತರಿಸುತ್ತಾನೆ. ಆ ಮರದೊಳಗಿನಿಂದ ನಿಧಿ ಅವನ ಮುಂದೆ ಸುರಿಯುತ್ತದೆ. ನಿಧಿ ಸುರಿಯುವಾಗ ಅವನಿಗೆ ಥಟ್ಟನೆ ಎಚ್ಚರವಾಗುತ್ತಿತ್ತು.

ತನ್ನ ಗುಡಿಸಲು ಮನೆಯೊಳಗೆ, ಸೊಳ್ಳೆಯ ಕಡಿತವನ್ನು ಸಹಿಸಿಕೊಂಡೂ ಗಾಢ ನಿದ್ರೆಗೆ ಜಾರಿರುವ ಮಕ್ಕಳ ಕಡೆ ಇವನ ದೃಷ್ಟಿ ಹೋಗುತ್ತಿತ್ತು. ಅದರ ನಂತರ ತುಂಬಾ ಸಮಯದವರೆಗೂ ಅವನಿಗೆ ನಿದ್ರೆ ಬರುತ್ತಿರಲಿಲ್ಲ. ಕನಸಿನಲ್ಲಿ ನೋಡುವ ಆ ಸಂಖ್ಯೆಯ ಅರ್ಥವೇನೆಂಬುದು ಅವನಿಗೆ ತಿಳಿಯಲಿಲ್ಲ. ಅವನಿಗೆ ಒಂದೇ ಗೊಂದಲ.

ಮರುದಿನ ಸಾಯಂಕಾಲ ಅವನು ತಾನು ಕತ್ತರಿಸಿದ್ದ ಸೌದೆಗಳನ್ನೆಲ್ಲ ಮಾರಿ, ಅಕ್ಕಿ ಕೊಳ್ಳಲು ಒಂದು ಅಂಗಡಿಗೆ ಹೋದ. ಅಂಗಡಿಯ ಮುಂಭಾಗದಲ್ಲಿ ಲಾಟರಿ ಟಿಕೆಟ್‌ಗಳನ್ನು ಮಾರುತ್ತಿದ್ದರು. ರಾಷ್ಟ್ರದ ಸೈನ್ಯವನ್ನು ಬಲ ಪಡಿಸುವುದಕ್ಕಾಗಿ ನಿಧಿ ಸಂಗ್ರಹಿಸುವ ಉದ್ದೇಶದಿಂದ ಸರ್ಕಾರವೇ ಪ್ರಕಟಿಸಿ ಮಾರುತ್ತಿದ್ದ ಲಾಟರಿ ಅದು. ಮೊದಲ ಬಹುಮಾನ ಒಂದು ಕೋಟಿ ರೂಪಾಯಿಗಳು. ಅಂಗಡಿಯವನು ಅಕ್ಕಿಯನ್ನು ತೂಕ ಹಾಕಿ ಕೊಡುವ ಸಮಯದೊಳಗೆ ಇವನ ದೃಷ್ಟಿ ಆಕಸ್ಮಿಕವಾಗಿ ಆ ಲಾಟರಿ ಚೀಟಿಗಳ ಕಡೆಗೆ ಹೋಯಿತು. ಮೇಲಿದ್ದ ಲಾಟರಿ ಚೀಟಿಯೊಳಗೆ ಇವನ ಕನಸಿನಲ್ಲಿ ಬರುತ್ತಿದ್ದ ಅದೇ ಆ ಅಂಕೆಗಳಿದ್ದವು! ಮನಸ್ಸಿನೊಳಗೆ ಯಾವುದೋ ಒಂದು ಮಿಂಚು ಹರಿ ಹಾಯ್ದಂತಾಯಿತು. ಕೂಡಲೇ ಆ ಲಾಟರಿಯನ್ನು ಅವನು ಕೊಂಡು–ಕೊಂಡ. ಮೊದಲ ಬಹುಮಾನ ಅವನಿಗೇ ದೊರೆಯಿತು.


ಒಬ್ಬ ವ್ಯಕ್ತಿಯ ಜೀವನದಲ್ಲಿ ನಡೆಯುವ ಎಲ್ಲವಕ್ಕೂ ಯಾವುದೋ ಒಂದು ಕಾರಣ ಇದ್ದೇ ಇರುತ್ತದೆ. ಇಂತಹ ಒಳ್ಳೆಯ ವಿಷಯಗಳು ಮಾತ್ರವೇ ಅಲ್ಲ. ಕೆಲವೊಮ್ಮೆ ಕೆಟ್ಟದ್ದೂ ನಡೆಯಬಹುದು. ಅವು ನಮ್ಮನ್ನು ಹೇಗೆ ಬದಲಾಯಿಸುತ್ತವೆ ಎನ್ನುವ ಕಾರಣವನ್ನು ಅರಿತುಕೊಳ್ಳುವುದು ಖಂಡಿತಾ ಅಗತ್ಯ.

ಜೀವನದಲ್ಲಿ ಎಲ್ಲದಕ್ಕೂ ಪೂರ್ವ ಸಿದ್ಧತೆಗಳು ತುಂಬಾ ಅಗತ್ಯ. ಸಂದರ್ಶನಕ್ಕೆ, ಪರೀಕ್ಷೆಗೆ, ಕೆಲಸ ಸಿಗುವುದಕ್ಕೆ ಹೀಗೆ ಎಲ್ಲವಕ್ಕೂ ನಾವು ದೀರ್ಘ ಕಾಲ ಪೂರ್ವ ಸಿದ್ಧತೆ ಮಾಡಿಕೊಳ್ಳಲೇಬೇಕು. ಅಷ್ಟೇ ಏಕೆ, ಒಂದು ಮದುವೆಗೆ ಹೋಗಿ ಬರುವುದೇ ಆಗಿದ್ದರೂ ಕೂಡ ಸರಿಯಾದ ಸಿದ್ಧತೆ ಮಾಡಿಕೊಂಡೇ ಹೊರಡುತ್ತೇವೆ. ಆದರೆ ಜೀವನದಲ್ಲಿ ಅನಿರೀಕ್ಷಿತವಾಗಿ ನಡೆಯುವ ಹಲವು ಸಂಗತಿಗಳಿಗೆ ನಾವು ಸಿದ್ಧವಾಗಿರುವುದಿಲ್ಲ. ಜೀವನದಲ್ಲಿ ನಾವು ಸಂಧಿಸುವ ಬಿಕ್ಕಟ್ಟುಗಳೇ ನಮ್ಮನ್ನು ಅದಕ್ಕೆ ಸಿದ್ಧವಾಗಿಸುತ್ತವೆ. ಸೋಲಿನ ಕಹಿ ಅನುಭವ ನಮಗಿದ್ದರೆ ಮಾತ್ರವೇ ಯಶಸ್ಸಿನ ಸಿಹಿ ಏನೆಂಬುದು ನಮಗೆ ಸರಿಯಾಗಿ ತಿಳಿಯಲು ಸಾಧ್ಯ. ಸಮಸ್ಯೆಗಳನ್ನು ಹೆಚ್ಚಾಗಿ ಎದುರಿಸುವಾಗಷ್ಟೇ, ಪರಿಹಾರದ ಮಾರ್ಗಗಳನು ಹುಡುಕುವ ಮಾನಸಿಕ ದೃಢತೆ ನಮ್ಮೊಳಗೆ ಮೂಡುವುದು. ನಾವು ಸುಂದರವಾದ ಬಂಗಾರದ ಆಭರಣಗಳನ್ನು ನೋಡಿ ಆನಂದಿಸುತ್ತೇವೆ. ಅದರಲ್ಲಿರುವ ಡಿಸೈನ್‌ಗಳನ್ನು ಕಂಡು ಬೆರಗಾಗುತ್ತೇವೆ. ಆದರೆ ಆಭರಣಗಳಿಗೆ ಆ ಸುಂದರ ರೂಪ ನೀಡುವ ಮುನ್ನ ಅವುಗಳನ್ನು ಬೆಂಕಿಯಲ್ಲಿ ಹಾಕಿ ಕರಗಿಸಿರುತ್ತಾರೆ ಎಂಬುದನ್ನು ನಾವು ನೆನಪಿಸಿಕೊಳ್ಳುವುದೇ ಇಲ್ಲ. ಬೆಂಕಿಯ ಆ ಬಿಸಿಯನ್ನು ತಾಳಿಕೊಂಡ ಕಾರಣದಿಂದಲೇ ಅದು ಈಗ ಇಷ್ಟೊಂದು ಸುಂದರವಾದ ಆಕಾರವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.



ಸೋಲು, ದುಃಖ, ಕಳೆದುಕೊಳ್ಳುವಿಕೆ ಮೊದಲಾದವುಗಳೇ ಒಬ್ಬ ವ್ಯಕ್ತಿಯನ್ನು ದೃಢವಾಗಿ ಬದಲಾಯಿಸುತ್ತವೆ. ಇವುಗಳು ಎದುರಾಗುವಾಗ ನಾವು ತಡವರಿಸಿ ಹೋಗುವುದುಂಟು. ಆದರೆ, ಅದನ್ನು ದಾಟಿ ಬಂದ ಮೇಲೆ ಮನಸ್ಸಿನಲ್ಲಿ ಗಟ್ಟಿತನ ಮೂಡುತ್ತದೆ. ಗಾಳಿಯಿಂದ ಪದೇ ಪದೇ ತೂಗಾಡುವ ಮರವೇ ಹೆಚ್ಚು ಗಟ್ಟಿಯಾಗಿ ಬೆಳೆದು ನಿಲ್ಲುವುದು. ಕಷ್ಟದ ಸಮಯ ತುಂಬಾ ದೀರ್ಘ ಕಾಲ ಇರುವುದಿಲ್ಲ. ಆದರೆ, ಆ ಕಷ್ಟಗಳನ್ನು ದಾಟಿಕೊಂಡು ಬರುವ ಮನುಷ್ಯರು ಗಟ್ಟಿಯಾಗಿ ನಿಲ್ಲುತ್ತಾರೆ. ಬದುಕಿನಲ್ಲಿ ಎಲ್ಲಾ ವಿಷಯಗಳೂ ನಮ್ಮ ಕಟ್ಟುಪಾಡಿನಲ್ಲಿ ಇರುವುದಿಲ್ಲ. ಆದರೆ ಆ ಕಷ್ಟಗಳನ್ನು ದಾಟಿಕೊಂಡು ಬರುವವರು ನೆಲೆಯಾಗಿ ನಿಲ್ಲುತ್ತಾರೆ. ಬದುಕಿನಲ್ಲಿ ಎಲ್ಲಾ ವಿಷಯಗಳೂ ನಮ್ಮ ನಿಯಂತ್ರಣದಲ್ಲಿರುವುದಿಲ್ಲ. ಹಾಗಿರುವುದು ಒಳ್ಳೆಯದೂ ಅಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ. 'ಜೀವನ ಎನ್ನುವುದು 10%ರಷ್ಟು ನಮಗೇನು ನಡೆಯುತ್ತಿದೆ ಎಂಬುದನ್ನವಲಂಬಿಸಿಯೂ; 90%ರಷ್ಟು ಅದನ್ನು ನಾವು ಹೇಗೆ ಎದುರಿಸುತ್ತೇವೆ ಎಂಬುದನ್ನನುಸರಿಸಿಯೂ ಇರುತ್ತದೆ ಎಂದು ಒಂದು ನಾಣ್ಣುಡಿಯುಂಟು. ಬದುಕಿನ ಸಹಜತೆಯನ್ನು ಅರ್ಥ ಮಾಡಿಕೊಂಡು ಮೇಲೇರಲು ಈ ಸಮಸ್ಯೆಗಳು ನೆರವಾಗುತ್ತವೆ.

'ನಮ್ಮಿಂದ ಸಾಧ್ಯವಿಲ್ಲ ಎಂಬುದು ಯಾವುದೂ ಇಲ್ಲ' ಎಂಬಂತಹ ನಿರ್ಲಕ್ಷ್ಯ ಧೋರಣೆ ಕೆಲವರಲ್ಲಿರುತ್ತದೆ. 'ಯಾವುದನ್ನು ಬೇಕಾದರೂ ಸಾಧಿಸುವ ಗಟ್ಟಿತನ ನನ್ನಲ್ಲಿದೆ' ಎಂಬ ಈಗೋ ಕೆಲವರಲ್ಲಿರುತ್ತದೆ. ಅವೆಲ್ಲವನ್ನೂ ಒಡೆದುಕೊಂಡು, 'ಯಾರಿಗೆ ಏನು ಬೇಕಾದರೂ ನಡೆಯುವ ಸಾಧ್ಯತೆಯಿದೆ. ಎಚ್ಚರಿಕೆಯಿಂದಿರು' ಎಂದು ಎಚ್ಚರಿಸುವುದಕ್ಕಾಗಿಯೇ ನಮ್ಮ ಬದುಕಿನಲ್ಲಿ ಸೋಲುಗಳೂ, ಸಮಸ್ಯೆಗಳೂ ಕಂಡು ಬರುತ್ತವೆ. ಒಬ್ಬ ವ್ಯಕ್ತಿಯ ಸಹಜ ಗುಣವನ್ನು ಕೂಡ ಬದಲಾಯಿಸಿ ಅವರು ವಿನಯ, ಶಿಸ್ತುಗಳನ್ನು ಉಳ್ಳವರನ್ನಾಗಿ ಅವು ಬದಲಾಯಿಸುತ್ತವೆ. ನಾವು ಹಲವು ಬಗೆಯ ಹಳೆಯ ನಂಬಿಕೆಗಳನ್ನು ಮೈಗೂಡಿಸಿಕೊಂಡಿರುತ್ತೇವೆ. ಅಂತಹ ನಂಬಿಕೆಗಳನ್ನು ಇಂತಹ ಸಮಸ್ಯೆಗಳು ಒಡೆದು ಹಾಕುತ್ತವೆ. ಎಂದಿನ ದೃಷ್ಟಿಕೋನಕ್ಕಿಂತ ಭಿನ್ನವಾಗಿ ಯಾವುದನ್ನೇ ಆಗಲಿ ಎದುರುಗೊಳ್ಳಲು ಈ ಸಮಸ್ಯೆಗಳು ನಮಗೆ ಕಲಿಸಿ ಕೊಡುತ್ತವೆ. ಸಮಸ್ಯೆಗಳನ್ನು ತಪ್ಪಿಸಿಕೊಂಡು ತಾತ್ಕಾಲಿಕವಾದ ಸುಖವನ್ನು ಹುಡುಕುವುದರಲ್ಲೇ ಹಲವರು ತಮ್ಮ ಗಮನ ಹರಿಸುತ್ತಾರೆ. ಸಮಸ್ಯೆಗಳನ್ನು ಪರಿಹರಿಸಿಕೊಂಡು ನಿರಂತರವಾದ ಶಾಶ್ವತ ಸುಖವನ್ನು ಹುಡುಕಾಡಬೇಕು ಎನ್ನುವುದನ್ನು ನಾವು ಇವುಗಳ ಮೂಲಕ ಅರ್ಥ ಮಾಡಿಕೊಳ್ಳುತ್ತೇವೆ.




ಬದುಕಿನಲ್ಲಿ ಕೆಲವರು ಯಾವಾಗಲೂ ಎಲ್ಲವೂ ಖಚಿತವಾಗಿ ಇರಬೇಕೆಂದು ಬಯಸುತ್ತಾರೆ. ಆದರೆ, ಖಚಿತತೆಯನ್ನು ಹುಡುಕಾಡುವುದಕ್ಕಿಂತಲೂ ಅಭಿವೃದ್ಧಿಯನ್ನು ಹೊಂದುವುದೇ ಮುಖ್ಯವಾದುದು ಎನ್ನುವುದನ್ನು, ಜೀವನದಲ್ಲಿ ಎದುರಾಗುವ ಬಿಕ್ಕಟ್ಟುಗಳು ನಮಗೆ ಕಲಿಸಿ ಕೊಡುತ್ತವೆ. ನಾವೇನನ್ನೇ ಮಾಡಿದರೂ ಅದರಲ್ಲಿ ಅಭಿವೃದ್ಧಿಯನ್ನು ಹೊಂದಬೇಕು. ದಿನದಿನವೂ ಕೊಂಚಕೊಂಚವೇ ಬೆಳೆಯುವ ಬೆಳವಣಿಗೆಯೇ, ನಾವು ಯಾವ ತಪ್ಪನ್ನೂ ಮಾಡದ ಹಾಗೆ ಮುಂದೆ ಕೊಂಡೊಯ್ಯುವುದು. ಕೆಲವರು ಬದುಕಿನಲ್ಲಿ ಹೀಗೆ ಯಾವ ಅಭಿವೃದ್ಧಿಯನ್ನೂ ಕಾಣದೆ ಒಂದೇ ರೀತಿಯಲ್ಲಿ ಮಡುಗಟ್ಟಿ ಹೋಗಿರುತ್ತಾರೆ. ಒಂದು ಘಟ್ಟದಲ್ಲಿ ಅವರು ಹಳೆಯ ಪಂಚಾಂಗದಂತೆ ಯಾವುದಕ್ಕೂ ಬಾರದಂತಾಗಿ ಹೋಗಿ, ಯಾವುದರ ಜೊತೆಗೂ, ಯಾರ ಜೊತೆಗೂ ಸ್ಪರ್ಧೆ ಮಾಡುವ ಸಾಮರ್ಥ್ಯವನ್ನೇ ಕಳೆದುಕೊಳ್ಳುತ್ತಾರೆ. ಇಂತಹ ಸಮಸ್ಯೆಗಳ ಮೂಲಕ ಬದುಕು ಅವರಿಗೆ ಜೀವನ ಪಾಠವನ್ನು ಕಲಿಸಿ ಕೊಡುತ್ತದೆ. ಒಂದು ಕೆಲಸವನ್ನು ಮಾಡುವುದರಲ್ಲಿ ದೊರಕುವ ತೃಪ್ತಿ ದೊರಕದೇ ಹೋದಲ್ಲಿ, ಸಾಮಾನ್ಯವಾದ ಕೆಲಸ ಮಾಡುವುದರಲ್ಲಿ ಕೂಡ ಇತರರ ಜೊತೆಯಲ್ಲಿ ಸಮಾನವಾಗಿ ನಿಲ್ಲಲು ಸಾಧ್ಯವಾಗದೇ ಹೋದಾಗಲೋ, 'ನಾವು ಬೆಳವಣಿಗೆ ಹೊಂದಬೇಕು' ಎನ್ನುವ ಭಾವನೆ ನಮ್ಮೊಳಗೆ ಸಹಜವಾಗಿ ಮೂಡಬೇಕು. ಇಲ್ಲದೇ ಹೋದಲ್ಲಿ, ಸರಿಯಾದ ಏಟು ಕೊಡುವ ಮೂಲಕ ಜೀವನ ನಮಗೆ ಪಾಠ ಕಲಿಸಿಕೊಡುತ್ತದೆ.

ಸೋಲುಗಳು, ಸಮಸ್ಯೆಗಳು, ದುಃಖಗಳು ಇತ್ಯಾದಿಗಳನ್ನು ಪದೇ ಪದೇ ಸಂಧಿಸುವವರೇ ಇತರರ ಜೊತೆ ಕರುಣೆಯಿಂದ ನಡೆದುಕೊಳ್ಳುವುದು. ಅಂತಹವರು ಇತರರ ಚಿಂತೆಗಳನ್ನು, ಸಮಸ್ಯೆಗಳನ್ನು ಕಿವಿಗೊಟ್ಟು ಕೇಳುತ್ತಾರೆ. ಮಾನವೀಯತೆಯೊಂದಿಗೆ ನಡೆದುಕೊಳ್ಳುತ್ತಾರೆ. ಏಕೆಂದರೆ, ಒಂದು ಸಮಸ್ಯೆಯೋ, ಸೋಲೋ, ಒಬ್ಬ ವ್ಯಕ್ತಿಯನ್ನು ಹೇಗೆಲ್ಲಾ ಬದಲಾಯಿಸುತ್ತದೆ ಎಂಬುದನ್ನು ಅವರು ಅನುಭವಪೂರ್ವಕ ತಿಳಿದುಕೊಳ್ಳುತ್ತಾರೆ. ಪ್ರತಿಯೊಬ್ಬರಿಗೂ ಮೂರು ಬಗೆಯ ಮುಖಗಳಿರುತ್ತವೆ. ಒಂದು: ಈ ಜಗತ್ತಿಗೆ ಅವರು ತೋರಿಸುವ ಮುಖ. ಎರಡು: ತಮ್ಮ ಬಂಧುಗಳು ಹಾಗೂ ಗೆಳೆಯರ ಮುಂದೆ ಅವರು ತೋರಿಸುವ ಮುಖ. ಮೂರು: ಯಾರಿಗೂ ತೋರಿಸದ ಸ್ವತಃ ಅವರಿಗೆ ಮಾತ್ರ ತಿಳಿದಿರುವ ಅವರ ಅಂತರಂಗದ ಮುಖ. ಇದೇ ಅವರ ನಿಜವಾದ ವ್ಯಕ್ತಿತ್ವವಾಗಿರುತ್ತದೆ. ತುಂಬಾ ಸಮಸ್ಯೆಗಳನ್ನೂ, ದುಃಖಗಳನ್ನೂ ಸಂಧಿಸಿ ಬದುಕಿನಲ್ಲಿ ಪಕ್ವತೆಯನ್ನು ಗಳಿಸಿಕೊಳ್ಳುವ ವ್ಯಕ್ತಿಯಲ್ಲಿ, ಈ ಮೂರೂ ಮುಖಗಳಲ್ಲಿರುವ ವ್ಯತ್ಯಾಸಗಳು ಕಡಿಮೆಯಾಗುತ್ತಾ ಹೋಗುತ್ತವೆ. ಒಂದು ಹಂತದಲ್ಲಿ ಅವರು ತಮ್ಮ ನಿಜವಾದ ಮುಖವನ್ನು ಮಾತ್ರವೇ ಜಗತ್ತಿಗೂ, ಬಂದುಗಳ ಮುಂದೆಯೂ ತೋರಿಸುತ್ತಾರೆ. ಈ ಬಾಹ್ಯಗುಣವೂ, ಪ್ರಾಮಾಣಿಕತೆಯೂ ಅವರಿಗೆ ಒಳ್ಳೆಯ ಗೌರವವನ್ನು ತಂದು ಕೊಡುತ್ತದೆ. ಆ ಗೌರವವೇ ಅವರಿಗೆ ಹಲವು ಗೌರವಗಳನ್ನು, ಔನ್ನತ್ಯವನ್ನೂ, ಯಶಸ್ವಿಯಾಗಿ ಗಳಿಸಿಕೊಡುತ್ತದೆ.


RAMRAJ

# ಕಲಾಂ ಸೃಷ್ಟಿಯಾದ ಕಾರಣ!

ಭಾ ಭಾರತದ 'ಮಿಸೈಲ್ ಮ್ಯಾನ್', ಯುವಕರ 'ಡ್ರೀಮ್ ಹೀರೋ', ಮಕ್ಕಳ ಮೆಚ್ಚಿನ 'ಆದರ್ಶ ವ್ಯಕ್ತಿ', ನಮ್ಮ ರಾಷ್ಟ್ರವನ್ನು ಮಹಾಶಕ್ತಿಶಾಲಿ ರಾಷ್ಟ್ರವನ್ನಾಗಿ ಬದಲಾಯಿಸಲು ಕನಸು ಕಂಡ 'ಮಹಾ ಕನಸುಗಾರ' ಹೀಗೆ ಅಬ್ದುಲ್ ಕಲಾಂ ಅವರು ಅನೇಕ ಗೌರವಗಳಿಗೆ ಭಾಜನರು. ಜನಸಾಮಾನ್ಯರೂ ಕೂಡ ರಾಷ್ಟ್ರಪತಿ ಭವನದೊಳಗೆ ಪ್ರವೇಶಿಸಬಹುದು ಎಂಬ ಭರವಸೆಯನ್ನು ಜನಮನದಲ್ಲಿ ಬಿತ್ತಿದವರು ಅವರು.

ಅವರು ಸ್ವಪ್ರತಿಭೆಯ ಮೂಲಕ ಪ್ರವರ್ಧಮಾನಕ್ಕೆ ಬಂದವರು, ಕ್ರಮೇಣ ಯಶಸ್ಸನ್ನು ಗಳಿಸಿದವರು ಎಂಬುದು ಮಾತ್ರ ನಮಗೆ ಗೊತ್ತು. ಆದರೆ. ನೀವು ಎಷ್ಟೇ ಪ್ರತಿಭಾವಂತರಾಗಿದ್ದರೂ, ಒಂದು ಹಂತದಲ್ಲಿ ನೀವು ನಿರಾಕರಣೆಗೊಳಗಾಗಬಹುದು. ಒಬ್ಬರ ಜೀವನದಲ್ಲಿ ಯಶಸ್ಸುಗಳು ಮಾತ್ರ ಯಾವಾಗಲೂ ಇರುವುದಿಲ್ಲ. ಕೆಲವೊಮ್ಮೆ ನೀವು ಅನಿರೀಕ್ಷಿತ ವೈಫಲ್ಯವನ್ನೂ ಎದುರಿಸಬೇಕಾಗಿ ಬರಬಹುದು. ಕಲಾಂ ಜೀವನದಲ್ಲಿ ಅಂತಹ ನಿರಾಕರಣೆ ಮತ್ತು ವೈಫಲ್ಯವನ್ನು ಪಡೆದವರು. ಅದಕ್ಕಾಗಿಯೇ ಅವರು ಮುಂದೆ ಇಂತಹ ಪ್ರಸಿದ್ಧ ವ್ಯಕ್ತಿಯಾದರು.

ವಿಮಾನದಲ್ಲಿ ಹಾರಬೇಕು ಎಂಬುದು ಕಲಾಂ ಅವರ ಬಾಲ್ಯದ ಕನಸಾಗಿತ್ತು. ಆಕಾಶದಲ್ಲಿ ರೆಕ್ಕೆ ಬಡಿಯುವ ಪಕ್ಷಿಗಳನ್ನು ಕಂಡು ಬೆರಗಾದ ಬಾಲಕ ಕಲಾಂ ತಾನೂ ಹಾರುತ್ತಿರುವಂತೆ ಕನಸು ಕಂಡ. ಅದಕ್ಕಾಗಿಯೇ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಏರೋನಾಟಿಕಲ್ ಎಂಜಿನಿಯರಿಂಗ್ ಓದಿದ. ಇಂಜಿನಿಯರ್ ಪದವಿ ಪಡೆದ ನಂತರ ಒಂದೇ ಬಾರಿಗೆ ಎರಡು ಉದ್ಯೋಗಗಳಿಗೆ ಅರ್ಜಿ ಸಲ್ಲಿಸಿದ. ಒಂದು: ಭಾರತೀಯ ವಾಯುಪಡೆಯಲ್ಲಿ ಅಧಿಕಾರಿ ಹುದ್ದೆ. ಇನ್ನೊಂದು: ಕೇಂದ್ರ ರಕ್ಷಣಾ ಸಚಿವಾಲಯದಲ್ಲಿ ಸಂಶೋಧಕರ ಕೆಲಸ.



ರಕ್ಷಣಾ ಸಚಿವಾಲಯದ ಸಂಶೋಧಕರ ಹುದ್ದೆಯ ಸಂದರ್ಶನದಲ್ಲಿ ಅವರು ಉತ್ಸಾಹದಿಂದ ಭಾಗವಹಿಸಲಿಲ್ಲ. ಅದನ್ನು ನಿರಾಳವಾಗಿ ಎದುರಿಸಿದರು. ಆದರೆ ವಾಯುಸೇನೆಗೆ ಸೇರಿದರೆ ಆಕಾಶದಲ್ಲಿ ಹಾರುವ ಕನಸು ನನಸಾಗುತ್ತದೆ ಎಂದು ಅವರು ನಂಬಿದ್ದರು. ಆದರೆ ವಾಯುಪಡೆಯ ಆಯ್ಕೆಯಲ್ಲಿ ಜ್ಞಾನಕ್ಕಿಂತ ಆಕಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಅವರ ದೈಹಿಕ ಸಾಮರ್ಥ್ಯ ಮತ್ತು ಮಾತನಾಡುವ ಕೌಶಲ್ಯವನ್ನು ಸಹ ಅಲ್ಲಿ ಪರೀಕ್ಷಿಸಿದರು. ಆತ್ಮವಿಶ್ವಾಸ ಮತ್ತು ನಂಬಿಕೆ ಅವರಲ್ಲಿದ್ದರೂ ಕೂಡ, ಸಂದರ್ಶನದ ಸಮಯದಲ್ಲಿ ಅವರು ಒಂದು ಬಗೆಯ ಗಾಬರಿ ಮತ್ತು ಗೊಂದಲಕ್ಕೊಳಗಾಗಿದ್ದರು. 25 ಜನರಲ್ಲಿ ಕೇವಲ ಎಂಟು ಮಂದಿಯನ್ನು ಮಾತ್ರ ಆಯ್ಕೆ ಮಾಡಲಾದ ಅಂತಿಮ ಆಯ್ಕೆಯಲ್ಲಿ ಅವರು ಒಂಬತ್ತನೇ ಸ್ಥಾನದಲ್ಲಿದ್ದರು. ಹೀಗಾಗಿ ವಿಮಾನದಲ್ಲಿ ಹಾರುವ ಅವರ ಆಸೆ ಕೈ ಜಾರಿ ಹೋಯಿತು.

ಈ ನಿರಾಸೆಯನ್ನು ಅವರಿಂದ ಅರಗಿಸಿಕೊಳ್ಳಲಾಗಲಿಲ್ಲ. ಸೋಲಿನಿಂದ ದೇಹ ಆಯಾಸ ಹೊಂದಿ, ಅಲ್ಲಿಂದ ಹೊರ ಬಂದರು. ವಾಯುಪಡೆಯ ಪ್ರಧಾನ ಕಚೇರಿಯ ಬಳಿ ಗಂಗಾನದಿಯ ದಡದಲ್ಲಿರುವ ಸ್ವಾಮಿ ಶಿವಾನಂದ ಆಶ್ರಮ ಅವರ ಕಣ್ಣಿಗೆ ಬಿತ್ತು. ಅವರು ನೇರ ಅಲ್ಲಿಗೆ ಹೋದರು. ಕಲಾಂ ದುಃಖಿತರಾಗಿದ್ದುದನ್ನು ಸ್ವಾಮಿ ಶಿವಾನಂದರು ನೋಡಿದರು. ಕಾರಣ ಕೇಳಿದರು. ಅವರು ಭಾರತೀಯ ವಾಯುಸೇನೆಗೆ ಸೇರಲು ಮತ್ತು ವಿಮಾನದಲ್ಲಿ ಹಾರಲು ಬಯಸಿದ್ದರು. ವಾಯುಸೇನೆಗೆ ಸೇರುವ ಮತ್ತು ವಿಮಾನವನ್ನು ಹಾರಿಸುವ ತಮ್ಮ ಬಾಲ್ಯದ ಕನಸು ಭಗ್ನಗೊಂಡ ಬಗ್ಗೆ ಕಲಾಂ ಹತಾಶೆಯಿಂದ ಮಾತನಾಡಿದರು.

'ನಡೆದುದನ್ನು ಸ್ವೀಕರಿಸಿ ಒಪ್ಪಿಕೊಳ್ಳಿ. ಜೀವನವು ನಿಮಗೆ ನೀಡುವ ಇತರ ಅವಕಾಶಗಳನ್ನು ಬಳಸಿಕೊಂಡು ಮುಂದೆ ಹೋಗಿ. ನೀವು ವಾಯುಪಡೆಯಲ್ಲಿ ಅಧಿಕಾರಿಯಾಗಿ, ವಿಮಾನವನ್ನು ಹಾರಿಸಬೇಕು ಎಂಬುದು ನಿಮಗಾದುದು ಅಲ್ಲದೇ ಇರಬೇಕು. ಈ ವೈಫಲ್ಯವೇ ನಿಮ್ಮನ್ನು ನಿಮಗಾಗಿ ಉದ್ದೇಶಿಸಿರುವ ಹಾದಿಯಲ್ಲಿ ಕರೆದೊಯ್ಯುತ್ತದೆ. ಆ ಹಾದಿಯಲ್ಲಿ ಸಾಗಿರಿ' ಎಂದು ಸ್ವಾಮಿ ಶಿವಾನಂದರು ಸಲಹೆ ನೀಡಿದರು.

ಮನೆಗೆ ಹಿಂದಿರುಗಿದ ಕಲಾಂ ಅವರಿಗೆ ಕೆಲವೇ ದಿನಗಳಲ್ಲಿ ರಕ್ಷಣಾ ಸಚಿವಾಲಯದಲ್ಲಿ ಸಂಶೋಧಕರಾಗಿ ಕೆಲಸ ಸಿಕ್ಕಿತು. ಮರುದಿನವೇ ಅವರು ಸೇವೆಗೆ ಸೇರಿದರು. ನಂತರ ನಡೆದದ್ದೆಲ್ಲವೂ ಇತಿಹಾಸ. ಭಾರತೀಯ ಬಾಹ್ಯಾಕಾಶ ಸಂಶೋಧನೆ ಮತ್ತು ಭಾರತೀಯ ಸೇನೆಯ ಬಲವರ್ಧನೆಗೆ



ಅವರ ಕೊಡುಗೆ ಅಪಾರವಾಗಿದೆ. ಭಾರತದ ಸ್ವಾವಲಂಬಿ ರಾಕೆಟ್ ಅನ್ನು ಅಭಿವೃದ್ಧಿಪಡಿಸುವುದರಿಂದ ಹಿಡಿದು ಅತ್ಯಾಧುನಿಕ ಸೂಪರ್ಸಾನಿಕ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವವರೆಗೆ, ಅವರ ಸಂಶೋಧನೆಯು ಭಾರತವನ್ನು ಸೂಪರ್ ಪವರ್ ಮಾಡಲು ಸಹಾಯ ಮಾಡಿತು.

ಅವರು ತಮ್ಮ ಬಾಲ್ಯದ ಕನಸನ್ನು ಅನುಸರಿಸಿದ್ದರೆ, ಅವರು ಸಾಮಾನ್ಯ ವಾಯುಪಡೆಯ ಅಧಿಕಾರಿಯಾಗಿ ನಿವೃತ್ತರಾಗುತ್ತಿದ್ದರು. ಆ ಸಂದರ್ಶನದಲ್ಲಿ ಅವರನ್ನು ತಿರಸ್ಕರಿಸಿದ್ದೇ ಅವರನ್ನು ಭಾರತದ ಅತ್ಯುತ್ತಮ ವಿಜ್ಞಾನಿಯನ್ನಾಗಿ ಮಾಡಿತು. ಭಾರತದ ಅತ್ಯುನ್ನತ ಪ್ರಶಸ್ತಿ ಭಾರತ ರತ್ನ ಅವರನ್ನು ಅರಸಿ ಬಂದಿತ್ತು. ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ ಭಾರತದ ಮೊದಲ ಪ್ರಜೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

ಕಲಾಂ ಅವರ ಜೀವನದಿಂದ ನಾವು ಅರ್ಥ ಮಾಡಿಕೊಳ್ಳಬೇಕಾದದ್ದು... ನಮ್ಮ ಜೀವನವು 'ಒಂದು ವೈಫಲ್ಯ'ದಿಂದ ಕೊನೆಗೊಳ್ಳುವುದಿಲ್ಲ. ನಾವು ಅಂದುಕೊಂಡಂತೆ ಎಲ್ಲವೂ ನಡೆಯುವುದರಿಂದ ನಮಗೆ ಉತ್ತಮ ಭವಿಷ್ಯ ಸಿಗುವುದಿಲ್ಲ. ಜೀವನದಲ್ಲಿ ಅನೇಕ ಘಟನೆಗಳಿಗೆ ಯಾವ್ಯಾವುದೋ ಕಾರಣಗಳು ಇರುತ್ತವೆ.

ಎಲ್ಲವೂ ಸರಿಯಾಗಿ ನಡೆಯುತ್ತಿರುವಾಗ ನಾವು ಕಾರಣಗಳನ್ನು ಹುಡುಕುವುದಿಲ್ಲ. ನಮ್ಮ ಉಸಿರಾಟವು ನಮ್ಮ ಪ್ರಯತ್ನವಿಲ್ಲದೆ ನಡೆಯುತ್ತದೆ; ಹೃದಯವು ಅನಿಯಂತ್ರಿತವಾಗಿ ಬಡಿಯುತ್ತದೆ; ದೇಹದ ಭಾಗಗಳು ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿರುತ್ತವೆ. ಇವೆಲ್ಲವೂ ಸಂಭವಿಸುವ ಕಾರಣವನ್ನು ನಾವು ಹುಡುಕುವುದಿಲ್ಲ. ಅನಿರೀಕ್ಷಿತವಾಗಿ ಏನಾದರೂ ತಪ್ಪಾಗಿ ನಡೆದಾಗ ಮಾತ್ರ ನಾವು ಆತಂಕಕ್ಕೆ ಒಳಗಾಗುತ್ತೇವೆ.

ಎಲ್ಲವೂ ಒಂದು ಕಾರಣಕ್ಕಾಗಿ ನಡೆಯುತ್ತದೆ ಮತ್ತು ನಮ್ಮ ಯೋಗ್ಯತೆ ಮತ್ತು ಸಾಮರ್ಥ್ಯವನ್ನು ಅರಿತುಕೊಳ್ಳದೆ ನಾವು ಕೆಲವು ಸಣ್ಣ ಗುರಿಯನ್ನು ಸಾಧಿಸಲು ಯೋಚಿಸಬಹುದು. ಹಾಗಾದಾಗ ನಮ್ಮ ಅದೃಷ್ಟವು ಅದನ್ನು ತಿರಸ್ಕರಿಸುತ್ತದೆ ಮತ್ತು ಸರಿಯಾದ ಗುರಿಯತ್ತ ನಮ್ಮನ್ನು ಕರೆದೊಯ್ಯುತ್ತದೆ. ಕಾರಣವನ್ನು ಅರ್ಥ ಮಾಡಿಕೊಳ್ಳದೆ ನಾವು ಗೊಂದಲಕ್ಕೊಳಗಾಗಬಹುದು. ಆದರೆ ಯಾವುದಕ್ಕೂ ಕಾರಣವಿಲ್ಲದೆ ಇರುವುದಿಲ್ಲ.

ಇಬ್ಬರು ವ್ಯಕ್ತಿಗಳು ಪ್ಯಾರಾಚೂಟ್ ಧರಿಸಿ ವಿಮಾನದಿಂದ ಜಿಗಿಯುತ್ತಾರೆ ಎಂದುಕೊಳ್ಳೋಣ. ಭೂಮಿಯ ಗುರುತ್ವಾಕರ್ಷಣೆಯ ಬಗ್ಗೆ ಅವರಲ್ಲಿ ಒಬ್ಬನಿಗೆ ಚೆನ್ನಾಗಿ ತಿಳಿದಿದೆ. ಬಾಹ್ಯಾಕಾಶದಲ್ಲಿ ತೇಲುತ್ತಿರುವ ಯಾವುದನ್ನಾದರೂ ಭೂಮಿ ತನ್ನ ಕಡೆಗೆ ಸೆಳೆಯುತ್ತದೆ ಎಂದು ಅರ್ಥ ಮಾಡಿಕೊಳ್ಳುವ ಮೂಲಕ ಆತ ಭೂಮಿಯನ್ನು ತಲುಪುತ್ತಾನೆ. ಇನ್ನೊಬ್ಬನಿಗೆ ಈ ವಿಜ್ಞಾನ ಗೊತ್ತಿಲ್ಲ. ಆದರೆ ಅವನೂ ಕೂಡ ಅದೇ ವೇಗದಲ್ಲಿ ಭೂಮಿಯನ್ನು ತಲುಪುತ್ತಾನೆ. ಏಕೆಂದರೆ ಕಾರಣವಿಲ್ಲದೆ ಏನೂ ನಡೆಯುವುದಿಲ್ಲ ಆದರೆ ಆ ಕಾರಣ ನಮಗೆ ತಿಳಿದಿರುವುದಿಲ್ಲ ಅಷ್ಟೇ.

ಜೀವನ ಎಂಬುದು ಒಂದು ಪರೀಕ್ಷೆ. ಒಳ್ಳೆಯ ಅನುಭವಗಳು ಮತ್ತು ಕೆಟ್ಟ ಸನ್ನಿವೇಶಗಳನ್ನು ನಾವು ಹೇಗೆ ಎದುರಿಸುತ್ತೇವೆ ಎಂಬುದನ್ನು ಅವಲಂಬಿಸಿಯೇ ನಮ್ಮ ಭವಿಷ್ಯವನ್ನು ನಿರ್ಧರಿಸಲ್ಪಡುತ್ತದೆ.

●

RAMRAJ

# ಬಿಳುಪು

ಭಾವನೆಗಳು

ಸಂಚಿಕೆ 7 ಸಂಪುಟ 5
ಅಕ್ಟೋಬರ್ 2024

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
10/55, ರಾಜು ಸ್ಟ್ರೀಟ್
ವೆಸ್ಟ್ ಮಾಂಬಳಂ
ಚೆನ್ನೈ 600 033

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

# ಸಂತೋಷಕ್ಕೆ ಕಾರಣವನ್ನು ಹುಡುಕಿರಿ!



ಅಡುಗೆ ಮಾಡುವುದನ್ನು ತುಂಬ ಚೆನ್ನಾಗಿ ಕಲಿತಿದ್ದ ಒಬ್ಬ ಪಾಕ ತಜ್ಞನಿದ್ದ. ಆತ ಮಾಡುವ ಬಿರಿಯಾನಿಯ ರುಚಿಗೆ ಎಲ್ಲರೂ ಮಾರುಹೋಗುತ್ತಿದ್ದರು. ಆತನ ಒಡೆತನದಲ್ಲಿದ್ದ ಸಣ್ಣ ಹೋಟೆಲ್ ಯಾವಾಗಲೂ ಜನರಿಂದ ತುಂಬಿರುತ್ತಿತ್ತು.

ಒಂದು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ 50 ಜನ ಗೆಳೆಯರು, ಮೊದಲೇ ತಿಳಿಸಿ ಒಂದು ರಜೆಯ ದಿನ ಅಲ್ಲಿಗೆ ಬರುವಷ್ಟರಲ್ಲಿ ಬಿರಿಯಾನಿ ತಯಾರಾಗಿತ್ತು. ಅದರ ವಾಸನೆ ಕೋಣೆಯನ್ನು ವ್ಯಾಪಿಸಿತ್ತು. ಅವರು ಅಂದು ಸಾಮಾನ್ಯಕ್ಕಿಂತ ಹೆಚ್ಚು ಹಸಿದಿದ್ದರು. ಎಲ್ಲರೂ ತಾವು ಈ ಮೊದಲು ಸೇವಿಸಿದ ಅತ್ಯುತ್ತಮ ಆಹಾರದ ಬಗ್ಗೆ ಉತ್ಸಾಹದಿಂದ ಮಾತನಾಡುತ್ತಿದ್ದರು. ಕೆಲವರು ಈಗಾಗಲೇ ಇಲ್ಲಿಗೆ ಬಂದು ಈ ಬಿರಿಯಾನಿ ತಿಂದ ಅನುಭವವನ್ನೂ ಹೇಳುತ್ತಿದ್ದರು.

ಊಟ ಸಿದ್ಧವಾದಾಗ ಪಾಕಶಾಲೆಯ ತಜ್ಞ ನಗುನಗುತ್ತಲೇ ಎಲ್ಲರಿಗೂ ಊಟ ಬಡಿಸಿದ. ರುಚಿಕರವಾದ ಬಿರಿಯಾನಿಯ ವಾಸನೆಯನ್ನು ಆಘ್ರಾಣಿಸುತ್ತಾ, ಮೊದಲ ತುತ್ತು ಬಾಯಿಗೆ ಇಟ್ಟುಕೊಳ್ಳಲು ಹೋದಾಗ, ಆತ ಅವರಿಗೆ ಒಂದು ಎಚ್ಚರಿಕೆ ನೀಡಿದ: 'ಜೀರಿಗೆ ಸಾಂಬಾ ಅಕ್ಕಿಯನ್ನು ಬಹಳ ಮುತುವರ್ಜಿಯಿಂದ ಶುಚಿ ಮಾಡಿದ ನಂತರವೇ ನಾನು ಬಿರಿಯಾನಿ ಮಾಡುತ್ತೇನೆ. ಇಂದು ಕೂಡ ಅಕ್ಕಿಯನ್ನು ಶುಚಿಗೊಳಿಸುವಾಗ ಅಕ್ಕಿಯಲ್ಲಿನ ಕಲ್ಲುಗಳನ್ನೆಲ್ಲ ತೆಗೆದುಬಿಟ್ಟೆ. ಆದರೆ ಅಕ್ಕಿಯಂತಿಯೇ ಕಾಣುತ್ತಿದ್ದ ನಾಲ್ಕೈದು ಬಿಳಿಯ ಕಲ್ಲುಗಳು ನನ್ನ ಕಣ್ಣಿಗೆ ಬೀಳದೇ ಹೋಗಿರಬಹುದು. ಆದ್ದರಿಂದ ಎಚ್ಚರಿಕೆಯಿಂದ ತಿನ್ನಿರಿ' ಎಂದ.

ಅಷ್ಟೇ... ಎಲ್ಲರ ಉತ್ಸಾಹ ಬತ್ತಿ ಹೋಯಿತು. ಬಿರಿಯಾನಿ ತಿನ್ನಲು ಕಾತರದಿಂದ ಕುಳಿತವರೆಲ್ಲರೂ ಪ್ರತಿ ತುತ್ತನ್ನೂ ಬಾಯಿಯಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ತಿನ್ನಲು ಪ್ರಾರಂಭಿಸಿದರು. ಬಾಯಿಗೆ ಕಲ್ಲು ಸಿಕ್ಕದಿದ್ದಾಗ, 'ಅಬ್ಬಾ!' ಎಂದು ಸಮಾಧಾನದ ದನಿ ಎತ್ತುತ್ತಿದ್ದರು. ಅವರು ಆಹಾರದ ಪರಿಮಳ ಅಥವಾ ರುಚಿಗೆ ಗಮನ ಕೊಡಲೇ ಇಲ್ಲ. ಇಂದು ಬಿರಿಯಾನಿಯನ್ನು ಇತರ ದಿನಗಳಿಗಿಂತ ಹೆಚ್ಚು ರುಚಿಕರವಾಗಿ ತಯಾರಿಸಲಾಗಿತ್ತು. ಆದರೆ, ಯಾರೂ ರುಚಿಗೆ ಗಮನ ಕೊಡಲಿಲ್ಲ.

ತಿನ್ನುವ ಮೊದಲು ಕಲಕಲ ಎಂದು ಮಾತನಾಡುತ್ತಿದ್ದ ಅವರು ಯಾರೂ ಈಗ ಏನೂ ಮಾತನಾಡಲಿಲ್ಲ. ಇಡೀ ಗುಂಪು ಮೌನವಾಗಿತ್ತು. 'ಬಾಯಿಗೆ ಕಲ್ಲು ಬರಬಾರದು' ಎಂಬುದು ಅವರ ಕಾಳಜಿಯಾಗಿತ್ತು. ಕೊನೆಯ ಬಾಯಿ ಬಿರಿಯಾನಿ ತಿನ್ನುವವರೆಗೂ ಅವರು ಹಾಗೆಯೇ ಇದ್ದರು.

ಎಲ್ಲರೂ ತಿಂದು ಮುಗಿಸಿ ಕೈತೊಳೆದು ಕುಳಿತಾಗ ಮಾತ್ರ ಯಾರಿಗೂ ಬಿರಿಯಾನಿಯಲ್ಲಿ ಕಲ್ಲು ಸಿಗಲಿಲ್ಲ ಎಂಬುದು ಗಮನಕ್ಕೆ ಬಂತು. ಅವರು ತಕ್ಷಣ ಬಾಣಸಿಗನನ್ನು ಕರೆದರು. ಆತ ಹೇಳಿದ: 'ನನ್ನ ಗಮನಕ್ಕೆ ಬಾರದೆ ಒಂದು ವೇಳೆ ಕೆಲವು ಕಲ್ಲುಗಳು ಬಂದಿರಬಹುದು ಎಂದುಕೊಂಡು ನಾನು ನಿಮಗೆ ಎಚ್ಚರಿಕೆ ನೀಡಿದೆ. ಕಲ್ಲು ಇಲ್ಲ ಎಂದು ತಿಳಿದು ನನಗೆ ಖುಷಿಯಾಗಿದೆ' ಎಂದ.

ಅವರು ಒಬ್ಬರನ್ನೊಬ್ಬರು ನೋಡಿಕೊಂಡರು ಮತ್ತು ಅವರು ಕಲ್ಲಿನ ಬಗ್ಗೆ ಚಿಂತಿಸುತ್ತಾ ತಾವು ಅತ್ಯಂತ ರುಚಿಕರವಾದ ಆಹಾರವನ್ನು ಸವಿದು ಸಂತೋಷದಿಂದ ಸೇವಿಸಿಲ್ಲ ಎಂದು ಅರಿತುಕೊಂಡರು.

ಮಗು ತನ್ನ ಮನಸ್ಸನ್ನು ಅಮೃತಶಿಲೆಯಂತೆ ಇಟ್ಟುಕೊಳ್ಳುತ್ತದೆ ಮತ್ತು ದೋಷರಹಿತವಾಗಿ ನಗುತ್ತದೆ. ಸಂತೋಷವನ್ನು ಅನುಭವಿಸುತ್ತದೆ. ನಾವೂ ಹೀಗೇ ಇರಬೇಕು. ಸಂತೋಷವನ್ನು ಅನುಭವಿಸಲು ನೂರು ಕಾರಣಗಳಿದ್ದರೂ, ಚಿಂತಿಸುವುದಕ್ಕೆ ಒಂದೇ ಒಂದು ಕಾರಣವನ್ನು ನಾವು ಯೋಚಿಸುತ್ತೇವೆ. ಸಂತೋಷಕ್ಕೆ ಕಾರಣಗಳನ್ನು ಹುಡುಕಬೇಕು ಮತ್ತು ಯಾವಾಗಲೂ ಸಂತೋಷದಿಂದ ಇರಬೇಕು. ಜೀವನದಲ್ಲಿ ನೆಮ್ಮದಿಯಾಗಿರಲು ಇರುವ ಸೂತ್ರ ಇದೇ ಆಗಿದೆ.

●

■ ಜೀವನವು ಕಲಿಯುತ್ತಲೇ ಇರಲು ನಮಗೆ ದೊರಕುವ ಒಂದು ಅವಕಾಶ. ಪ್ರತಿ ಕ್ಷಣವೂ ನಾವು ಏನನ್ನಾದರೂ ಕಲಿಯುತ್ತಲೇ ಇರುತ್ತೇವೆ. ಅದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದಾಗಿರಬಹುದು. ಆಯ್ಕೆ ನಮ್ಮದು.

■ ಸಾಗರದಲ್ಲಿ ಅಲೆಗಳು ಬಂದು ದಡಕ್ಕೆ ಅಪ್ಪಳಿಸುತ್ತಿರುವಂತೆಯೇ ಜೀವನವು ಕೂಡ ಸದಾ ಚಲನಶೀಲವಾಗಿರುತ್ತದೆ. ಎಲ್ಲಾ ಅಲೆಗಳೂ ಒಂದೇ ರೀತಿ ಆಗಿರುವುದಿಲ್ಲ. ಒಂದೊಂದು ಅಲೆಯೂ ಹೊಸ ಅನುಭವ ನೀಡುತ್ತದೆ. ಒಂದು ದೊಡ್ಡ ಅಲೆ ಬಂದು ಕರುಣೆಯಿಲ್ಲದೆ ಎಲ್ಲವನ್ನೂ ಮುಳುಗಿಸಿ ಬಿಡಬಹುದು. ಒಂದು ಸೌಮ್ಯವಾದ ಅಲೆಯು ಬಂದು ನಿಮ್ಮ ಕಾಲುಗಳಿಗೆ ಮುತ್ತಿಕ್ಕಿ ಹಿಂದಿರುಗಬಹುದು. ಂಆದರೆ ಯಾವುದೂ ದೀರ್ಘ ಕಾಲ ಇರುವುದಿಲ್ಲ.

■ ಜೀವನ ಎಂಬುದು ನಮಗೆ ಒಂದು ಸುಂದರವಾದ ಉಡುಗ–ೊರೆಯಾಗಿ ದೊರೆತಿದೆ. ಕೆಲವರಿಂದ ಅದನ್ನು ನೂರು ವರ್ಷಗಳವರೆಗೆ ಆನಂದವಾಗಿ ಅನುಭವಿಸಲು ಸಾಧ್ಯ. ಕೆಲವರಿಗೆ 60 ವರ್ಷಗಳು ಕೂಡ ಅದನ್ನು ಅನುಭವಿಸಲು ಅವಕಾಶ ದೊರಕುವುದಿಲ್ಲ. ಆದುದ–ರಿಂದ ನಾವು ಈ ಉಡುಗೊರೆಯನ್ನು ಪ್ರತಿಕ್ಷಣವೂ ಅನುಭವಿಸಿ ಆನಂದಿಸಬೇಕು.

■ ನಮ್ಮ ಜೀವನ ಎಂಬುದು ಕೇವಲ ನಮಗೆ ಮಾತ್ರ ಸಂಬಂಧಿಸಿದ್ದಲ್ಲ. ನಮ್ಮ ಕುಟುಂಬ, ಗೆಳೆಯರು, ಬಂದುಗಳು ಹೀಗೆ ಸುತ್ತಲೂ ಆವರಿಸಿಕೊಂಡಿರುವ ಎಲ್ಲರಿಗೂ ಅದು ಸಂಬಂಧಿಸಿದ್ದಾಗಿದೆ. ನಾವು ಮುಖ್ಯ ಎಂದು ಭಾವಿಸುವ ಪ್ರತಿಯೊಬ್ಬರನ್ನೂ ನಾವು ಅಕ್ಕರೆಯಿಂದ ಗಮನಿಸಿಕೊಳ್ಳಬೇಕು.

■ ಪ್ರತಿ ದಿನವೂ ನಮಗೆ ಹೊಸ ದಿನ. ನಾವು ಆ ದಿನವನ್ನು ಪೂರ್ಣವಾಗಿ ಬದುಕದಿದ್ದರೆ, ನಾವು ಏನು ಕಳೆದುಕೊಂಡಿದ್ದೇವೆ ಎಂಬುದು ನಮಗೇ ತಿಳಿಯುವುದಿಲ್ಲ.

■ ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳಬೇಕು. ಅದನ್ನು ಸುಂದರವಾದು ದ'ನಾ್ನಗಿಂು'ುಱ, ನ'ವ'ು್ಮದಿಂು'ುಾದ'ು ದ'ನಾ್ನಗಿಂು'ುಱ, ಸಂತೋಷದಾಯಕವಾದ ುದಾಗಿಂು'ುಱ ರೂಪಿಸಿಕೊಳ್ಳುವುದು ನಮ್ಮ ಜವಾಬ್ದಾರಿಯೇ ಆಗಿದೆ.

■ ಅನೇಕ ಕೆಟ್ಟ ಅನುಭವಗಳು ನಮ್ಮ ಮನಸ್ಸಿನ ಮೇಲೆ ಶಾಶ್ವತ ಗಾಯಗಳನ್ನು ಉಳಿಸಿ ಬಿಡಬಹುದು. ಆದರೆ ಆ ಕಷ್ಟದ ಕ್ಷಣಗಳಲ್ಲಿಯೂ ಕೆಲವರು ನಮಗೆ ಸಹಾಯ ಹಸ್ತ ಚಾಚುತ್ತಾರೆ. ಆ ಉಪಕಾರಗಳನ್ನು ಸ್ವೀಕರಿಸಿ. ಅಲ್ಲದೆ, ಇತರರ ಕಷ್ಟದ ಸಮಯದಲ್ಲಿ ಅವರಿಗೆ ಸಹಾಯ ಮಾಡುವವರಾಗಿ ನೀವಿರಿ.


■ ನಾವು ಸಮಸ್ಯೆಗಳನ್ನು ಎದುರಿಸಿ ಚೇತರಿಸಿಕೊಂಡಾಗ ಮಾತ್ರ ನಾವು ಎಷ್ಟು ಬಲಶಾಲಿಯಾಗಿದ್ದೇವೆ ಎಂಬುದು ನಮಗೇ ತಿಳಿಯುತ್ತದೆ. ಜೀವನದಲ್ಲಿ ಸವಾಲುಗಳು ನಮ್ಮನ್ನು ಅಸ್ಥಿರಗೊಳಿಸಲು ಬರುವುದಿಲ್ಲ. ಅವು ನಮ್ಮ ಶಕ್ತಿಯನ್ನು ನಾವು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ.

■ ನಮ್ಮ ಬಗ್ಗೆ ನಮಗೆ ತಿಳಿಯದ ಅನೇಕ ವಿಷಯಗಳನ್ನು ಕಾಲಕಾಲಕ್ಕೆ ನಾವು ಅರ್ಥ ಮಾಡಿಕೊಂಡಾಗ ಮಾತ್ರ ನಮಗೆ ಜೀವನದ ಅರ್ಥ ತಿಳಿಯುತ್ತದೆ.

■ ನಾವು ಕನ್ನಡಿಯಲ್ಲಿ ನಮ್ಮ ಮುಖವನ್ನು ನೋಡಿದಾಗ, ಸ್ವತಃ ನಾವೇ ಕಿರಿಕಿರಿ ಅಥವಾ ಖಿನ್ನತೆಗೆ ಒಳಗಾಗುವಂತೆ ನಮ್ಮ ಮುಖ ಇರಬಾರದು. ನಮ್ಮ ಕಣ್ಣುಗಳಲ್ಲಿ ಪ್ರೀತಿ ಮತ್ತು ಸಂತೋಷವನ್ನು ನೋಡಿದಾಗ, ನಾವು ಸಂಪೂರ್ಣವಾಗಿ ಜೀವಂತವಾಗಿದ್ದೇವೆ ಎಂದರ್ಥ.

■ ನಿಮ್ಮ ಜೀವನದುದ್ದಕ್ಕೂ ಯಾರನ್ನಾದರೂ ಅಥವಾ ಯಾವುದನ್ನಾದರೂ ಪ್ರೀತಿಸುತ್ತಿರಿ. ನಿಮ್ಮ ಜೀವನವನ್ನು ಅರ್ಥಪೂರ್ಣವಾಗಿಸುವ ಏಕೈಕ ವಿಷಯವೆಂದರೆ ಆ ಪ್ರೀತಿ.

■ ನಿಮ್ಮ ಜೀವನಕ್ಕೆ ಸಹಾಯ ಮಾಡುವ ಒಂದು ಕೆಲಸವನ್ನು 'ಮಾಡಲು ನನ್ನಿಂದಾಗದು' ಎಂದು ನೀವು ಬಿಟ್ಟುಕೊಡಲು ನೂರು ಕಾರಣಗಳಿರಬಹುದು ಏಕೆಂದರೆ ಅದು 'ಸಾಧ್ಯವಿಲ್ಲ'. ಆದರೆ ನೀವು ಅದನ್ನು ಮಾಡಬಹುದು ಎಂದು ಮೊದಲು ನೀವು ನಂಬಿರಿ. ಸಾಧ್ಯವಿಲ್ಲದುದನ್ನು ಮಾಡಿ ತೋರಿಸಲು ನನ್ನಿಂದ ಸಾಧ್ಯ ಎಂದು ನಂಬಿರಿ. ಆ ನಂಬಿಕೆಯೇ ನೀವು ಎತ್ತರಕ್ಕೆ ಹೋಗಲು ನಿಮಗೆ ನೆರವಾಗುವ ಏಕೈಕ ಕಾರಣವಾಗಿರುತ್ತದೆ. ●



ಆಹಾರ ಸಂಸ್ಕರಣಾ ಕಂಪನಿಯೊಂದರಲ್ಲಿ ಒಬ್ಬ ಯುವಕ ಕೆಲಸ ಮಾಡುತ್ತಿದ್ದ. ನಿರ್ದಿಷ್ಟ ಪ್ರದೇಶದಲ್ಲಿ ಶೈತ್ಯೀಕರಣದ ಉಪಕರಣಗಳಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ಅಲ್ಲಿಗೆ ಹೋಗಿ ಸರಿಪಡಿಸುವುದು ಅವನ ಕೆಲಸ. ಕೆಲವು ನಿಮಿಷಗಳ ವಿಳಂಬವೂ ಕೂಡ ಆಹಾರ ಪದಾರ್ಥಗಳು ವ್ಯರ್ಥವಾಗಲು ಕಾರಣವಾಗಬಹುದು. ಆದುದರಿಂದ ಯಾವಾಗಲೂ ಜಾಗರೂಕವಾಗಿರಬೇಕು. ಏನಾದರೂ ತೊಂದರೆಯಾದರೆ, ಅವನು ಇರುವ ಜಾಗದಲ್ಲಿ ಎಚ್ಚರಿಕೆಯ ಗಂಟೆ ಬಾರಿಸುತ್ತದೆ. ಕೂಡಲೇ ಅಲ್ಲಿಗೆ ಹೋಗಿ ಅವನು ಅದನ್ನು ದುರಸ್ತಿ ಮಾಡಬೇಕು.

ಒಂದು ಸಂಜೆ ಅವನು ತನ್ನ ಕೆಲಸವನ್ನು ಮುಗಿಸುತ್ತಿದ್ದಾಗ, ಇದ್ದಕ್ಕಿದ್ದಂತೆ ಒಂದು ಘಟಕವು ಕೆಟ್ಟು ಹೋಯಿತು. ಅವನು ಅವಸರದಿಂದ ಅಲ್ಲಿಗೆ ಓಡಿದ. ರಿಪೇರಿ ಮುಗಿದು ಶೈತ್ಯೀಕರಣ ಘಟಕವು ಕೆಲಸ ಮಾಡಲು ಪ್ರಾರಂಭಿಸಿದಾಗ ಕೆಲಸದ ಅವಧಿ ಮುಗಿದು ಹೋಗಿತ್ತು. ಸಮಸ್ಯೆ ಬಗೆಹರಿದಿದೆ ಎಂದು ಸಮಾಧಾನ ಪಟ್ಟುಕೊಂಡು, ಕಂಪನಿಯಿಂದ ಅವನು ಹೊರ ಬರಲು ಯತ್ನಿಸಿದರೂ ಸಾಧ್ಯವಾಗಲಿಲ್ಲ.

ಕಂಪನಿಯ ನಿಯಮದ ಪ್ರಕಾರ, ಶೈತ್ಯೀಕರಣ ಪ್ರದೇಶದಲ್ಲಿನ ಎಲ್ಲಾ ಬಾಗಿಲುಗಳೂ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಸ್ವಯಂಚಾಲಿತವಾಗಿ ತೆರೆದುಕೊಂಡು ಮುಚ್ಚಲ್ಪಡುತ್ತವೆ. ಒಳಗಿರುವ ವಸ್ತುಗಳು ಕಳ್ಳತನವಾಗುವುದನ್ನು ತಡೆಯಲು ಈ ಪದ್ಧತಿಯನ್ನು ರೂಢಿಗೆ ತರಲಾಗಿತ್ತು ಮತ್ತು ಆದ್ದರಿಂದ ಈಗ ಬಾಗಿಲು ಮುಚ್ಚಿಕೊಂಡಿತ್ತು. ಲೈಟ್‌ಗಳು ಕೂಡ ಸ್ವಯಂಚಾಲಿತವಾಗಿ ಸ್ವಿಚ್ ಆಫ್ ಆಗಿದ್ದವು. ಅವನು ತನ್ನ ಕೆಲಸದಲ್ಲಿ ಮಗ್ನನಾಗಿದ್ದುದರಿಂದ ಇವ್ಯಾವುದನ್ನೂ ಅವನು ಗಮನಿಸಲಿಲ್ಲ. ಹೀಗಾಗಿ ಈಗ ಅವನಿಂದ ಒಳಗಿನಿಂದ ಬಾಗಿಲು ತೆರೆಯಲು ಸಾಧ್ಯವಿಲ್ಲ. ಒಳಗೆ ದೂರವಾಣಿ ಸೌಲಭ್ಯವೂ ಇರಲಿಲ್ಲ.



ಸೆಲ್ ಫೋನ್‌ಗಳನ್ನು ಕೂಡ ಒಳಗೆ ಅನುಮತಿಸುತ್ತಿರಲಿಲ್ಲ. ಆದ್ದರಿಂದ ಹೊರಬರಲು ಈಗ ಯಾವುದೇ ಅವಕಾಶವಿಲ್ಲ. ಮತ್ತೆ ಬೆಳಿಗ್ಗೆ ಮಾತ್ರ ಕೊಠಡಿಯನ್ನು ತೆರೆಯಲಾಗುತ್ತದೆ.

ಅವನ ಹೃದಯ ಭಯದಿಂದ ಬಡಿಯತೊಡಗಿತು. ಈಗ ಅವನ ಬದುಕುಳಿಯುವ ಏಕೈಕ ಅವಕಾಶವೆಂದರೆ ಹೊರಗಿರುವ ಯಾರಾದರೂ ಭದ್ರತಾ ಕೋಣೆಗೆ ತಿಳಿಸಿ ಅದನ್ನು ತೆರೆಯಲು ಕೀಲಿಯನ್ನು ಪಡೆದುಕೊಳ್ಳುವುದು. ಇಲ್ಲವಾದರೆ ಹೆಪ್ಪುಗಟ್ಟಿ ಇಲ್ಲೇ ಸಾಯಬೇಕಾಗುತ್ತದೆ. ಈ ನಡುಗುವ ಚಳಿಯಲ್ಲಿ ಅವನು ಹೆಚ್ಚೆಂದರೆ ಒಂದು ಗಂಟೆಗಿಂತ ಹೆಚ್ಚು ಕಾಲ ಇರಲಾಗದು. ಗಾಳಿ ಮತ್ತು ಬೆಳಕು ಇಲ್ಲದ ಕೋಣೆಯಲ್ಲಿ ಹಿಮ ಬೇರೆ ತುಂಬಿಕೊಂಡಿದೆ. ಭಯಭೀತನಾಗಿ ಅವನು ದೇವರನ್ನು ಪ್ರಾರ್ಥಿಸುತ್ತಾ ಹಾಗೇ ನೆಲದ ಮೇಲೆ ಉರುಳಿಕೊಂಡ.

ಅರ್ಧ ಗಂಟೆಯ ನಂತರ ಶೈತ್ಯೀಕರಣ ಘಟಕದ ಬಾಗಿಲು ವೇಗವಾಗಿ ತೆರೆಯುವ ಶಬ್ದ ಕೇಳಿಸಿತು. ಅವನಿಂದ ನಂಬಲು ಸಾಧ್ಯವಾಗಲಿಲ್ಲ. ಬಾಗಿಲ ಕಡೆ ನೋಡಿದ. ಕಂಪನಿಯ ಸೆಕ್ಯುರಿಟಿ ಗಾರ್ಡ್ ಒಬ್ಬರು ಕೈಯಲ್ಲಿ ಬ್ಯಾಟರಿಯೊಂದಿಗೆ ಒಳಗೆ ಓಡಿ ಬಂದರು. ಇವನು ಕೈ ಬೀಸಿದಾಗ, ಹತ್ತಿರಕ್ಕೆ ಧಾವಿಸಿ ಬಂದು ಅವನ ಕೈಯನ್ನು ಹಿಡಿದುಕೊಂಡು ಹೊರಗೆ ಕರೆದೊಯ್ದನು.

ಹೊರಗೆ ಬಂದ ಮೇಲೆ ಅವನಿಗೆ ಸಹಜ ಸ್ಥಿತಿಗೆ ಮರಳಲು ಕೆಲವು ನಿಮಿಷಗಳು ಬೇಕಾಯಿತು. ಸೆಕ್ಯೂರಿಟಿಯನ್ನು ಕರೆದು ನಮಸ್ಕರಿಸಿ ಧನ್ಯವಾದಗಳನ್ನು ಅರ್ಪಿಸಿದ. 'ನಾನು ಒಳಗೆ ಸಿಕ್ಕಿಹಾಕಿಕೊಂಡದ್ದು ನಿಮಗೆ ಹೇಗೆ ಗೊತ್ತಾಯಿತು? ನೀವು ನನ್ನನ್ನು ಹೇಗೆ ಉಳಿಸಿದಿರಿ?' ಎಂದು ಅವನು ಅವರನ್ನು ಆಶ್ಚರ್ಯದಿಂದ ಕೇಳಿದ.

ಅದಕ್ಕೆ 'ನಿನ್ನ ಒಳ್ಳೆಯ ಸ್ವಭಾವವೇ ಕಾರಣ' ಎಂದ ಸೆಕ್ಯುರಿಟಿ. ಇವನಿಗೆ ಏನೂ ಅರ್ಥವಾಗಲಿಲ್ಲ. ಆತ ಮುಂದುವರಿಸಿದ: 'ಈ ಕಂಪನಿಯಲ್ಲಿ ನೂರಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೆ. ದಿನವಿಡೀ ಬಾಗಿಲಲ್ಲಿ ಕುಳಿತುಕೊಳ್ಳುವ ಸೆಕ್ಯುರಿಟಿ ಗಾರ್ಡ್ ಕೂಡ ಒಬ್ಬ ಮನುಷ್ಯ ಎಂದು ಬೇರೆ ಯಾರೂ ಭಾವಿಸುವುದಿಲ್ಲ. ಬೆಳಿಗ್ಗೆ ಒಳ ಪ್ರವೇಶಿಸುವಾಗ ಯಾವಾಗಲೂ 'ಗುಡ್ ಮಾರ್ನಿಂಗ್' ಎಂದು ನನಗೆ ಹೇಳುವವರು ನೀವು ಮಾತ್ರ. ನೀವು ಸಂಜೆ ಕೆಲಸದಿಂದ ಮನೆಗೆ ಹಿಂದಿರುಗುವಾಗ ಕೂಡ 'ಬೈ' ಹೇಳಿ ಹೋಗುತ್ತೀರಿ. ಇಂದು ಬೆಳಿಗ್ಗೆಯಿಂದ ನಾನು ಡ್ಯೂಟಿಯಲ್ಲಿದ್ದೇನೆ. ಬೆಳಿಗ್ಗೆ ನೀವು ಒಳ ಬಂದದ್ದು ನನಗೆ ಗೊತ್ತು. ಆದರೆ ಸಂಜೆ ನೀವು ಹೊರಗೆ ಹೋಗಿದ್ದನ್ನು ನಾನು ನೋಡಲಿಲ್ಲ. ಆದುದರಿಂದ ನನಗೆ ಸಂಶಯ ಬಂತು. ನಿಮಗೇನಾಯಿತೋ ಎಂಬ ಸಂಶಯದಿಂದಲೇ ನಿಮ್ಮನ್ನು ಹುಡುಕಿಕೊಂಡು ನಾನು ಅಲ್ಲಿಗೆ ಬಂದೆ. ಒಳ್ಳೆಯ ಸಮಯ, ನಿಮ್ಮನ್ನು ಕಾಪಾಡಲು ಸಾಧ್ಯವಾಯಿತು' ಎಂದ ಸೆಕ್ಯೂರಿಟಿ.

ಹೆಚ್ಚೇನೂ ಪರಿಚಯವಿಲ್ಲದಿದ್ದರೂ ದಿನವೂ ಕಾಣುವ ವ್ಯಕ್ತಿಯನ್ನು ಗೌರವಿಸಿ ನಮಸ್ಕಾರ ಹೇಳುತ್ತಿದ್ದುದು ಹೀಗೆ ಒಂದು ದಿನ ತನ್ನ ಪ್ರಾಣವನ್ನೇ ಉಳಿಸುತ್ತದೆ ಎಂದು ಅವನು ಅಂದುಕೊಂಡಿರಲಿಲ್ಲ. ಒಂದು ಮುಗುಳ್ನಗೆ, ಒಂದು ಶುಭಾಶಯ, ಒಂದು ನಮಸ್ಕಾರ... ಇದಕ್ಕಾಗಿ ಒಂದು ಪೈಸೆಯೂ ಖರ್ಚಾಗುವುದಿಲ್ಲ. ಯಾರನ್ನಾದರೂ ಸರಿಯೇ, ಗೌರವಿಸುವವರಿಗೆ ಗೌರವ ಸಿಗುತ್ತದೆ. ಅಲ್ಲದೆ, ಅವರ ಜೀವನದಲ್ಲಿ ಒಂದು ದಿನ ಇಂತಹ ಯಾವುದಾದರೂ ಪವಾಡ ಸಂಭವಿಸುತ್ತದೆ. ಸಂಬಂಧಿಕರು, ಸ್ನೇಹಿತರ ಜೊತೆ ಮಾತ್ರವಲ್ಲ... ರಸ್ತೆಯಲ್ಲಿ, ರೈಲಿನಲ್ಲಿ,



# ಗೌರವಿಸಿ ಗೌರವ ಪಡೆಯೋಣ!



ಬಸ್ಸಿನಲ್ಲಿ... ಹೊಸದಾಗಿ ನೋಡುವ ವ್ಯಕ್ತಿಗಳಿಗೆ ಗೌರವ ನೀಡುವುದು ನಿಮ್ಮ ಬದುಕಿನ ಪ್ರಯಾಣವನ್ನೇ ಮಧುರವಾಗಿಸಬಹುದು.

ಜೀವನವು ಸಮಸ್ಯೆಗಳಿಂದ ತುಂಬಿದೆ ಎಂದು ನೀವು ಭಾವಿಸಿದರೆ, ನೀವು ಸಮಸ್ಯೆಗಳನ್ನು ಪರಿಹರಿಸುವವರನ್ನಾಗಿ ನಿಮ್ಮನ್ನು ಬದಲಾಯಿಸಿಕೊಳ್ಳಬೇಕು. ನೀವು ಸಂಧಿಸುವ ಸಮಸ್ಯೆಗಳನ್ನು ಪರಿಹರಿಸುವುದೇ ನಿಮ್ಮ ಬದುಕಿನ ಕಾರಣವಾಗಿರಬಹುದು.

ಜೀವನವು ಸಂತೋಷದಿಂದ ತುಂಬಿದೆ ಎಂದು ನೀವು ಭಾವಿಸಿದರೆ, ನೀವು ಸಂತೋಷವನ್ನು ಆನಂದಿಸಲು ಮಾತ್ರ ಹುಟ್ಟಿದ್ದೀರಿ ಎಂದು ನೀವು ತಿಳಿದುಕೊಳ್ಳಬೇಕು. 'ಈ ಜೀವನ ನನಗೆ ಏನನ್ನೋ ಸಾಧಿಸುವುದಕ್ಕಾಗಿಯೇ ದೊರೆತ ಅವಕಾಶ' ಎಂದು ಪರಿಗಣಿಸಿದರೆ ಆ ಸಾಧನೆಯತ್ತಲೇ ನಿಮ್ಮ ಪಯಣ ಮುಂದುವರೆಯಬೇಕು.

ಒಬ್ಬ ಪ್ರಸಿದ್ಧ ವೈದ್ಯರಿದ್ದರು. ಸರ್ಕಾರಿ ಆಸ್ಪತ್ರೆಯಲ್ಲಿ ಬಡವರ ಸೇವೆಯಲ್ಲೇ ಸಂತೃಪ್ತಿಯನ್ನು ಕಾಣುತ್ತಿದ್ದವರು ಅವರು. ಅವರು ಹೃದಯ ಶಸ್ತ್ರಚಿಕಿತ್ಸೆಯಲ್ಲಿ ಪರಿಣಿತರು. ಒಮ್ಮೆ ಅವರು ಪ್ರಾಣಾಪಾಯದಿಂದ ಹೃದಯ ಸ್ತಂಭನದಲ್ಲಿ ತಮ್ಮ ಬಳಿಗೆ ಬಂದ ಆಟೋ ಚಾಲಕನಿಗೆ ತುರ್ತು ಶಸ್ತ್ರಚಿಕಿತ್ಸೆ ಮಾಡಿದರು. ಬದುಕುಳಿದ ನಂತರ ಮನೆಗೆ ಹಿಂದಿರುಗುತ್ತಿದ್ದಾಗ ಆ ಆಟೋಚಾಲಕ ವೈದ್ಯರಿಗೆ ನಮಸ್ಕರಿಸಿ, 'ದೇವರಂತೆ ನನ್ನನ್ನು ಉಳಿಸಿದ್ದೀರಿ. ಮುಂದೊಂದು ದಿನ ನನ್ನ ಪ್ರಾಣವನ್ನು ಕೊಟ್ಟಾದರೂ ನಾನು ನಿಮ್ಮನ್ನು ಉಳಿಸುತ್ತೇನೆ' ಎಂದು ಹೇಳಿ ಹೋದ. 'ಇದೇನು ವಿಚಿತ್ರ ಭರವಸೆ' ಎಂದು ಯೋಚಿಸಿ ವೈದ್ಯರು ನಕ್ಕರು.

ಕೆಲವು ತಿಂಗಳುಗಳ ನಂತರ ಆ ನಗರದಲ್ಲಿ ಒಂದು ದೊಡ್ಡ ಗಲಭೆ ಉಂಟಾಯಿತು. ಊರಿನ ಪರಿಸ್ಥಿತಿ ತಿಳಿಯದೆ ವಿದೇಶಕ್ಕೆ ಹೋಗಿ, ಹಿಂದಿರುಗಿ ಬಂದು ವಿಮಾನ ನಿಲ್ದಾಣದಿಂದ ಮನೆಗೆ ಹಿಂತಿರುಗುತ್ತಿದ್ದ ಆ ವೈದ್ಯರನ್ನು ಗುಂಪೊಂದು ಸುತ್ತುವರಿಯಿತು. ಅವನು ವಿಭಿನ್ನ ಜಾತಿಗೆ ಸೇರಿದವನು ಎಂದು ತಿಳಿದು ಅವರು ಆಯುಧಗಳೊಂದಿಗೆ ಅವರನ್ನು ತಾಕಲು ಬಂದರು. ಇನ್ನು ತನ್ನ ಜೀವನ ಅಷ್ಟೇ. ಇವರ ಕೈಯಲ್ಲಿ ಸಿಕ್ಕಿಬಿದ್ದು ಸಾಯುವುದು ಖಚಿತ ಎಂದು ಡಾಕ್ಟರ್ ಅಂದುಕೊಳ್ಳುತ್ತಿದ್ದಾಗ, ಅಲ್ಲಿಗೆ ಯಾರೋ ಒಬ್ಬ ವ್ಯಕ್ತಿ ಬಂದ. ಆ ಗಲಭೆಕೋರರನ್ನು ಹೆದರಿಸಿ ಜೋರು ದನಿಯಲ್ಲಿ ಮಾತನಾಡಿ ಅವರನ್ನು ಅಲ್ಲಿಂದ ಓಡಿಸಲು ನೋಡಿದ. ಅವರಲ್ಲಿ ಕೆಲವರು ಕೋಪದಿಂದ ಅವನನ್ನು ಹೊಡೆದರು. ಆದರೂ ಅವನು ಅಲ್ಲಿಂದ ಕದಲಲಿಲ್ಲ. ಹಿಂದಿರುಗಿಸಿಕೊಂಡು ಅವರಿಗೇ ಮತ್ತೆ ಮತ್ತೆ ಹೊಡೆದ. ಡಾಕ್ಟರ್‌ಗೆ ಏಟುಗಳು ಬೀಳದ ಹಾಗೆ ಅವರನ್ನು ತನ್ನ ಹಿಂದಿಟ್ಟುಕೊಂಡು, ಗಲಭೆಕೋರರ ಜೊತೆ ಹೋರಾಡಿದ. ಅವರನ್ನು ಬೆನ್ನಟ್ಟಿ ಥಳಿಸಿದ. ತನ್ನ ಪ್ರಾಣವನ್ನು ಪಣಕ್ಕಿಟ್ಟು ಅವರನ್ನು ಸುರಕ್ಷಿತವಾಗಿ ಮನೆಗೆ ಕರೆತಂದು ಬಿಟ್ಟ. ಆತ ಬೇರೆ ಯಾರೂ ಅಲ್ಲ, ಈ ಹಿಂದೆ ಡಾಕ್ಟರ್ ಆಪರೇಷನ್ ಮಾಡಿ ಪ್ರಾಣ ಉಳಿಸಿದ್ದ ಆಟೋ ಚಾಲಕ ಆತ. ಆಪರೇಷನ್ ಮಾಡಿದ ದಿನ ಅವನಿಗೆ ಡಾಕ್ಟರ್, ದೇವರಂತೆ ಕಂಡಿದ್ದರೆ; ಈಗ ವೈದ್ಯರಿಗೆ ಅವನು ದೇವರಂತೆ ಕಾಣುತ್ತಿದ್ದ.


ದೇವರಾಗಲು ಮತ್ತು ದೇವರನ್ನು ಅರಿತುಕೊಳ್ಳಲು ಅವಕಾಶವನ್ನು ಪಡೆಯಿರಿ! ●


RAMRAJ

## ಟ್ಯಾಗೋರ್ ಮೇಲೆ ದಾಳಿ ಮಾಡಿದ ಕವಿಗಳು!

**ಬ**ಂಗಾಳಿ ಸಾಹಿತಿಗಳು ರವೀಂದ್ರನಾಥ ಟ್ಯಾಗೋರ್ ಅವರ ಆರಂಭಿಕ ಕವಿತೆಗಳನ್ನು ಅಷ್ಟು ಬೇಗ ಒಪ್ಪಿಕೊಳ್ಳಲಿಲ್ಲ. 'ಹಣವಿದೆ ಎಂಬ ಕಾರಣಕ್ಕೆ ಕವನ ಬರೆಯುತ್ತಾರೆ, ಪುಸ್ತಕ ಪ್ರಕಟಿಸುತ್ತಾರೆ' ಎಂದು ಲೇವಡಿ ಮಾಡಿದರು. 'ಕವನ ಹೇಗೆ ಬರೆಯಬಾರದು' ಎಂಬುದಕ್ಕೆ ಅಲ್ಲಿನ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಗೆ ಇವರ ಕವಿತೆಗಳನ್ನು ಉದಾಹರಣೆಯಾಗಿ ನೀಡುತ್ತಿದ್ದರು. ಟ್ಯಾಗೋರ್ ತುಂಬಾ ಅವಮಾನಕ್ಕೊಳಗಾದರು.

ಈ ನಿರಾಕರಣೆಯೇ ಅವರ ಪ್ರಯತ್ನಗಳನ್ನು ದೃಢಗೊಳಿಸಿದವು. ಕಾವ್ಯಾತ್ಮಕ ಕೌಶಲ್ಯಗಳನ್ನು ತೀಕ್ಷ್ಣಗೊಳಿಸಿದವು. ಮುಂದೆ ಅವರು ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಭಾರತದಲ್ಲಿ ಮಾತ್ರವಲ್ಲ. ಬಾಂಗ್ಲಾ ದೇಶದಲ್ಲೂ ಅವರು ಬರೆದ ಹಾಡೇ ಇಂದಿಗೂ ರಾಷ್ಟ್ರಗೀತೆಯಾಗಿ ಮೊಳಗುತ್ತಿದೆ!



## ತೆರಿಗೆಯೇ ಕಾರಣ!

**ಬಿ**ಲ್ ನೈಟ್ ಎಂಬ ಅಮೇರಿಕನ್ ಯುವಕ ತನ್ನ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ, ಒಂದು ಕ್ರೀಡಾ ಕಂಪನಿಗೆ ವ್ಯಾಪಾರ ಯೋಜನೆಯನ್ನು ಬರೆದು ಕೊಡುವ ಕೆಲಸಕ್ಕೆ ಸೇರಿಕೊಂಡ. ಬಿಲ್ ನೈಟ್ ಎಂಬ ಅಮೇರಿಕನ್ ಯುವಕ ಅವರ ಯೋಜನೆಯನ್ನು ತಿರಸ್ಕರಿಸಿದ ಕಂಪನಿ, ಅವರನ್ನು ಕೂಡ ಕಂಪನಿಯಲ್ಲಿ ಉಳಿಸಿಕೊಳ್ಳಲು ನಿರಾಕರಿಸಿತು. 'ನಿನಗೆ ತುಂಬಾ ನಾಚಿಕೆಯ ಸ್ವಭಾವ. ನೀನು ವ್ಯಾಪಾರ ಕ್ಷೇತ್ರಕ್ಕೆ ಹೊಂದಿಕೆಯಾಗುವುದಿಲ್ಲ' ಎಂದು ಹೇಳಿ ಅವನನ್ನು ನಿರಾಕರಿಸಲಾಯಿತು.

ಆ ಯುವಕ ಸ್ವಲ್ಪ ಹಣವನ್ನು ಉಳಿಸಿಕೊಂಡು ಜಪಾನ್‌ಗೆ



ಹೋದ. ಆಗ ಜಪಾನಿನಲ್ಲಿ ಟೈಗರ್ ಎಂಬ ಒಂದು ಷೂ ಕಂಪನಿ ಇತ್ತು. ಕ್ರೀಡಾಪಟುಗಳಿಗೆ ಬೂಟುಗಳನ್ನು ತಯಾರಿಸುವುದರಲ್ಲಿ ಇದು ವಿಶ್ವಪ್ರಸಿದ್ಧವಾಗಿತ್ತು. ಆತ ಆ ಕಂಪನಿಗೆ ಹೋಗಿ 15 ಜೋಡಿ ಶೂಗಳಿಗೆ ಆರ್ಡರ್ ಮಾಡಿದ ಮತ್ತು ಅವರ ಶೂಗಳನ್ನು ಅಮೇರಿಕಾದಲ್ಲಿ ಮಾರಾಟ ಮಾಡಲು ಅವರೊಂದಿಗೆ ವ್ಯಾಪಾರದ ಮಾತುಕತೆ ನಡೆಸಿ ಹಿಂದಿರುಗಿದ.

ನಂತರ ಆತ 'ಬ್ಲೂ ರಿಬ್ಬನ್ ಸ್ಪೋರ್ಟ್ಸ್' ಎಂಬ ಅಂಗಡಿಯನ್ನು ಪ್ರಾರಂಭಿಸಿದ. ಆರಂಭದಲ್ಲಿ ಹೆಚ್ಚು ಲಾಭವೇನೂ ಇರಲಿಲ್ಲ. 10 ವರ್ಷಗಳಲ್ಲಿ ಅದು 45 ಜನರಿಗೆ ಉದ್ಯೋಗ ನೀಡುವ ಕಂಪನಿಯಾಗಿ ಅದು ಬೆಳೆಯಿತು. ಕಂಪನಿಯ ಹೆಸರನ್ನು ಚಿಕ್ಕದಾಗಿ ಮತ್ತು ಸುಂದರವಾಗಿ ಬದಲಾಯಿಸುವ ಆಲೋಚನೆ ಆತನಲ್ಲಿ ಮೂಡಿತು. ಯಾರೋ 'ನೈಕ್' ಎಂಬ ಹೆಸರನ್ನು ಸೂಚಿಸಿದರು. ಬಿಲ್ ನೈಟ್‌ಗೆ ಆ ಹೆಸರು ಅಷ್ಟೇನೂ ಇಷ್ಟವಿಲ್ಲದಿದ್ದರೂ ಆ ಹೆಸರನ್ನು ಉಳಿಸಿಕೊಂಡರು.

ಆ ಸಮಯದಲ್ಲಿ ಅವರು ಜಪಾನ್‌ನಿಂದ ಆಮದು ಮಾಡಿಕೊಳ್ಳುವ ವಸ್ತುವಿನ ತೆರಿಗೆಯನ್ನು ಸರಿಯಾಗಿ ಪಾವತಿಸಿಲ್ಲ ಎಂದು ಯುಎಸ್ ಸರ್ಕಾರ ಆರೋಪಿಸಿತು. ಸುಮಾರು 200 ಕೋಟಿ ರೂಪಾಯಿ ತೆರಿಗೆ ಪಾವತಿಸುವಂತೆ ಅವರಿಗೆ ನೋಟಿಸ್ ಕಳುಹಿಸಿತು. ಬಿಕ್ಕಟ್ಟಿನಿಂದ ಹೊರಬರಲು ಬೇರೆ ದಾರಿಯಿಲ್ಲದೆ ಬಿಲ್ ನೈಟ್ ಅಮೇರಿಕಾದಲ್ಲಿ ಸ್ವತಃ ತಾವೇ ಶೂಗಳನ್ನು ತಯಾರಿಸಲು ಪ್ರಾರಂಭಿಸಿದರು. ಕಂಪನಿಯ ಬೆಳವಣಿಗೆಗೆ ಅವರು ತಯಾರಿಸಿದ ನೈಕ್ ಶೂಗಳು ಕಾರಣವಾದವು. ಇಂದು, 'ನೈಕ್' ಕಂಪನಿಯು ವಿಶ್ವದ ಪ್ರಮುಖ ಕ್ರೀಡಾ ಸರಕುಗಳನ್ನು ಉತ್ಪಾದಿಸುವ ಪ್ರಮುಖ ಕಂಪನಿಯಾಗಿದೆ. 56 ಸಾವಿರ ಮಂದಿ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬಿಲ್ ವಿಶ್ವದ ಅಗ್ರ 25 ಶ್ರೀಮಂತರಲ್ಲಿ ಒಬ್ಬರಾಗಿದ್ದಾರೆ.

ಅವನು ಬಯಸಿದ ಕೆಲಸ ಅವರಿಗೆ ಸಿಕ್ಕಿದ್ದರೆ ಅಥವಾ ತೆರಿಗೆ ಪಾವತಿಸಲು ಯಾವುದೇ ನೋಟೀಸ್ ಅವರಿಗೆ ಬಾರದೇ ಹೋಗಿದ್ದರೆ... ಇಂದು 'ನೈಕ್' ಕಂಪನಿಯೇ ಇರುತ್ತಿರಲಿಲ್ಲ.

## ಶಕ್ತಿ ತಂದ ಬದಲಾವಣೆ!



ಓಪ್ರಾ ವಿನ್‌ಫ್ರೇ ಒಂದು ದೂರದರ್ಶನದಲ್ಲಿ ಸಂಜೆ ಸುದ್ದಿ ಓದುವ ನಿರೂಪಕಿಯಾಗಿದ್ದರು. ಆಕರ್ಷಕವಾಗಿ ಸುದ್ದಿ ಓದುವುದಕ್ಕೆ ಬದಲಾಗಿ ಭಾವನಾತ್ಮಕವಾಗಿ ಸುದ್ದಿಗಳನ್ನು ಓದುತ್ತಿದ್ದಾರೆ ಎಂದು ಆರೋಪಿಸಿ ಕಂಪನಿಯು ಅವರಿಗೆ ಆ ಕೆಲಸ ನೀಡಲು ನಿರಾಕರಿಸಿತು. ಅವರನ್ನು ಕೆಲಸದಿಂದ ತೆಗೆಯುವ ಬದಲಿಗೆ, ಹಗಲು ಹೊತ್ತಿನ ಯಾವುದೋ ಒಂದು ಸಾಮಾನ್ಯ ಕಾರ್ಯಕ್ರಮಕ್ಕೆ ಅವರನ್ನು ಮೇಲ್ವಿಚಾರಕರನ್ನಾಗಿ ನೇಮಿಸಲಾಯಿತು. ಯಾರೂ ನೋಡದ ಆ ಕಾರ್ಯಕ್ರಮವನ್ನು ಅವರಿಗೆ ವಹಿಸಿಬಿಟ್ಟರು. ತನಗೆ ಇಷ್ಟವಿಲ್ಲದಿದ್ದರೆ ಆತ ಆ ಕೆಲಸ ಬಿಡುತ್ತಾನೆ ಎಂದುಕೊಂಡರು.

ಮನಸ್ಸಿಗೆ ನೋವಾದರೂ ಕೂಡ, ಓಪ್ರಾ ತುಂಬ ಭಾವನಾತ್ಮಕವಾಗಿ ಹಗಲಿನ ಆ ಕಾರ್ಯಕ್ರಮವನ್ನು ಆಯೋಜಿಸಲು ಪ್ರಾರಂಭಿಸಿದಳು. ಅನೇಕ ಜನರು ಅತಿಥಿಗಳಾಗಿ ಬಂದು ಆ ಕಾರ್ಯಕ್ರಮದಲ್ಲಿ ಮುಕ್ತವಾಗಿ ಮಾತನಾಡಿದರು. ಮುಂದೆ ಇದು ವಿಶ್ವದ ಅತ್ಯಂತ ಜನಪ್ರಿಯ ಪ್ರದರ್ಶನವಾಯಿತು. ಇಂದು, ಓಪ್ರಾ ವಿನ್‌ಫ್ರೇ ಯುನೈಟೆಡ್ ಸ್ಟೇಟ್ಸ್‌ನ ಆಚೆಗೂ ಮನೆಮನೆಯ ಹೆಸರಾಗಿದ್ದಾಳೆ.



## ಮಕ್ಕಳ ಹೀರೋ!

ವಾಲ್ಟ್ ಡಿಸ್ನಿಯನ್ನು ತನ್ನ ಪತ್ರಿಕೆಯ ಕೆಲಸದಿಂದ ವಜಾಗೊಳಿಸಲಾಯಿತು, 'ಅವರಿಗೆ ಯಾವುದೇ ಕಲ್ಪನಾ ಸಾಮರ್ಥ್ಯವಿಲ್ಲ. ಯಾವುದೋ ಒಳ್ಳೆಯ ಐಡಿಯಾಗಳನ್ನು ಅವರು ನೀಡುತ್ತಿಲ್ಲ' ಎಂದು ಅವರ ಮೇಲೆ ಆಪಾದಿಸಲಾಯಿತು. ಅಲ್ಲಿಂದ ಹೊರ ಬಂದ ಅವರು ಒಂದು ಅನಿಮೇಷನ್ ಸ್ಟುಡಿಯೊವನ್ನು ಪ್ರಾರಂಭಿಸಿದರು. ಸಾಲದ ಬಿಕ್ಕಟ್ಟಿನಿಂದಾಗಿ ಆ ಸಂಸ್ಥೆ ದಿವಾಳಿಯಾಯಿತು.

ಅದರ ನಂತರ, ತನ್ನ ಸಹೋದರನ ಚಿಕಿತ್ಸೆಗಾಗಿ ಕ್ಯಾಲಿಫೋರ್ನಿಯಾಗೆ ಬಂದ ವಾಲ್ಟ್ ಡಿಸ್ನಿ, ಹಾಲಿವುಡ್ ಚಲಚಿತ್ರಗಳಲ್ಲಿ ಅವಕಾಶಕ್ಕಾಗಿ ಹುಡುಕಾಡಿದರು. ಅವರು ನಿರ್ಮಿಸಿದ ಮೊದಲ ಅನಿಮೇಟೆಡ್ ಚಲನಚಿತ್ರವನ್ನು ಯಾರೂ ಕೊಳ್ಳಲಿಲ್ಲ. ಇದು ಕೆಲವು ವರ್ಷಗಳ ನಂತರ ಬಿಡುಗಡೆಯಾದಾಗ, ಇದು ಮಕ್ಕಳಿಗೆ ತುಂಬ ಇಷ್ಟವಾಗಿಬಿಟ್ಟಿತು. ಅದರ ನಂತರ ಅವರು ನಿರ್ಮಿಸಿದ 'ಮಿಕ್ಕಿ ಮೌಸ್' ವಿಶ್ವಪ್ರಸಿದ್ಧವಾಯಿತು. 22 ಆಸ್ಕರ್ ಪ್ರಶಸ್ತಿಗಳನ್ನು ಗೆದ್ದ ನಿರ್ಮಾಪಕ ಎಂಬ ಅವರ ದಾಖಲೆಯನ್ನು ಇಂದಿಗೂ ಯಾರೂ ಮೀರಿಸಲು ಸಾಧ್ಯವಾಗಿಲ್ಲ. ಅವರು ರಚಿಸಿದ ಡಿಸ್ನಿ ಥೀಮ್ ಪಾರ್ಕ್‌ಗಳು ಅವರ ಕಲ್ಪನೆಯ ಪರಾಕಾಷ್ಠೆಗಳಾಗಿವೆ.

## ಎತ್ತಿ ಎಸೆದ ಕಾರಣದಿಂದ ಬೆಳೆದರು!



ಅಮೆರಿಕದ ನ್ಯೂಯಾರ್ಕ್ ನಗರದ ಮೈಕೆಲ್ ಬ್ಲೂಮ್ ಬರ್ಗ್ ತನ್ನ ಸ್ನೇಹಿತರೊಂದಿಗೆ ಹೂಡಿಕೆ ಬ್ಯಾಂಕ್ ನಡೆಸುತ್ತಿದ್ದ. ಒಂದು ಸಿಟಿ ಬ್ಯಾಂಕ್ ಗ್ರೂಪ್ ಈ ಸಣ್ಣ ಬ್ಯಾಂಕ್ ಅನ್ನು ಖರೀದಿಸಿತು. ನಂತರ ಮೊದಲ ಕೆಲಸವಾಗಿ ಆ ಕಂಪನಿಯಿಂದ ಬ್ಲೂಮ್‌ಬರ್ಗ್ ಅವರನ್ನು ತೆಗೆದು ಹಾಕಲಾಯಿತು. ಬ್ಲೂಮ್‌ಬರ್ಗ್ ಅಲ್ಲಿಂದ ಹೊರಬಂದು, ಸ್ವಂತ ಹಣಕಾಸು ಸಂಸ್ಥೆಯನ್ನು ಆರಂಭಿಸಿದರು. ಮುಂದೆ ಇದು ಸಿಟಿಗ್ರೂಪ್‌ಗಿಂತ ದೊಡ್ಡದಾಗಿ ಬೆಳೆಯಿತು.

ಇವರ ಬ್ಲೂಮ್‌ಬರ್ಗ್ ಸಂಸ್ಥೆಯಲ್ಲಿ ಹಣವನ್ನು ಹೂಡದ ಹೂಡಿಕೆದಾರರು ಇಂದು ಅಮೆರಿಕದಲ್ಲಿ ಇಲ್ಲ ಎಂದೇ ಹೇಳಬಹುದು. ಅವರು ವಿಶ್ವದ 16ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಬಹುಶಃ ಅವರನ್ನು ವಜಾಗೊಳಿಸದಿದ್ದರೆ ಸಿಟಿಗ್ರೂಪ್‌ನ ಅಧಿಕಾರಿಯಾಗಿಯೇ ನಿವೃತ್ತರಾಗುತ್ತಿದ್ದರೋ, ಏನೋ!


RAMRAJ

# ನಿಮ್ಮ ಹೃದಯದಲ್ಲೂ ದೀಪಾವಳಿಯನ್ನು ಆಚರಿಸಿ!



ಬದಲಾವಣೆಗಳಿಗೆ ನಾವು ನಮ್ಮನ್ನು ಹೊಂದಿಸಿಕೊಳ್ಳಬೇಕಾದುದು ತುಂಬಾ ಅವಶ್ಯಕ. ಇಲ್ಲದಿದ್ದರೆ, ನಮ್ಮ ಮತ್ತು ನಮ್ಮ ಮಕ್ಕಳ ನಡುವಿನ ಅಂತರವು ಹೆಚ್ಚಾಗುತ್ತದೆ. ಅದೇ ಸಮಯದಲ್ಲಿ, ಈ ಬದಲಾವಣೆಗಳು ನಮ್ಮ ಸಾಂಪ್ರದಾಯಿಕ ಹೆಮ್ಮೆಯನ್ನು ನುಂಗಿ ಹಾಕುವುದಿಲ್ಲ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಮುಂದಿನ ಪೀಳಿಗೆಗೆ ಅದರ ಮಹತ್ವವನ್ನು ತಿಳಿಸುವುದು ಸಹ ಅಷ್ಟೇ ಮುಖ್ಯವಾಗಿದೆ. ನಮ್ಮ ಹಬ್ಬಗಳು ನಮ್ಮ ಪರಂಪರೆಯ ಪ್ರತೀಕ.

'ಯಾವುದಕ್ಕೂ ಸಮಯವಿಲ್ಲ' ಎನ್ನುವ ಈ ಕಾಲದಲ್ಲಿ ಹಬ್ಬಗಳು ನಮಗೆ ವಿರಾಮ ಮತ್ತು ವಿಶ್ರಾಂತಿಯನ್ನು ನೀಡುತ್ತವೆ. ಓಟವನ್ನು ಗೆಲ್ಲುವ ಏಕೈಕ ಮಾರ್ಗವೆಂದರೆ ವೇಗವಾಗಿ ಓಡುವುದು. ಆದರೆ ಮಾನವ ಜೀವನವು ಕೇವಲ ಓಟವಲ್ಲ. ಆಚರಣೆಗಳು ಜೀವನವನ್ನು ಮಧುರಗೊಳಿಸುತ್ತವೆ. ಹಬ್ಬಗಳು ಕೆಲವೇ ಕೆಲವು ವ್ಯಕ್ತಿಗಳಿಗೆ ಮಾತ್ರ ಸಂತೋಷವನ್ನು ತರುವುದಿಲ್ಲ. ಅವು ಸಮಾಜದ ಎಲ್ಲರಿಗೂ ಸಂತೋಷವನ್ನು ನೀಡುತ್ತವೆ.

ನಮ್ಮ ಹಬ್ಬಗಳಲ್ಲಿ ದೀಪಾವಳಿ ವಿಶಿಷ್ಟವಾದುದು. ಪವಿತ್ರ ದೀಪಾವಳಿಯು ಮಕ್ಕಳಿಂದ ದೊಡ್ಡವರವರೆಗೆ ಎಲ್ಲರಿಗೂ ಸಂತೋಷವನ್ನು ನೀಡುತ್ತದೆ. 'ದೀಪಾವಳಿಯು ನಮ್ಮ ಮನೆಗಳಲ್ಲಿ ಒಳ್ಳೆಯತನದ ಬೆಳಕು ಹರಡಲಿ' ಎಂದು ಆಶಿಸುವ ಹಬ್ಬವಾಗಿದೆ.

'ದೀಪಂ' ಎಂದರೆ 'ದೀಪ' ಎಂದರ್ಥ. 'ಅವಲಿ' ಎಂದರೆ 'ಗುಂಪು' ಎಂದರ್ಥ. ದೀಪಾವಳಿಯ ದಿನ ಮನೆಯನ್ನು ದೀಪಗಳ ಸಾಲುಗಳಿಂದ ಅಲಂಕರಿಸಿ. ಕತ್ತಲೆಯನ್ನು ಹೋಗಲಾಡಿಸಿ ಮನೆಯನ್ನು ಪ್ರಕಾಶಮಾನವಾಗಿ ಮಾಡುತ್ತಾರೆ. ಇದೇ ರೀತಿಯಾಗಿ ಎಲ್ಲರ ಮನದಲ್ಲೂ ಇರುವ ಕತ್ತಲು. ಅಹಂಕಾರ, ಅಸೂಯೆ, ಕ್ರೋಧ ಮುಂತಾದ ಕೆಟ್ಟ ಗುಣಗಳನ್ನು ಸುಡಬೇಕು. ಮನಸ್ಸಿನೊಳಗಿರುವ ಅಜ್ಞಾನದ ಅಂಧಕಾರವನ್ನು ಸುಜ್ಞಾನದ ಬೆಳಕಿನಿಂದ ಓಡಿಸುವುದೇ ದೀಪಾವಳಿಯ ತತ್ವ. ಇಡೀ ಮನೆಯನ್ನು ಬೆಳಗಿಸಿ, ಮನಸ್ಸನ್ನು ಮಾತ್ರ ಕತ್ತಲಲ್ಲಿಡಬೇಡಿ. ಅದರ ಹೆಸರು ದೀಪಾವಳಿ ಅಲ್ಲ. ದೀಪಾವಳಿ ಎಂದರೆ ಮನಸ್ಸಿನಲ್ಲಿರುವ ಕೊಳೆ ತೆಗೆದು ಮನಸ್ಸಿನಲ್ಲಿ ದೀಪ ಹಚ್ಚುವುದು.

ನಾವು ಪವಿತ್ರರಾಗಲು ಪಟಾಕಿಗಳನ್ನು ಸ್ಫೋಟಿಸುತ್ತೇವೆ. ಅಂದರೆ ಕೆಲವು ವಸ್ತುಗಳನ್ನು ನಾಶ ಮಾಡಲು ಅವುಗಳನ್ನು ಬೆಂಕಿಗೆ ಹಾಕುತ್ತೇವೆ ಅಲ್ಲವೇ? ಹಾಗೆಯೇ ನಮ್ಮ ಮನಸ್ಸಿನಲ್ಲಿರುವ ಕೆಟ್ಟ ಆಲೋಚನೆಗಳನ್ನು ಸ್ಫೋಟದಂತೆ ಚದುರಿಸಬೇಕು ಎಂಬುದರ ಸಂಕೇತವಾಗಿಯೇ ಪಟಾಕಿಗಳನ್ನು ಸಿಡಿಸುವುದು.

ಅದಕ್ಕಾಗಿಯೇ ದೀಪಾವಳಿಯಂದು ಮುಂಜಾನೆ ಮಾಡುವ ಸ್ನಾನವನ್ನು 'ಗಂಗಾ ಸ್ನಾನ' ಎಂದು ಕರೆಯಲಾಗುತ್ತದೆ. ಆ ದಿನ ಗಂಗಾಸ್ನಾನ ಮಾಡಿ ಪುನೀತರಾಗುತ್ತೇವೆ. ಈ ಸ್ನಾನ ಮಾಡುವ ಮೂಲಕ ನಮ್ಮ ಮನಸ್ಸು ಕೂಡ ನಮ್ಮ ದೇಹದಂತೆ ಶುದ್ಧವಾಗುವ ಕಾರಣದಿಂದಲೇ ಅದಕ್ಕೆ 'ಗಂಗಾ ಸ್ನಾನ' ಎಂದು ಹೆಸರು.

'ದೀಪಾವಳಿಯಂದು ನಾವು ಬಳಸುವ ಎಣ್ಣೆಯಲ್ಲಿ ದೇವಿ ಲಕ್ಷ್ಮಿ ಇರುತ್ತಾಳೆ. ಸೀಗೆಕಾಯಿಯಲ್ಲಿ ಸರಸ್ವತಿ, ಶ್ರೀಗಂಧದಲ್ಲಿ ಭೂಮಿದೇವಿ ಮತ್ತು ಗಂಧದಲ್ಲಿ ಗೌರಿ ಇರುತ್ತಾರೆ. ಹೂವುಗಳಲ್ಲಿ ಅಪ್ಸರೆಯರೂ, ನೀರಿನಲ್ಲಿ ಗಂಗೆ, ಹೊಸ ಬಟ್ಟೆಗಳಲ್ಲಿ ಮಹಾ ವಿಷ್ಣು, ಔಷಧದಲ್ಲಿ ಧನ್ವಂತರಿಯೂ, ಸಿಹಿತಿಂಡಿಗಳಲ್ಲಿ ಅಮೃತ, ದೀಪದಲ್ಲಿ ಪರಮಾತ್ಮನೂ, ಬೆಂಕಿಯ ಕಿಡಿಗಳಲ್ಲಿ ಜೀವಾತ್ಮನೂ ಅವರು ನಮ್ಮ ಕುಟುಂಬವನ್ನು ಕತ್ತಲೆಯಿಂದ ಬೆಳಕಿನೆಡೆಗೆ ತರುತ್ತಾರೆ' ಎಂದು ಸನಾತನ ಋಷಿಗಳು ದೀಪಾವಳಿ ಪೂಜೆಗಳ ಬಗ್ಗೆ ಉಪದೇಶಿಸಿದ್ದಾರೆ.

ಬಡವರಿರಲಿ, ಶ್ರೀಮಂತರಿರಲಿ, ಮಕ್ಕಳಿರಲಿ, ದೊಡ್ಡವರಿರಲಿ, ಎಲ್ಲರ ಮನದಲ್ಲೂ ದೀಪಾವಳಿಯ ಸಂಭ್ರಮ ಆವರಿಸಿರುತ್ತದೆ. ಹೊಸ ಉಡುಪನ್ನು ಹಾಕಿಕೊಂಡು, ಸಿಹಿ ತಿಂಡಿ ಸೇವಿಸಿ, ಪಟಾಕಿ ಸಿಡಿಸಿ, ಅತಿಥಿಗಳು–ಸ್ನೇಹಿತರೊಂದಿಗೆ ದೀಪಾವಳಿಯನ್ನು ಆಚರಿಸೋಣ.



Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL



Inners for Winners

RAMRAJ

VESTS

BRIEFS • TRUNKS

Uplift your spirit from Within

Through celebrations and challenges, feel the comfort and confidence all day long.
Unleash your true self with Ramraj Banians.

Shreyas Iyer - Cricketer

SCAN QR CODE FOR STORE LOCATION

SUKRA® SUPER FINE COTTON VESTS | RISE-UP® Premium Banians | ROMEX® BANIANS | BRIEF | TRUNKS | COMPACT® PREMIUM COTTON RIB VESTS | Breeze® Eye Let Vests | WinStripe® STRIPED BANIANS | ARCHERY® Gym Vest | ACOSTE® BANIANS | BRIEF | TRUNKS

suriya® RICH COTTON BRIEF | udaya® RICH COTTON BRIEF | minar® FINE COTTON BRIEF | merc® MERCERISED BRIEF | target® FINE TRUNKS | softex® FINE TRUNKS | imaxs® RIB TRUNKS | ARROW® RIB TRUNKS | VINTRACK® FINE TRUNKS

Available @ Ramraj Showrooms & All leading textile shops | Shop online @ www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-10-2024 Posted at Tirupur BPC on 5th of every month.

